ಕರ್ನಾಟಕ
ಲೋಚನ

ಸಂಪುಟ ೫ ಡಿಸೆಂಬರ್ ೧೯೯೨ ಸಂಚಿಕೆ ೧

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು-560 019.

'ಕರ್ನಾಟಕ ಲೋಚನ'

ಸಂಪಾದಕ ಮಂಡಲಿ

ಎನ್. ಬಸವಾರಾಧ್ಯ (ಅಧ್ಯಕ್ಷರು). ಟಿ. ಕೇಶವ ಭಟ್ಟ (ಸಂಪಾದಕರು). ಎನ್.ಎಸ್. ರಾಮಸ್ವಾಮಿ ಅಯ್ಯರ್ (ಸಹಾಯಕ ಸಂಪಾದಕರು).

ಸದಸ್ಯರು : ಪ್ರೊ॥ ಜಿ. ವೆಂಕಟಸುಬ್ಬಯ್ಯ, ಡಾ॥ ಪಿ. ವಿ. ನಾರಾಯಣ ಡಾ॥ಎಂ. ಚಿದಾನಂದಮೂರ್ತಿ, ಪ್ರೊ॥ಗರ್ಗೇಶ್ವರಿ ವೆಂಕಟಸುಬ್ಬಯ್ಯ. ಪ್ರೊ॥ ಎಲ್ ಎಸ್. ಶೇಷಗಿರಿರಾವ್, ಕೆ.ಆರ್. ಗಣೇಶ ಬೆಂಗಳೂರು ; ಡಾ॥ ಆರ್. ಶೇಷಶಾಸ್ತ್ರಿ ಅನಂತಪುರ, ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರಿ ಮೈಸೂರು, ಎಸ್.ಪಿ. ಪಾಟೀಲ ಧಾರವಾಡ, ಡಾ॥ ಶ್ರೀನಿವಾಸ ಹಾವನೂರ ಪುಣೆ, ಡಾ॥ ಶ್ರೀ ಕೃಷ್ಣಭಟ್ ಅರ್ತಿಕಜೆ ಮದರಾಸು, ಡಾ॥ ಬಿ. ರಾಮಚಂದ್ರರಾವ್ ಹೈದರಾಬಾದ್, ಪ್ರೊ॥ ವಸಂತ ಕುಷ್ಟಗಿ, ಗುಲ್ಬರ್ಗ.

ಲೇಖನಗಳು–ಟಿಪ್ಪಣಿಗಳು

ಸಂಶೋಧನಾತ್ಮಕ ಪಾಂಡಿತ್ಯಪೂರ್ಣ ಲೇಖನಗಳು ಹಾಗೂ ಹೊಸದಾಗಿ ಪ್ರಕಟವಾಗುವ ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರಸಾಹಿತ್ಯದ ಗ್ರಂಥ ಗ್ರಂಥಗಳು - ಇವುಗಳ ಮೇಲಣ ವಿಮರ್ಶೆಗಳು, ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ ಇವುಗಳಿಗೆ ಸಂಬಂಧಿಸಿದ ಟೀಕೆ ಟಿಪ್ಪಣಿಗಳು – ಇವುಗಳಿಗೆ 'ಲೋಚನ' ಮೀಸಲಾಗಿದೆ.

ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬುದಾರರು; ಅವು ಅವಶ್ಯವಾಗಿ ಪ್ರತಿಷ್ಠಾನದ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಎಂದು ತಿಳಿಯತಕ್ಕದ್ದಲ್ಲ.

ಲೇಖನಗಳಿಗೆ ಆಹ್ವಾನ

ಮೇಲ್ಕಂಡ ವಾಕ್ಯವೃಂದದಲ್ಲಿ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾಗಿ ಲೇಖನಗಳನ್ನು ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳೂ ಕಳಿಸಿಕೊಡಬೇಕೆಂದು ವಿನಂತಿ. 'ಲೋಚನ'ದ ಗಾತ್ರ ಪರಿಮಿತವಾದದ್ದರಿಂದ ಲೇಖನಗಳು ಅಚ್ಚಿನ 6–8 ಪುಟಗಳ ಪರಿಮಿತಿಯಲ್ಲಿ ಇದ್ದರೆ ಅನುಕೂಲ. ಲೇಖನಗಳು ಹಾಳೆಯ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿ ಟಿಪ್ಪಣಿಗಳನ್ನು ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ-ಲೇಖನಾಧಾರ ವಿವರಗಳನ್ನು (Bibliography) ಲೇಖನದ ಕಡೆಯಲ್ಲಿ ಕೊಡಬಹುದು. ಲೇಖನವನ್ನು ಹಿಂದಿರುಗಿಸಲಾಗದ್ದರಿಂದ ಲೇಖಕರು ತಮ್ಮ ಲೇಖನದ ಒಂದು ಪ್ರತಿಯನ್ನು ಉಳಿಸಿಕೊಂಡಿರಬೇಕಾಗಿ ಕೋರಿಕೆ.

ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ
ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ,
54, 3ನೇ ಕ್ರಾಸ್, ಗವಿಪುರ ವಿಸ್ತರಣ, ಬೆಂಗಳೂರು–19

ಸಂಪಾದಕರು : ವಿದ್ವಾನ್ ಟಿ. ಕೇಶವ ಭಟ್ಟ
ಸಹಾಯಕ ಸಂಪಾದಕರು : ಎನ್. ಎಸ್. ರಾಮಸ್ವಾಮಿ ಅಯ್ಯರ್

ಸಂಪುಟ 5 ಡಿಸೆಂಬರ್ 1992 ಸಂಚಿಕೆ 2

ಪರಿವಿಡಿ

Karnataka Lochana

Half-Yearly Journal, Published by B. M. Sri Memorial Foundation, 54, 3rd Cross, Gavipura Extension Bangalore-560 019.

Chairman, Editorial Board : *Sri N. Basavaradhya*

Editor : *Vidvan T. Keshva Bhat*

Vol. V *December 1993* *No. 2*

CONTENTS

ಪಂಜೆ ಮಂಗೇಶರಾಯರ ಕಾವ್ಯ ವ್ಯಕ್ತಿತ್ವ*

— **ದೇಶ ಕುಲಕರ್ಣಿ**

ಸಂಪ್ರದಾಯವಲ್ಲದ ರೀತಿಯಲ್ಲಿ ಪ್ರಾರಂಭಿಸುತ್ತೇನೆ. ನಾನು ಹುಟ್ಟಿದ ವರ್ಷದ ಹಿಂದಿನ ವರ್ಷವೇ ಪಂಜೆ ಮಂಗೇಶರಾಯರು ಕಾಲವಾಗಿದ್ದರು. ಆದುದರಿಂದ ಅವರ ಬಾಹ್ಯರೂಪದ ಭೌತಿಕ ಪರಿಚಯ (ಇಲ್ಲವೇ ಸ್ವರೂಪ) ನನ್ನ ತಲೆಮಾರಿನವರಿಗೆ ಸಾಧ್ಯವಾಗದ ಮಾತಾಗಿತ್ತು ಆದರೆ ಇದು ಕೊರತೆಯೇ ಅಲ್ಲ ಎನ್ನುವ ಹಾಗೆ, ನಮಗೆ ಪ್ರಾಥಮಿಕ ಶಿಕ್ಷಣದಲ್ಲಿ ಪಠ್ಯವಾಗಿರಿಸಿದ್ದ ಅವರ ಪದ್ಯಗಳು ಅವರ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತಿದ್ದುವು. ಕೇವಲ ಒಂದು ಕವನವು ತನ್ನ ಅರ್ಥಸಾಮರ್ಥ್ಯದಿಂದ ಕವಿಯ ಸ್ವರೂಪವನ್ನು ನಿರ್ದಿಷ್ಟಗೊಳಿಸಲಾರದು ಎಂಬುದಾಗಿ ಬುದ್ಧಿ ಬಂದ ಮೇಲೆ ಹೊಳೆಯಬಹುದು. ಆದರೆ ನಮಗೆ ಅರಿವೇ ಇಲ್ಲದ ಹಾಗೆ ಆ ಪದ್ಯಗಳ ನಾದಲೀಲೆಯು ನಮ್ಮನ್ನು ಆ ವಯಸ್ಸಿಗೇ ಲೋಲುಪರನ್ನಾಗಿ ಮಾಡಿಬಿಟ್ಟಿತು. ನಮ್ಮ ಮನಸ್ಸಿನಲ್ಲೆಲ್ಲ ಆಗ ಪದ್ಯದ ಕನಸು ಕುಣಿದಾಡುತ್ತಿತ್ತು. ಪಠ್ಯದಲ್ಲಿಯೇ ಅಲ್ಲದೆ ಮನೆಯಲ್ಲೂ ಪದ್ಯದ ಹಾಡಿಕೆ; ಪದ್ಯದ ವಾಚನವಲ್ಲ ಎಂಬುದನ್ನು ಗಮನಿಸಬೇಕು. ರೂಢಿಯ ಒಂದು ಮಟ್ಟಿನಲ್ಲಿ ಪದ್ಯಗಳನ್ನು ರಾಗವಾಗಿ ಒಪ್ಪಿಸುತ್ತಿದ್ದೆವು. ವರ್ಷ ವರ್ಷ ಬಾಲಕರು ಪರೀಕ್ಷೆಗೆ ಮುಂಚೆ ಶಾಸ್ತ್ರೀಯವಾಗಿ ಮಾಡುತ್ತಿದ್ದ ಸರಸ್ವತೀ ಪೂಜೆಯಲ್ಲೂ ಕೂಡ 'ದೇವಿ ಭುವನ ಮನಮೋಹಿನೀ' ಎಂಬ ಯಥಾಪ್ರಕಾರದ ಹಾಡಿಗೆ ಬದಲಾಗಿ ನಾನು ನಮಗಿರಿಸಿದ್ದ ಷಟ್ಪದಿ ಕಾವ್ಯದಿಂದ ಎರಡು-ಮೂರು ಪದ್ಯಗಳನ್ನು ಹೇಳಿ ವರಪ್ರಸಾದವನ್ನು ಪಡೆದೆ. ಎರಡನೆಯ ಕ್ಲಾಸಿನ ರೀಡರಿನಲ್ಲಿ ಪಂಜೆಯವರ **ಹಾವಿನ ಹಾಡು** ಅಥವಾ **ನಾಗರಹಾವು** ಪಠ್ಯವಾಗಿತ್ತು. ಮುಂದೆ ಕ್ರಮವಾಗಿ **ಉದಯರಾಗ**, **ತೆಂಕಣ ಗಾಳಿಯಾಟ** ಮತ್ತು **ಹುತ್ತರಿ ಹಾಡು** ಮುಂದಿನ ತರಗತಿಗಳಲ್ಲಿ ಬರತೊಡಗಿದವು.

ಈಗಲೂ ಈ ಕವನಗಳು ನನಗೆ ಬಾಲಿಶವಾಗಿ ಕಾಣುತ್ತಿಲ್ಲ. ಯಾಕೆಂದರೆ— ಅವು ಸೋದ್ದಿಶ್ಯವಾದ ಬಾಲಗೀತಗಳೇ! ಶಿಶುಪ್ರಾಸಗಳು ಒಂದು ಕಡೆಯಾದರೆ ಪ್ರೌಢ ಕಾವ್ಯಗಳು ಇನ್ನೊಂದು ಕಡೆ. ಈ ಎರಡೂ ಕಡೆಗಳ ನಡುವಿನ ಅಗಾಧ ಕಂದರವನ್ನು ಯಾವ ರೀತಿಯ ಕಾವ್ಯ ತುಂಬಬೇಕು ಎಂದು ಯೋಚಿಸಿ. ನಾನು ಮೇಲೆ ಹೇಳಿದ ನಾದಲೀಲೆಯೇ ಇಂಥ ಕಂದರವನ್ನು ತುಂಬಬೇಕಾಗಿತ್ತು. ಪಂಜೆಯವರ ಹಾವಿನ

---

* 22-7-92ರಂದು ನಡೆದ ವೆಂಕಟರಂಗಪ್ಪ ಮತ್ತು ಜಿ. ಪಿ. ರಾಜರತ್ನಂ ಸ್ಮಾರಕ ದತ್ತಿ ಉಪನ್ಯಾಸ.

ಹಾಡನ್ನು ಕೇಳಿದರೆ ಈ ಮಾತಿನ ಅರ್ಥ ಸ್ಪಷ್ಟವಾಗುತ್ತದೆ. ಈ ಪದ್ಯವನ್ನು ಬರೆದಾಗ ಅವರ ಮನಸ್ಸಿನಲ್ಲಿ ಯಾವ ರಾಗ ಮೂಡಿತ್ತೋ ನಮಗೆ ಗೊತ್ತಿಲ್ಲ. ಆದರೆ ಮನೆಯಲ್ಲಿ ಒಂದು ನಿರ್ದಿಷ್ಟ ಮಟ್ಟಿನಲ್ಲಿಯೇ ಇದನ್ನು ಹೇಳಿಕೊಡುತ್ತಿದ್ದರು.

ಹಾವಿನ ಹಾಡು

ನಾಗರ ಹಾವೆ! ಹಾವೊಳು ಹೂವೆ
ಬಾಗಿಲ ಬಿಲದಲಿ ನಿನ್ನಯ ಠಾವೆ
ಕೈಗಳ ಮುಗಿವೆ ಹಾಲನ್ನೀವೆ
ಬಾಬಾ ಬಾಬಾ ಬಾಬಾ ಬಾಬಾ

ಹಳದಿಯ ಹೆಡೆಯನು ಬಿಚ್ಚೋ ಬೇಗಾ
ಹೊಳಹಿನ ಹೊಂದಲೆ ತೂಗೋ ನಾಗಾ
ಕೊಳಲನ್ನೂದುವೆ ಲಾಲಿಸು ರಾಗಾ
ನೀನೀ ನೀನೀ ನೀನೀ ನೀನೀ

ಎಲೆ ನಾಗಣ್ಣಾ! ಹೇಳಲೊ ನಿನ್ನಾ
ತಲೆಯಲಿ ರನ್ನವಿಹ ನಿಜವನ್ನಾ
ಬಲುಬಡವಗೆ ಕೊಪ್ಪರಿಗೆಯ ಚಿನ್ನಾ
ತಾತಾ ತಾತಾ ತಾತಾ ತಾತಾ

ಬರಿಮೈ ತಣ್ಣಗೆ ಮನದಲಿ ಬಿಸಿ ಹಗೆ
ಎರಡೆಳೆ ನಾಲಗೆ ಇದ್ದರು ಸುಮ್ಮಗೆ
ಎರಗುವೆ ನಿನಗೇ ಈಗಲೆ ಹೊರಗೇ
ಪೋಪೋ ಪೋಪೋ ಪೋಪೋ ಪೋಪೋ

ಈಗಲೂ ಇದು ಯಾಕೆ ಬಾಲಿಶವಲ್ಲ ಎಂದು ಬಹುಶಃ ನಿಮಗೆ ಗೊತ್ತಾಗಿರಬಹುದು. ಈಗ ಬರುತ್ತಿರುವ ಶಿಶುಸಾಹಿತ್ಯದ ಕವನಗಳಿಗೆ ಇದನ್ನು ಹೋಲಿಸಿದರೆ ನಿಜವಾದ ಕಾವ್ಯಲಕ್ಷಣಗಳು ಇನ್ನೂ ಸ್ಪಷ್ಟವಾಗಿ ಗೊತ್ತಾಗುತ್ತವೆ. ಪಂಜೆಯವರ ಕಾವ್ಯದ ಎಲ್ಲ ಮುಖ್ಯ ಲಕ್ಷಣಗಳೂ ಈ ಹಾಡಿನಲ್ಲಿ ಪ್ರತಿಬಿಂಬಿತವಾಗಿವೆ. ಇದು ಬಾಲಗೀತವಾದರೂ ಈ ದೃಷ್ಟಿಯಲ್ಲಿ ಪ್ರಾತಿನಿಧಿಕವೇ. ಪ್ರಕೃತಿ ಅವರಿಗೆ ಪ್ರಿಯವಾದ ವಸ್ತು. ಪ್ರಕೃತಿಯಂತೆಯೇ ಚಂಚಲನಾದ ಹಾವು ಹರಿದಾಡುವ ಸೌಂದರ್ಯ, ಅದರಲ್ಲಿರುವ ಅಪಾಯವನ್ನು ಮರೆಮಾಚಿಬಿಡುತ್ತದೆ. ಇಷ್ಟಾಗಿಯೂ ಅದು ದೂರದ ಮೋಹ. ಸಾಕಿದ ನಾಯಿ ಬೆಕ್ಕುಗಳನ್ನು ತಬ್ಬಿಕೊಳ್ಳುವಂತೆ ಹಾವನ್ನು ತಬ್ಬಿಕೊಳ್ಳಲಾರೆವು. ಪಂಜೆಯವರ ಕಾವ್ಯದ ಒಂದು ಮುಖ್ಯ ನೆಲೆ ಬೋಧಪ್ರದ ನೀತಿ. ಅವರಎಲ್ಲ

ಕಾರ್ಯ ವೈಖರಿಗೂ ಶಿಕ್ಷಣವೇ ಗುರಿ. ನಾಗರಹಾವನ್ನು ಕುರಿತ ಎಲ್ಲ ಪ್ರತೀತಿಗಳನ್ನೂ ನಾಲ್ಕು ಪದ್ಯಗಳಲ್ಲಿ ಹೇಳಿಬಿಟ್ಟಿರುವ ಆ ಚೊಕ್ಕರೀತಿ ಸಾಮಾನ್ಯವಾದುದೇನಲ್ಲ. ಹೆಡೆ ಅರಳಿಸುವಾಗಿನ ಅದರ ಹೂವಿನಂಥ ಸೌಂದರ್ಯ, ರಾಗಕ್ಕೆ ಮಾರು ಹೋಗುವ ಅದರ ತೂಗು-ತಲೆ, ಹೆಡೆಯ ಮೇಲಿರುವ ರತ್ನ ಅಲ್ಲದೆ ಯಾವುದೋ ಗುಪ್ತನಿಧಿಯನ್ನು ಅದು ಕಾಯುತ್ತಿರುತ್ತದೆ, ಪಾತ್ರನಾದವನಿಗೆ ಆದನ್ನು ನೀಡುತ್ತದೆ ಎಂಬ ಐತಿಹ್ಯ, ಶತ್ರುತ್ವವನ್ನು ಸೇಡನ್ನು ಸಾಧಿಸುವ ಛಲ— ಈ ನಾಗಪ್ರತೀತಿಗಳನ್ನು ಪ್ರಬಂಧವಲ್ಲದ ಪ್ರಬಂಧ ರೀತಿಯಲ್ಲಿ ಆರೆಂಟು ಮಾತುಗಳಲ್ಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ. ಶೈಲಿಯನ್ನು ಗಮನಿಸಿ : ದ್ವಿತೀಯ ಪ್ರಾಸವನ್ನು ಬಿಟ್ಟು ಕೊಟ್ಟಿಲ್ಲ. ಅಲ್ಲದೆ ಪಂಕ್ತಿಯೊಳಗಡೆ ಬರುವ ಅಂತಃಪ್ರಾಸಗಳು ರಾಗದಿರವನ್ನು ಇನ್ನಷ್ಟು ಬಿಗಿಗೊಳಿಸುತ್ತವೆ. ಇಷ್ಟಾಗಿಯೂ ನಾಗರಹಾವನ್ನು ಪೂಜಿಸುವ ಪದ್ಧತಿಯನ್ನೂ ಮರೆತಿಲ್ಲ. ಹಾಲಿನ ನೈವೇದ್ಯ, ಎರಗುತ್ತ ಕೈ ಮುಗಿವ ಪೂಜೆ ಮತ್ತು ಅದು ಹೊರಗೆ ಹೋಗಬೇಕೆಂಬ ಬೇಡಿಕೆ ಕವನವನ್ನು ಪೂರ್ತಿಮಾಡುತ್ತವೆ. ಬಾಬಾ, ನೀನೀ, ತಾತಾ, ಪೋಪೋ ಈ ದೀರ್ಘಗಳು ಈ ಕವನದ ನಾವೀನ್ಯವಷ್ಟೇ ಅಲ್ಲ, ಪಲ್ಲವಿಯಿಲ್ಲದ ಕೊರತೆಯನ್ನೂ ಅವು ನೀಗಿವೆ. ಮತ್ತು ಪದ್ಯದಿಂದ ಪದ್ಯಕ್ಕೆ ಸಂಬಂಧವನ್ನು ಸ್ಥಾಪಿಸುತ್ತ ಬಂದು ಇಡಿ ಕವನದ ಸ್ವರೂಪವನ್ನು ತಂದುಕೊಡುತ್ತವೆ. ಬರಿಮೈ ತಣ್ಣಗೆ ಮನದಲಿ ಬಿಸಿ ಹಗೆ ಎರಡೆಳೆ ನಾಲಗೆ—ಹೀಗೆ ಹೇಳುವಾಗ ಪಂಜೆಯವರು ಸೂಚ್ಯವಾಗಿ ಇಂಗ್ಲಿಷ್ ಪ್ರಭುತ್ವದ ದ್ವಂದ್ವ ನೀತಿಯನ್ನು ಕುರಿತು ಬರೆಯುತ್ತಿರಬಹುದು ಎಂಬ ಮಾತೂ ಇದೆ. ನಾನು ವಿವರಿಸಿರುವ ಗೀತದ ಹಿನ್ನೆಲೆಯಲ್ಲಿ ಈ ದೃಷ್ಟಿ ಅಸಮ್ಮತವೆಂದು ಕಾಣುತ್ತದೆ. ಪಂಜೆಯವರ ಕವನದಲ್ಲಿ ಪದಶಕ್ತಿಯಲ್ಲಿಯೇ ಧ್ವನಿಯಿದೆಯೇ ಹೊರತು ಇಡಿಯಾಗಿ ಪ್ರಬಂಧ ಧ್ವನಿ ಎಂಬುದು ಹೊರಡುವುದಿಲ್ಲ.

ಪಂಜೆಯವರ ವಿಶಿಷ್ಟತೆ ಅವರನ್ನು ಕುರಿತ ಲೆಜೆಂಡುಗಳಲ್ಲಿವೆ. ನಾಗರಹಾವು ಕವನದ ವಿಷಯವಾಗಿಯೇ ಎರಡು ಪ್ರಸಂಗಗಳಿವೆ. ಪಂಜೆಯವರು ವೃತ್ತಿಯಲ್ಲಿ ಶಿಕ್ಷಕರು (ತದನಂತರ ಸ್ಕೂಲ್ ಇನ್‌ಸ್ಪೆಕ್ಟರ್ ಆದರು). ಮೊದಲ ಬಾರಿಗೆ ಈ ಪದ್ಯವನ್ನು ತಮ್ಮ ತರಗತಿಯಲ್ಲಿ ಪಾಠ ಮಾಡುವಾಗ ಒಂದು ವಿಚಿತ್ರ ವೈಖರಿಯಲ್ಲಿ ಇದನ್ನು ಹೇಳಿಕೊಡುತ್ತ ಮಕ್ಕಳನ್ನು ದಂಗುಪಡಿಸಿದರು. ತಮ್ಮ ಯಥಾಪ್ರಕಾರದ ಕಚ್ಚೆಪಂಚೆ, ಕೋಟು, ಪಾಗು, ವಲ್ಲಿ ಸಮೇತರಾಗಿ ಮಕ್ಕಳಿಗೆ ಕಾಣದೆ ಬಾಗಿಲ ಬಳಿಯಲ್ಲಿ ನಿಂತು, ಅವರಿಗೆ ಸುಳಿವೇ ಕೊಡದೆ ಅಲ್ಲಿಂದ ಹಾವು ತನ್ನ ಹೆಡೆಯಿಂದ ಸಟಕ್ಕನೆ ಅಪ್ಪಳಿಸುವೋಪಾದಿಯಲ್ಲಿ, ವೇದಿಕೆಗೆ ಹಾರಿ, ಹಾಡುತ್ತ ತಲೆಯನ್ನೂ ಮೈಯನ್ನೂ ತೂಗಿಸುತ್ತ ನಾಗರಹಾವನ್ನು ಅಭಿನಯಿಸಿ ತೋರಿಸಿದರು. ಪಾಠ ಹೇಳುವ ವಿಷಯದಲ್ಲಿ ಪಂಜೆಯವರು ಬರೆದ ಒಂದು ಲೇಖನದಲ್ಲಿ 'ವಸ್ತುಗಳನ್ನು ತಂದು ತೋರಿಸಿದರೆ ಮಾತ್ರವೇ ವಿಷಯವು ಸರಿಯಾಗಿ ಮನಸ್ಸಿಗೆ ಹಿಡಿಯುತ್ತದೆ'

ಎಂದು ಹೇಳಿದ್ದಾರೆ. ಮಕ್ಕಳ ಸುದೈವದಿಂದ ಇದನ್ನು ಅಕ್ಷರಶಃ ಪಾಲಿಸಲಾಗಲಿಲ್ಲ; ಅಭಿನಯದಲ್ಲಿ ಪಾಲಿಸಲಾಯಿತು. ಇನ್ನೊಂದು ಪ್ರಸಂಗ : ಇವರ ರಚನೆಯನ್ನು ಕುರಿತಾದುದು. ಕಾಸರಗೋಡಿನಲ್ಲಿ ಅವರು ಇದ್ದ ಕಾಲದಲ್ಲಿ ಅವರ ಮನೆಗೆ ಒಬ್ಬ ಹಾವಾಡಿಗನು ಬಂದು ಹಾವಿನ ಆಟ ತೋರಿಸಿದ. ಏಳೆಂಟು ದಿನ ಕಳೆದ ಮೇಲೆ ಪಂಜೆಯವರು ಶತಪಥ ಹಾಕುತ್ತಾ ತಮ್ಮಲ್ಲೇ ಗುರುಗುಟ್ಟುತ್ತಿದ್ದರು. ಮಕ್ಕಳು ಏನೆಂದು ಕೇಳಿದರೂ ಹೇಳುತ್ತಿರಲಿಲ್ಲ. ಬಳಿಕ ಆ ಹಾವಾಡಿಗ ಇನ್ನೊಮ್ಮೆ ಬಂದ. ಆಗ ಆ ಹಾಡನ್ನು ಹೇಳಿದನಂತೆ. ವಿ.ಸೀ. ಪಂಜೆಯವರ ಪರಮ ಮಿತ್ರರು. ಅವರು ಈ ಪ್ರಸಂಗವನ್ನು ದಾಖಲಿಸಿದ್ದಾರೆ. ಆ ಹಾಡಿನ ಪ್ರತಿ ಪದ್ಯದ ಕೊನೆಗೂ ಪುಂಗಿ ಬಾಜನೆಯ ನಾದ ವಿಲಾಸದ ರಮಣೀಯತೆ ಇದೆ ಎಂತಲೂ ವಿ.ಸೀ. ಹೇಳುವಾಗ ಪುಂಗಿಯ ಉಲ್ಲೇಖ ಎಷ್ಟೊಂದು ಉಚಿತ ಎನಿಸುತ್ತದೆ.

೨

ಪಂಜೆಯವರ ಕಾವ್ಯದ ಇನ್ನಷ್ಟು ಲಕ್ಷಣಗಳಿಗಾಗಿ ಮತ್ತು ಅದರ ಇನ್ನೊಂದು ನೆಲೆಗಾಗಿ ಉದಯರಾಗ ಎಂಬ ಕವನವನ್ನು ನೋಡಬಹುದು. ಮೂಡುವನು ರವಿ ಮೂಡುವನು ಎಂಬ ಹೆಸರಿನಿಂದಲೇ ಇದು ಖ್ಯಾತಿ ಪಡೆದಿತ್ತು. ಇದನ್ನು ವಿವರವಾಗಿ ಓದುತ್ತಿರುವುದು ಕಾಲಹರಣಕ್ಕಲ್ಲ. ಅದರ ಸ್ಥಾಪನೆಯ ಸ್ಪಷ್ಟ ಉದ್ದೇಶಕ್ಕಾಗಿ.

ಉದಯ ರಾಗ

ಮೂಡುವನು ರವಿ ಮೂಡುವನು; ಕತ್ತಲೊಡನೆ ಜಗಳಾಡುವನು;
ಮೂಡಣ ರಂಗಸ್ಥಳದಲಿ ನೆತ್ತರು ಮಾಡುವನು, ಕುಣಿದಾಡುವನು.

ಬೆಳಕಿನ ಕಣ್ಣುಗಳಿಂದಾ ಸೂರ್ಯನು ನೋಡುವನು, ಬಿಸಿಲೂಡುವನು;
ಚಿಳಿಪಿಳಿ ಹಾಡನು ಹಾಡಿಸಿ, ಹಕ್ಕಿಯ ಗೂಡಿನ ಹೊರ ಹೊರದೂಡುವನು.

ಬಂಗಾರದ ಚೆಲು ಬಿಸಿಲ ಕಿರೀಟದ ಶೃಂಗಾರದ ತಲೆ ಎತ್ತುವನು;
ತೆಂಗಿನ, ಕಂಗಿನ, ತಾಳೆಯ, ಬಾಳೆಯ ಅಂಗಕೆ ರಂಗನು ಮೆತ್ತುವನು.

ಮಾಡಿನ ಹುಲ್ಲಲಿ ಚಿನ್ನದ ಗೆರೆಯನು ಎಳೆಯುವನು ರವಿ ಹೊಳೆಯುವನು;
ಕೂಡಲೆ ಕೋಣೆಯ ಕತ್ತಲೆ ಕೊಳೆಯನು ತೊಳೆಯುವನು
ರವಿ ಹೊಳೆಯುವನು.

ಮಲಗಿದ ಕೂಸಿನ ನಿದ್ದೆಯ ಕಸವನು ಗುಡಿಸುವನು, ಕಣ್ ಬಿಡಿಸುವನು;
ಹುಲು, ಗಿಡ, ಹೂವಿಗೆ ಪರಿಪರಿ ಬಣ್ಣದ ಉಡಿಸುವನು, ಹಸಿ ತೊಡಿಸುವನು.

ಏರುವನು, ರವಿ, ಏರುವನು ; ಬಾನೊಳು ಸಣ್ಣಗೆ ತೋರುವನು ;
"ಏರಿದವನು ಚಿಕ್ಕವನಿರಬೇಕೆಲೆ", ಎಂಬಾ ಮಾತನು ಸಾರುವನು.

ಈ ಕವನದ ವಸ್ತು ಸೂರ್ಯೋದಯ ನಿಸರ್ಗದ ಒಂದು ಮುಖ್ಯ ಪ್ರಕ್ರಿಯೆ. ವಸ್ತು ಪಂಜೆಯವರ ಪ್ರಿಯ ಪ್ರಕೃತಿಯೇ ಆದರೂ ಅದಕ್ಕೆ ಅವರು ಕೊಡುವ ವಿತರಣಕ್ರಿಯೆ ಭಿನ್ನವಾದುದು. ರೂಢಿಯ ದ್ವಿತೀಯಾಕ್ಷರ ಪ್ರಾಸವೂ ಇದೆ ಅಂತ್ಯಪ್ರಾಸವೂ ಇದೆ, ಯಮಕ ಅಲಂಕಾರದ ಮಾಲೆ ಮಾಲೆಯೇ ಇದೆ. ಅದರ ರಚನೆ ಮಾತ್ರ ಆರು ದ್ವಿಪದಿಗಳಲ್ಲಿ ಹರಡಿಕೊಂಡಿದ್ದು, ಗಜಲ್ ಸ್ವರೂಪಕ್ಕೆ ಹತ್ತಿರವಾಗುವಂತಿದೆಯೋ ಎಂದು ಅನುಮಾನ ಬರುವ ಹೊತ್ತಿಗೆ ಪಲ್ಲವಿ ಇರದ ಅಪವಾದ ತೋರಿ ಬರುತ್ತದೆ. ರವಿ ಮೂಡುವ ಕ್ರಿಯೆಯಲ್ಲಿ ಕತ್ತಲೆಯೊಡನೆ ಜಗಳಾಡುವ ಮಾತಿದೆಯಷ್ಟೆ ? ಈ ಪ್ರತಿಮೆಯು ಸುಸಂಬದ್ಧವಾಗಿ ಕವನದುದ್ದಕ್ಕೂ ಸ್ಥಾಪನೆಯಾಗುತ್ತ ಹೋಗುತ್ತದೆ. ಅಷ್ಟೇ ಅಲ್ಲ, ನಾಟಕವೆಂಬಂತೆ ರಂಗಸ್ಥಳ, ಆ ಜಗಳದಲ್ಲಿ ಉಂಟಾದ ರಕ್ತಪಾತ (ನೆತ್ತರು) ಮತ್ತು ವಿಜಯಿಯಾದ ಮೇಲೆ ಕುಣಿದಾಟ ಮತ್ತು ಇದಾದ ನಂತರ ಸೂರ್ಯ ರಾಜ್ಯಭಾರದ ಬೆಳಕಿನಲ್ಲಿ ಬದುಕಿಗೆ ಬರುವ ಬಣ್ಣ, ಕತ್ತಲೆಯನ್ನು ಕಳೆಯುವುದು, ನಿದ್ದೆಯನ್ನು ಕಳೆದು ಕಣ್ಣು ತೆರೆಸುವುದು ಇವೆಲ್ಲ ಕ್ರಮವಾಗಿ ನಿಧಾನವಾಗಿ ಬರುತ್ತವೆ. ಕಡೆಗೆ ರವಿ ಬಾನಿನಲ್ಲಿ ಏರುತ್ತ ಏರುತ್ತ ಸಣ್ಣದಾಗಿ ತೋರುವಾಗ ಒಂದು ಸಂದೇಶವನ್ನು ಕೊಡುವ ಹಾಗೆ 'ಏರಿದವನು ಚಿಕ್ಕವನಿರ-ಬೇಕೆಲೆ' ಅನ್ನುವ ವಿನಯದ ನೀತಿಯನ್ನು ಸಾರುತ್ತಾನೆ. ವಿಜಯದ ಯಾವುದೇ ಪ್ರಸಂಗಕ್ಕೆ ಈ ವಿನಯ ಉದಾತ್ತತೆಯನ್ನು ನೀಡುವುದಷ್ಟೆ ? ಈ ಸಂದೇಶ ಬಂದ ಮಾತ್ರಕ್ಕೆ ಕವನದ ಶಿಲ್ಪ ಕೆಟ್ಟಿದೆಯೆಂದು ನಾನು ಅಂದುಕೊಂಡಿಲ್ಲ. ನೀತಿಯ ನೆಲೆಗಟ್ಟಿಲ್ಲದೆ ಪಂಜೆಯವರ ಕಾವ್ಯವಿಲ್ಲ. ಆದರೆ ಈ ನೆಲೆಯಿಂದ ಹೊರಟು ಕೂಡ ಅತ್ಯಂತ ಸುಸೂತ್ರವಾದ ಶಿಲ್ಪವನ್ನು ತನ್ನ ವಿಧಾನದಿಂದ ಉಳಿಸಿಕೊಂಡಿರುವುದರ ಕಾರಣ, ಈ ಕವನ ನನಗೆ ಮುಖ್ಯವಾಗಿ ತೋರುತ್ತದೆ.

ಹೀಗೆ ಈ ಕವನ ನನಗೆ ಮುಖ್ಯವೆಂದು ಕಾಣುವುದಕ್ಕೆ ಇನ್ನೂ ಒಂದು ಕಾರಣ ಇದೆ. ಸೂರ್ಯೋದಯದ ಮೇಲೆಯೇ ಪಂಜೆಯವರು ಬರೆದ ಇನ್ನೆರಡು ಕವನಗಳಿವೆ :

ಇಂಬಾಗಿ ನಗುನಗುವ ಮುಂಬಿಸಿಲ ಮೋರೆಯಲಿ
ಅಂಬುಜಸಖಂ ಬಂದನಂಬರದಲಿ
ತುಂಬಿದ್ದ ಬಲು ಕತ್ತಲೆಂಬ ಕಂಬಳಿ ಕಳಚಿ
ಚೆಂಬೆಳಕ ಹಾಸಿನಿಂದುಪ್ಪವಡಿಸಿ

ಎಂದು ಪ್ರಾರಂಭವಾಗುವ 'ಸೂರ್ಯ' ಕವನವು ಪಂಡಿತ ರಚನೆಯಾಗಿದೆ.

ಕೆಂಪಿನ ಓಕುಳಿ ಸ್ನಾನದಲಿ
ಇಂಪಿನ ಕೋಗಿಲೆ ಗಾನದಲಿ
ಬಾಸಿನ ಗದ್ದಿಗೆ ಏರಿದನು
ಭಾನುವು ಹೊಂದಲೆ ತೋರಿದನು

ಎಂದು ಪ್ರಾರಂಭವಾಗುವ 'ಸೂರ್ಯೋದಯ' ಕವನವು ಸಾಮಾನ್ಯ ರಚನೆಯಾಗಿದೆ. ಸೂರ್ಯೋದಯದ ವಸ್ತು ಪಕ್ವವಾಗಿರುವುದು ಮೂಡುವನು ಪದ್ಯದಲ್ಲಿಯೇ. ಮಾತುಗಳ ಪುನರುಕ್ತಿಯೇ ಅಲ್ಲದೆ ನೂಲು ಕಡಿದು ಹೋಗದಂತೆ ಅವನ್ನು ಮತ್ತೆ ಮತ್ತೆ ಎತ್ತಿಕೊಳ್ಳುವುದು (ಕತ್ತಲೆ ಕೊಳೆಯನು ತೊಳೆಯುವವನು, ರವಿ ಹೊಳೆಯುವನು; ಪರಿ ಪರಿ ಬಣ್ಣವ ಉಡಿಸುವನು, ಹನಿ ತೊಡಿಸುವನು) ಕವನಕ್ಕೆ ಗೀತಾತ್ಮಕತೆಯನ್ನು ತಂದುಕೊಟ್ಟಿದೆ.

೩

ನೀತಿಯು ನೆಲೆಗಟ್ಟಲ್ಲದೆ ಪಂಜೆಯವರ ಕಾವ್ಯವಿಲ್ಲ ಎಂದು ಹೇಳಿದೆನಲ್ಲವೆ? ಇದಕ್ಕೂ ಒಂದು ಅಪವಾದವಿದೆ. ಮತ್ತು ಅಪವಾದವು ಯಾವತ್ತಿಗೂ ನಿಯಮವನ್ನು ಪುಷ್ಟೀಕರಿಸಲೆಂದೇ ಹುಟ್ಟಿಕೊಳ್ಳುತ್ತದೆ. ಇದು ನಮ್ಮನ್ನು ಪಂಜೆಯವರ ಕಾವ್ಯದ ಇನ್ನೊಂದು ನೆಲೆಗೆ ಕರೆದೊಯ್ಯುತ್ತಿದೆ. ನಾನು ಈಗ ಉದ್ಧರಿಸುವ ಕವನ 'ತೆಂಕಣ ಗಾಳಿಯಾಟ'. ಇದು ನಿಸರ್ಗದ ಇನ್ನೊಂದು ಲೀಲೆ. ಈ ಕವನವನ್ನು ಓದದೆ ನಾವು ಮುಂದೆ ಹೋಗುವಂತಿಲ್ಲ. ಹೋದರೂ ಆ ಬಿರುಗಾಳಿಯ ಭರ ನಮ್ಮನ್ನು ತಡೆದು ತಲೆ ತಾಟಾಡಿಸಿಬಿಡುತ್ತದೆ.

ತೆಂಕಣ ಗಾಳಿಯಾಟ

ಬರಲಿದೆ! ಅಹಹಾ! ದೂರದಿ ಬರಲಿದೆ—

ಬುಸುಗುಟ್ಟುವ ಪಾತಾಳದ ಹಾವೋ?
ಹಸಿವಿನ ಭೂತದ ಕೂಯುವ ಕೂವೋ?
ಹೊಸತಿದು! ಕಾಲನ ಕೋಣನ, ಓ! ಓ!
—ಉಸುರಿನ ಸುಯ್ಯೋ? ಸೂಸೂಕರಿಸುತ,

ಬರುವುದು! ಬರಬರ ಭರದಲಿ ಬರುವುದು!—

ಬೊಬ್ಬೆಯ ಹಬ್ಬಿಸಿ ಒಂದೇ ಬಾರಿಗೆ,
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ,

ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ,
ಅಬ್ಬರದಲಿ ಭೋರ್ – ಭೋರನೆ ಗುಮ್ಮಿಸಿ

ಬರುತದೆ! ವೈಶೋಂದೆ ಬರುತದೆ, ಅದೆ! —

ನಡು ಮುರಿಯುತ ನಗ ನಾವೆಗೆ, ಕೂವೆಗೆ
ಉಡಿಸಿದ ಹಾಯಿಯು ಹರಿಯುತ ಬಿರಿಯುತ
ಹಡಗನು ಕೀಲಿಸಿ, ತುಮುರನು ತೀಲಿಸಿ,
ದಡದಲಿ ಝಾಡಿಸಿ, ದೋಣಿಯನಾಡಿಸಿ,

ಇದೆ ಇದೆ! ಬರುತಿದೆ! ಇದೆ ಇದೆ, ಬರುತಿದೆ!

ಹಕ್ಕಿಯು ಕಣ್ಣಿಗೆ ಧೂಳಿನ ಕಾಡಿಗೆ
ಇಕ್ಕುತ, ಹೊಲದೆತ್ತಿಗೆ ದನಕಾಡಿಗೆ
ಫಕ್ಕನೆ ಹಟ್ಟಿಗೆ ಅಟ್ಟಿಸಿ, ಕಾಡಿಗೆ
ಸಿಕ್ಕದ ಕಿಚ್ಚನು ಊದಲು ಹಾರುತ

ಬರುತಿದೆ, ಇದೆ ಇದೆ! ಇದೆ ಇದೆ ಬರುತಿದೆ! —

ಸಡಲಿಸಿ ಮಡದಿಯುರುಡಿಯನು ಮುಡಿಯನು,
ಬಡ ಮುದುಕರ ಕೊಡೆಗರಿ ಹರಿದಾಡಿಸಿ,
ಹುಡುಗರ ತಲೆ ತಲೆ ಟೊಪ್ಪಿಯ ಆಟವ
ದಡಬಡನಾಡಿಸಿ, ಮನೆ ಮನೆ ತೋಟವ
ಅಡಿ ಮೇಲಾಗಿಸಿ, ತೆಂಗನು ಲಾಗಿಸಿ,
ಅಡಕೆಯ ಬಾಗಿಸಿ, ಪನೆ ಇಬ್ಭಾಗಿಸಿ
ಬುಡದೂಟಾಡಿಸಿ, ತಲೆ ತಾಟಾಡಿಸಿ
ಗುಡಿಸಲ ಮಾಡನು ಹುಲು ಹುಲು ಮಾಡಿಸಿ,

ಬಂತೈ! ಬಂತೈ! ಇದೆ ಇದೆ! ಬಂತೈ! —

ಗಿಡಗಿಡದಿಂ ಚಲು ಗೊಂಚಲು ಮಿಂಚಲು,
ಮಿಡಿಯನು, ಹಣ್ಣನು ಉದುರಿಸಿ ಕೆದರಿಸಿ,
ಎಡದಲಿ ಬಲದಲಿ, ಕೆಲದಲಿ ನೆಲದಲಿ,
ಪಡುವಣ ಮೋಡವ ಬೆಟ್ಟಕೆ ಘಟ್ಟಕೆ
ಹೊಡೆದಟ್ಟುವ ಕೋಲ್ ಮಿಂಚನು ಮಿರುಗಿಸಿ,
ಗುಡುಗನು ಗುಡುಗಿಸಿ, ನೆಲವನು ನಡುಗಿಸಿ,
ಸಿಡಿಲನು ತಾಳಿಗೆ ಬಾಳಿಗೆ ಎರಗಿಸಿ,

ಜಡಿಮಳೆ ಸುರಿವೋಲ್, ಬಿರುಮಳೆ ಮರುವೋಲ್
ಕುಡಿ ನೀರನು ಒಣಗಿದ ನೆಲಕೆರೆವೋಲ್

ಬಂತೈ ಬೀಸುತ, ಬೀಸುತ ಬಂತೈ !
ತೆಂಕಣ ಗಾಳಿಯು ಕೊಂಕಣ ಸೀಮೆಗೆ
ಬಂತೈ ! ಬಂತೈ ! ಬಂತೈ ! ಬಂತೈ !

ಮೊತ್ತಮೊದಲಿಗೇ ಇಲ್ಲಿಯ ಪದಗಳು ಗಾಳಿಯೊಡನೆ ಸೇರಿಕೊಂಡು ತಾವೂ ಭಾಗಿಯಾಗುತ್ತ ಬೀಸುತ್ತಿರುವುದು ಅರಿವಾಗುತ್ತದೆ. ಭಾಷೆಯನ್ನು ಹೀಗೆ ಅದರ ಪಾಡಿಗೆ ಅದು ಎಂಬ ಹಾಗೆ ಹರಿಬಿಟ್ಟಿರುವುದು ಪಂಜೆಯವರಲ್ಲಿ ಒಂದು ಅಪವಾದ ವಾದ ಹಾಗೆಯೇ ಇದೆ. ಖಂಡ ಖಂಡವಾಗಿ ಒಡೆದು ತೆಂಕಣ ಗಾಳಿ ಬರುವ ಸ್ವರೂಪವನ್ನು ಒಮ್ಮೆ ಯಕ್ಷಗಾನ ರೂಪದಲ್ಲಿಯೋ ಅನ್ನಿಸಿ, ಇನ್ನೊಮ್ಮೆ ಚಂಪೂ ರೀತಿಯಲ್ಲಿಯೋ ಅನ್ನಿಸಿ, ಮತ್ತೊಮ್ಮೆ ರಗಳೆಯ ರೂಪದಲ್ಲಿಯೂ ಅನ್ನಿಸಿ ಈ ಕವನ ವಿವಿಧವಾಗಿ ಚಿತ್ರಿಸುವಾಗಲೂ ಕವಿ ಎಲ್ಲೂ ದ್ವಿತೀಯಾಕ್ಷರ ಪ್ರಾಸವನ್ನಾಗಲೀ ಅಂತ್ಯಪ್ರಾಸವನ್ನಾಗಲೀ ಪಂಕ್ತಿಗಳ ಒಳಪ್ರಾಸವನ್ನಾಗಲೀ ಬಿಟ್ಟುಕೊಡುವುದಿಲ್ಲ. ಗಾಳಿ ಒಂದು ಅದೃಶ್ಯ ವಸ್ತು. ಇದು ಬೀಸಿದಾಗಷ್ಟೆ ನಮಗೆ ಅದರ ಅರಿವಾಗುವುದಷ್ಟೆ? ಈ ಅದೃಶ್ಯವನ್ನೂ ಸಾಕಾರಮಾಡಿ ತೋರಿಸಬಲ್ಲ ಈ ಕವನದ ಶಕ್ತಿ ನನಗೆ ತಿಳಿದ ಮಟ್ಟಿಗೆ ಆ ಕಾಲಕ್ಕಂತೂ ಅದ್ಭುತವಾದುದು! ಸನ್ನಿವೇಶ ನಿರ್ಮಾಣ ಕೂಡ ತೀರ ರಮ್ಯವಾದುದು. ಈ ಗಾಳಿಯ ರೌದ್ರವು ಮೊದಲು ಸಮುದ್ರದ ಮೇಲೆ, ಬಳಿಕ ಕಾಡಿನಲ್ಲಿ, ತೋಟದಲ್ಲಿ, ಅನಂತರ ಊರಿನಲ್ಲಿ, ಭಿನ್ನ ಭಿನ್ನ ರೀತಿಯಲ್ಲಿ ತನ್ನ ಪರಿಣಾಮವನ್ನು ತೋರಿಸುತ್ತ 'ಜಡಿಮಳೆ ಸುರಿವೋಲ್ ಬಿರುಮಳೆ ಬರುವೋಲ್' ವ್ಯಾಪಿಸುತ್ತ ಒಣಗಿದ ನೆಲಕ್ಕೆ ಕುಡಿಯುವ ನೀರನ್ನು ಎರೆಯಲು ಅನುವಾಗುವುದರಲ್ಲಿ ಮುಕ್ತಾಯ ಕಾಣುತ್ತದೆ. ಭಾಷೆಯೂ ಛಂದಸ್ಸೂ ಒಂದೇ ಗುರಿಯತ್ತ ದುಡಿದು, ಈ ಕವನದ ಪರಿಣಾಮರಮಣೀಯತೆಯನ್ನು ಹೆಚ್ಚಿಸಿವೆ. 'ಕನ್ನಡದಲ್ಲಿ ಅದರ ಸಮಕ್ಕೆ ಬರುವ ಪದ್ಯಗಳು ಅಪರೂಪ' ಎಂದು ವಿ.ಸೀ. ಅವರು ಅಭಿಪ್ರಾಯ ಪಟ್ಟಿದ್ದಾರೆ. ಪೇಜಾವರ ಸದಾಶಿವರಾಯರು 'ನಾಟ್ಯಗೀತ'ದಿಂದ, ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ'ದಿಂದ ಸಾಧಿಸಿದಂಥ ಅನನ್ಯತೆಯನ್ನೇ ಪಂಜೆಯವರು ಈ ಕವನದಲ್ಲಿ ಸಾಧಿಸಿದ್ದಾರೆ. ಯಾವ ನೀತಿಯ ಸಂದೇಶವನ್ನೂ ಕೊಡದೆ ಬರಿಯ ಪರಿಣಾಮಕ್ಕೇ ಗುರಿಗೊಂಡಿನ ಈ ಕವನದ ಬಗೆ ಪಂಜೆಯವರಲ್ಲಿದ್ದ ಅದ್ಭುತ ಕಾವ್ಯಶಕ್ತಿಯನ್ನು ಎತ್ತಿ ತೋರಿಸುತ್ತದೆ.

ಇಷ್ಟಾಗಿಯೂ ಇದು ಪಂಜೆಯವರ ಸ್ವತಂತ್ರ ಕವನವಲ್ಲ. Frolic in the wind ಎಂಬ ಇಂಗ್ಲಿಷ್ ಕವನದ ರೂಪಾಂತರ. ಹೀಗೆ ರೂಪಾಂತರಗೊಂಡಿರುವುದು

ಇವೊಂದೇ ಕವನವಲ್ಲ ಇಂಗ್ಲಿಷ್ ಸಾಹಿತ್ಯದಿಂದ, ಅದರಲ್ಲಿಯೂ ವಿಶೇಷವಾಗಿ, ಇಂಗ್ಲಿಷ್ ಬಾಲಸಾಹಿತ್ಯದಿಂದ ಅನೇಕ ಕವನಗಳನ್ನು (ಆಧಾರವಾಗಿರಿಸಿಕೊಂಡು ಅಥವಾ ರೂಪಾಂತರಿಸಿಕೊಂಡು) ಪಂಜೆಯವರು ಕನ್ನಡಿಸಿದ್ದಾರೆ. ಉದಾಹರಣೆಗೆ

Try Try Try again ಎಂಬ ಪದ್ಯ / ಮರಳಿ ಯತ್ನವ ಮಾಡು ಆಗಿದೆ
Hit the nail on the new boys / ಬಿಡಬೇಡ! ಕಬ್ಬಿಣದ
ಮೊಳೆಯನ್ನು ಜಡಿಯೈ ಆಗಿದೆ
The last of the Flock / ಕಡೆಕಂಜ ಆಗಿದೆ
Twinkle Twinkle little star / ಮಿನುಗೆಲೆ ಮಿನುಗೆಲೆ ನಕ್ಷತ್ರ ಆಗಿದೆ
O call my brother back to me / ಅಣ್ಣನ ವಿಲಾಪ ಆಗಿದೆ.

ಹೀಗೆ ಪಟ್ಟಿ ಮಾಡುವುದು ಸುಲಭ, ಆದರೆ ಈ ರೂಪಾಂತರವು ಪಂಜೆಯವರ ಮೂಲ ಪ್ರತಿಭೆಗೆ ಮುಸುಕನ್ನೇನೂ ಹಾಕುವುದಿಲ್ಲ. ಈ ರೂಪಾಂತರಗಳ ಪ್ರೇರಣೆಯು ಕತೆಯೇ ಬೇರೆ.

ಳ

ಕನ್ನಡದಲ್ಲಿ 1900ರ ಮೊದಲ ದಶಕ ಆಧುನಿಕ ಸಾಹಿತ್ಯದ ಅರುಣೋದಯ ಕಾಲ ಎಂಬುದಾಗಿ ಗುರುತಿಸಲ್ಪಟ್ಟಿದೆ. ಮಾಸ್ತಿಯವರು ಮತ್ತು ಬಿ.ಎಂ.ಶ್ರೀ. ಅವರು ಬರೆಯುವುದಕ್ಕೆ ಸುಮಾರು 13-14 ವರ್ಷಗಳಷ್ಟು ಹಿಂದಿನ ಮಾತು ಇದು. ಮಾಸ್ತಿ ಮತ್ತು ಶ್ರೀ ಅವರು ಆಧುನಿಕ ಯುಗದ ಪ್ರವರ್ತಕರು ಅನ್ನುವುದು ನಿಜ. ಆದರೆ ಈ ಯುಗದ ಮೂಲಪ್ರೇರಣೆಗಳನ್ನು ಪಡೆದವರು ಮಾತ್ರ ಅರುಣೋದಯ ಕಾಲದ ಪಂಜೆಯವರು ಹಾಗೂ ಅವರ ಸಮಕಾಲೀನರಾದ ಎಸ್. ಜಿ. ನರಸಿಂಹಾಚಾರ್ಯ, ಜಯರಾಯಾಚಾರ್ಯ, ಹಟ್ಟಿಯಂಗಡಿ ನಾರಾಯಣರಾಯರು. ತುಂಬಾ ಮುಖ್ಯರಾದವರ ಹೆಸರುಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಿದ್ದೇನೆ. 1700 ರಿಂದ 1900 ರ ವರೆಗಿನ ಕಾಲ ಕನ್ನಡ ಕಾವ್ಯದ ಬರಗಾಲವಾಗಿತ್ತು. ನಾಟಕ ಮತ್ತು ಯಕ್ಷಗಾನಗಳು 19ನೆಯ ಶತಮಾನದ ಕಡೆಯ ವರೆಗೆ ಪ್ರಮುಖವಾಗಿದ್ದುವು. ಇದೇ ಕಾಲಕ್ಕೆ ಪ್ರಚಲಿತವಾಗಿದ್ದ ಇಂಗ್ಲಿಷ್ ಶಿಕ್ಷಣ ಆಗಿನ ಧೀಮಂತರಲ್ಲಿ ಹೊಸ ದೇಶಾಭಿಮಾನವನ್ನು, ಹೊಸ ಸಾಹಿತ್ಯ ರುಚಿಯನ್ನು ಕೆರಳಿಸಿದುವು. ಇದೆಲ್ಲವೂ ಇತಿಹಾಸ ಪಾಠವಾಗಿರುವುದರಿಂದ ಹೀಗೆ ಸಂಕ್ಷೇಪವಾಗಿ ಸೂಚಿಸಿದ್ದೇನೆ. ಈ ಇಂಗ್ಲಿಷ್ ಪ್ರಭಾವವೇ ಮತ್ತು ಅಲ್ಲಿಯ ರೊಮಾಂಟಿಕ್ ಧಾಟಿಯ ಕಾವ್ಯವೇ ಅರುಣೋದಯ ಕಾಲದ ಪ್ರೇರಣೆಯಾಯಿತು. ಅಲ್ಲಿಯ ಹೊಸತನ್ನು ನಮ್ಮ ಜನಕ್ಕೆ ಹೊಸ ರೀತಿಯಲ್ಲಿ ಪರಿಚಯ ಮಾಡಿಕೊಡಬೇಕೆಂಬ ಹಂಬಲ ಈ ಪ್ರತಿಭಾವಂತರಲ್ಲಿ ಜಾಗ್ರತವಾಯಿತು.

ಪಂಜೆಯವರಂತೆ ಎಸ್. ಜಿ. ನರಸಿಂಹಾಚಾರ್ಯರ್ ಮತ್ತು ಜಯರಾಯಾಚಾರ್ಯರ್ ಕೂಡ ಕೆಲವು ಇಂಗ್ಲಿಷ್ ಕವನಗಳನ್ನು ರೂಪಾಂತರಿಸಿದ್ದಾರೆ ಇಂಥದೊಂದು ಹಂಬಲವೇ ಬೀಜರೂಪವಾಗಿ ಮುಂದೆ ಮಾಸ್ತಿ ಹಾಗೂ ಶ್ರೀಯವರಲ್ಲಿ ಮುಖ್ಯ ಮನೋಧರ್ಮವಾಗಿರುವುದನ್ನು ನಾವು ಆ ಮೇಲೆ ನೋಡಿದ್ದೇವೆ. ಈ ದೃಷ್ಟಿಯಿಂದ ಪಂಜೆಯವರು 'ಮೊದಲಿಗ' ಸ್ಥಾನವನ್ನು ಪಡೆಯುತ್ತಾರೆ. ಅವರು ಹೀಗೆ ಮೊದಲಿಗರಾಗಿರುವುದು ಇದೊಂದೇ ವಿಷಯದಲ್ಲಲ್ಲ. ಬಾಲಸಾಹಿತ್ಯವಾಗಲಿ, ಕವನವಾಗಲಿ, ಕತೆಯಾಗಲಿ, ಹರಟೆಯಾಗಲಿ—ಹೊಸ ರೀತಿಯಲ್ಲಿ ಬರೆಯುವಾಗ ಪಂಜೆಯವರೇ ಈ ಸ್ಥಾನವನ್ನು ಹಕ್ಕಿನಿಂದ ಪಡೆಯುತ್ತಾರೆ. ಹಾಗೆ ನೋಡಿದರೆ ಪಂಜೆ ಮುಟ್ಟದ ಪ್ರಕಾರವಿಲ್ಲ. ಈ ಎಲ್ಲ ಪ್ರಕಾರ ಸಾಹಿತ್ಯಗಳನ್ನೂ ಪಂಜೆಯವರು ಆಗಿನ ಕಾಲದ ಸುವಾಸಿನಿ, ಕಂಠೀರವ, ಸತ್ಯದೀಪಿಕೆ, ಸ್ವದೇಶಾಭಿಮಾನಿ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದರು. ಪದ್ಯಗಳನ್ನು ಮಾತ್ರ ತಾವೇ ಸಂಪಾದಿಸಿದ ಕನ್ನಡ ಮೊದಲನೆಯ, ಎರಡನೆಯ ಮತ್ತು ಮೂರನೆಯ ಪಠ್ಯ ಪುಸ್ತಕಗಳಲ್ಲಿ ಸೇರಿಸುತ್ತಿದ್ದರು.

೫

ಪಂಜೆಯವರಿಗೆ ಕರ್ತೃತ್ವ ಸಂಕೋಚವು 'ಅತಿ ವಿಪರೀತ' ಅನ್ನುವ ಮಟ್ಟದವರೆಗೆ ಇತ್ತು. ಸತ್ಯದೀಪಿಕೆ ಎಂಬ ಪತ್ರಿಕೆಗೆ ಅಂಕಣ ಬರೆಯುವಾಗ ಹರಟೆಮಲ್ಲ ಎಂದೂ ರೀಡರುಗಳಲ್ಲಿ ಪದ್ಯ ಪ್ರಕಟಿಸುವಾಗ ಕವಿಶಿಷ್ಯ ಎಂದೂ ಹೆಸರು ಹಾಕುತ್ತಿದ್ದರು. ಒಮ್ಮೊಮ್ಮೆ ಈ ಕವಿಶಿಷ್ಯ ಎಂಬ ಹೆಸರೂ ಇಲ್ಲದಾಗಿ 'ಸ್ವದೇಶಾಭಿಮಾನಿಯಿಂದ' ಅನ್ನುವ ಶೀರ್ಷಿಕ ಮೂಲವನ್ನು ಕೊಟ್ಟಿರುವುದೂ ಉಂಟು. ಈ ಸಂಕೋಚದಿಂದ ಬೇರೆ ಬೇರೆ ತರದ ಸಾಹಿತ್ಯಾನ್ವಯಗಳೂ ಆಗಿವೆ. ಆಗಿನ ಕವಿಗಳೆಲ್ಲರೂ ಸುಮಾರು ಒಂದೇ ರೀತಿ ಬರೆಯುತ್ತಿದ್ದುದರಿಂದ ಕೆಲವು ಕವನಗಳಿಗೆ ಕರ್ತೃ ಯಾರು ಎಂಬ ಬಗ್ಗೆಯೂ ವಿವಾದವೆದ್ದಿದೆ. ರೈಲಿನ ಮೇಲೆ ಬರೆದ ಹೊಗೆಯ ಗಾಡಿ, ಮಕ್ಕಳಿಗೆ ಹೇಳಿಕೊಡುವ ತಾರತಮ್ಯ, The Better Land ಅನುವಾದವಾದ ಉತ್ತಮ ರಾಜ್ಯ—ಈ ಕವನಗಳು 1973ರಲ್ಲಿ ಓರಿಯಂಟ್ ಲಾಂಗ್‌ಮನ್ ಲಿ., ಅವರು ಪ್ರಕಟಿಸಿದ ಪಂಜೆಯವರ ಪದ್ಯಸಂಪುಟದಲ್ಲಿವೆ. ಆದರೆ ಈ ಕವನಗಳು ನರಸಿಂಹಾಚಾರ್ಯರ್ (ಹೊಗೆಯ ಗಾಡಿ, ಉತ್ತಮ ರಾಜ್ಯ) ಮತ್ತು ಜಯರಾಯಾಚಾರ್ಯರ್ (ತಾರತಮ್ಯ) ಅವರು ರಚಿಸಿದ್ದು ಎಂದು ಪ್ರೊ. ಎಸ್. ಅನಂತನಾರಾಯಣ ಅವರು ಉಲ್ಲೇಖಿಸಿದ್ದಾರೆ. ನಾನು ಸಂಶೋಧಕನಲ್ಲವಾದುದರಿಂದ ಈ ವಿವಾದವನ್ನು ಕುರಿತು ಏನೂ ಹೇಳಲಾರೆ. ಆದರೆ ಈ ಗೊಂದಲಕ್ಕೆ ಕಾರಣ ಪಂಜೆಯವರ ಸಂಕೋಚ. ಎಷ್ಟು ಬಗೆಯಲ್ಲಿ ಹೇಳಿದರೂ ತಮ್ಮ ಪದ್ಯಗಳ ಸಂಕಲನವನ್ನು ಮಾಡುವುದಕ್ಕೆ ಪಂಜೆಯವರು ಸುತರಾಂ ಒಪ್ಪುತ್ತಿರಲಿಲ್ಲವೆಂದು ವಿ. ಸೀ. ಹೇಳಿ

ಕೊಂಡಿದ್ದಾರೆ. ವಿನಯವೂ ಸಾಹಿತ್ಯಕ್ಕೆ ಅನನ್ಯತೆಯನ್ನು ಮಾಡುವ ಈ ಒಂದು ರೀತಿ ನಂದಳಿಕೆಯವರಲ್ಲಿಯೂ ಇದ್ದಿತು. ಸದ್ಯ ಇಂಥ ಅನಾಮಧೇಯ ಪ್ರಜ್ಞೆ ಇವೊತ್ತಿನ ಸಾಹಿತ್ಯದಲ್ಲಿಲ್ಲ!

ಈ ಸಂಕೋಚಕ್ಕೆ ಇಷ್ಟೊಂದು ಪ್ರತ್ಯೇಕವಾಗಿ ಹೇಳುವುದು ವಿಚಿತ್ರ ಎಂಬ ಅನುಮಾನ ಬರಬಹುದು. ಪಂಜೆಯವರು ಅಣಕ ಹಾಡುಗಳನ್ನೂ ಬರೆದಿದ್ದಾರೆ ಎಂದರೆ ಕೆಲವರಿಗೆ ಆಶ್ಚರ್ಯವಾಗಬಹುದು. ಅವನ್ನು ಪದ್ಯಗಳಲ್ಲಿ ನಾವು ಕಾಣಲಾರೆವು. ಅವರು ಬರೆದ ಹರಟೆ ಲೇಖನಗಳ ಭಾಗವಾಗಿ ಆ ಹಾಡುಗಳು ಬಂದಿವೆ. ಹರಟೆಗಳನ್ನು ಓದುವಾಗ ಆ ಹಾಡುಗಳ ಔಚಿತ್ಯ ಗೊತ್ತಾಗುತ್ತದೆ. ಪಂಜೆಯವರ ಕಾವ್ಯದ ವಿಭಿನ್ನ ನೆಲೆಯಾದ ವಿನೋದ ಮತ್ತು ತುಂಟತನ ಈ ಹಾಡುಗಳಲ್ಲಿ ಸೂಸುತ್ತವೆ. ತಿಳಿಯಾದ ಈ ಹಾಸ್ಯದಲ್ಲಿ ಹಿಂಸೆಯ ಅಂಶ ಎಲ್ಲೂ ಇಲ್ಲ. ಊರಿನಲ್ಲಿ ಪ್ಲೇಗು ತಗುಲಿದ ಸಂದರ್ಭದಲ್ಲಿ ಬರೆದಿರುವ 'ಏನು ಹೇಳಲಿ ನಿನ್ನ ಒಳಗೆ ಬಂದು', 'ಮಾಡು ಸಿಕ್ಕದಲ್ಲ', 'ಕೊಲ್ಲಿರೋ' ಎಂಬ ಹಾಡುಗಳು ದಾಸರ ಪದಗಳಿಗೆ ಅಣಕವಾಗಿ ರಚಿತವಾಗಿವೆ. ಪಂಜೆ ಮುಟ್ಟದ ಪ್ರಕಾರವಿಲ್ಲ ಎಂದು ಅದಕ್ಕೇ ಹೇಳಿದ್ದು.

೬

ಪಂಜೆಯವರ ಎಷ್ಟೋ ಪದ್ಯಗಳನ್ನು ನಾನು ಉದಾಹರಿಸಿಲ್ಲ. ಅದು ಸಾಧ್ಯವೂ ಇಲ್ಲ. ಆದರೆ ನಾನು ಪ್ರಾತಿನಿಧಿಕ ಎಂದು ಕಂಡುಬಂದುದನ್ನು ಪ್ರಸ್ತಾಪಿಸಿದ್ದೇನೆ. ಉದಾಹರಣೆಗೆ ಹುತ್ತರಿ ಹಾಡು ಕವನವನ್ನು ಉಲ್ಲೇಖಿಸಬಹುದು. ಕೊಂಕಣಿ ಮನೆಮಾತಿನ ಈ ಕವಿ, ಕನ್ನಡದಲ್ಲಿ ಕೊಡಗಿನ ನಾಡನ್ನು ಅಭಿಮಾನದಿಂದ ಸಂಭ್ರಮಿಸಿದ್ದಾರೆ. ದೊಂಬರ ಚೆನ್ನಿ ಕಥನ ಕವನದಲ್ಲಿ ಕತೆಯನ್ನು ಜನಪದ ಶೈಲಿಯಲ್ಲಿ ನಿರೂಪಿಸಿದ್ದಾರೆ. ಅಸ್ಪೃಶ್ಯತೆಯ ಕೆಡುಕಿಗೆ ನೊಂದು 'ಉಳ್ಳಯ್ಯಾ ದಯೆಕೊಳ್ಳಯ್ಯಾ' ಎಂದು ಹೊಲೆಯನ ಹಾಡಿನಲ್ಲಿ ನಿವೇದಿಸಿದ್ದಾರೆ. ಭಾರತ ವರ್ಷ ಸೌಭಾಗ್ಯಕ್ಕಾಗಿ ತೂಕಡಿಕೆಯನು ಕಳೆ ಎಂದು ಎಚ್ಚರಿಸಿದ್ದಾರೆ.

ಹೀಗೆ ಪಂಜೆಯವರ ಕಾವ್ಯದ ಬೇರೆ ಬೇರೆ ನೆಲೆಗಳನ್ನು ಗುರುತಿಸುವ ಮೂಲಕ ಕವಿಯ ಪ್ರತಿಭೆಯನ್ನು ತೋರಿಸಿಕೊಡುವ ಪ್ರಯತ್ನವನ್ನು ಮಾಡಿದ್ದೇನೆ. ಶಿಕ್ಷಣ, ಕಥನ ಮತ್ತು ವೈನೋದಿಕವೆಂಬ ಪ್ರಮುಖ ನೆಲೆಗಳಲ್ಲಿ ಇಂಗ್ಲಿಷ್ ಪ್ರಭಾವವನ್ನು ಮೈಗೂಡಿಸಿಕೊಂಡು ಅವರು ಬರೆದ ಕಾವ್ಯ ಯಾವ ಪರಂಪರೆಯನ್ನೂ ಸೃಷ್ಟಿಸಲಿಲ್ಲ. ಹಾಗೆ ನೋಡಿದರೆ ಶ್ರೀಯವರಂತೆ ಅವರೇನೂ ಯುಗಪ್ರವರ್ತಕರಲ್ಲ. ಅಥವಾ ಕಾವ್ಯಮೀಮಾಂಸೆಯು ಕಟ್ಟಿಸಿಟ್ಟಿದ್ದ ಲಕ್ಷಣಗಳ ಒರೆಗಲ್ಲಿಗೆ ತಿಕ್ಕಿ ನೋಡಿದಾಗ ಅಲ್ಲಿ ಶ್ರೇಷ್ಠವಾದುದು ಕಾಣದೆ ಇರಬಹುದು. ಆದರೆ ಅರುಣೋದಯ ಕಾಲದ ಪ್ರೇರಕ

ಶಕ್ತಿಯಾಗಿ ಸಾಹಿತ್ಯದಲ್ಲಿ ಅವರ ಪಾತ್ರ ಹಿರಿದಾದುದು. ಪಂಜೆಯವರು ಸಂಪ್ರದಾಯನಿಷ್ಠರು. ನಿಸರ್ಗದ ಅಂಶಗಳಾದ ಚಂದ್ರೋದಯ, ಕಮಲವನ್ನು ಕುರಿತಂತೆ ಹಳೆಯ ಶೈಲಿಯಲ್ಲೂ ಅವರು ಪದ್ಯಗಳನ್ನು ರಚಿಸಿದ್ದಾರೆ.

ಇದೋ! ಹಾ! ಬಾಂದಳದೊಳ್ ವಿರಾಜಿಸುತಿಹುದೈ
ಚಂದ್ರೋದಯಂ!

ಎಂದು ಪ್ರಾರಂಭವಾಗುವ ಚಂದ್ರೋದಯ

ನಳಿನೀ! ನೀ ನಲಿವೈ ವಿಲೋಲಜಲದಾ ಕಲ್ಲೋಲದುಯ್ಯಾಲೆ

ಎಂದು ಪ್ರಾರಂಭವಾಗುವ ಕಮಲ

ಇಂಥ ಪದ್ಯಗಳನ್ನೇ ಅವರು ಬರೆದು ಮುಂದುವರಿಸಿದ್ದರೆ ಕಾವ್ಯದಲ್ಲಿ ಬರಡುಗಾಲವೇ ಮುಂದುವರಿಯುತ್ತಿತ್ತು. ಪ್ರಭಾತದ ಕವನಗಳನ್ನು ಬರೆದರೆಂದೇ ಅವರ ಕಾವ್ಯ ವ್ಯಕ್ತಿತ್ವವು ಭಿನ್ನರೀತಿಯಲ್ಲಿ ಸ್ಥಾಪನೆಯಾಯಿತು. ಆಧುನಿಕ ಸಾಹಿತ್ಯಕ್ಕೂ ನಾಂದಿಯಾಯಿತು. 'ಸತ್ತವನ ಆತ್ಮವು ತಿರುಗಿ ಜನ್ಮಕ್ಕೆ ಬೀಳಬಾರದೆಂಬ ಅಭಿಪ್ರಾಯದಿಂದ ಸತ್ತವನನ್ನು ಸ್ಮರಿಸುವುದೇ ಕಡಿಮೆ' ಎಂಬ ಮಾತನ್ನು ಮುದ್ದಣನನ್ನು ಕುರಿತು ಬರೆದ ಲೇಖನದಲ್ಲಿ ಪಂಜೆಯವರು ಹೇಳಿದ್ದಾರೆ. ನಾಗರಹಾವು, ತೆಂಕಣಗಾಳಿಯಾಟ, ಉದಯರಾಗದಂಥ ಪ್ರಥಮ ಪದ್ಯಗಳು ಆತ್ಮವನ್ನೂ ದೇಹವನ್ನೂ ಮೀರುವಂಥ ಕಾವ್ಯದ ಮಿಡಿತಗಳು, ಕಾವ್ಯದ ತುಡಿತಗಳು. ಲಕ್ಷ್ಮೀಶ, ಪಂಜೆಯವರ ಮೆಚ್ಚಿನ ಕವಿ. ಆತನನ್ನು ಕುರಿತು ಪಂಜೆ ಬರೆದ ಪದ್ಯದಲ್ಲಿ ಬರುವ ಪಂಕ್ತಿಗಳನ್ನು ಪಂಜೆಯವರಿಗೆ ಅನ್ವಯವಾಗುವಂತೆಯೇ ಉದ್ಧರಿಸಿ ನನ್ನ ಪ್ರಬಂಧವನ್ನು ಮುಗಿಸುತ್ತೇನೆ.

ಅಳಿವರ್ ಕಬ್ಬಿಗರೆಂದು ಪೇಳ್ವ ನುಡಿಯುಂ ಚೆನ್ನಪ್ಪುದೇ? ಲೋಕದೊಳ್
ಅಳಿವಿಲ್ಲಂ ಕೃತಿಗಳ್ಗೆ; ನಿನ್ನ ಜಸಮುಂ ಕರ್ಣಾಟಮೋಲ್ ಶಾಶ್ವತಂ.

ಹೊಯ್ಸಳಾದಿ ರಾಜರ ಚರಿತ್ರೆ

ಸಂ : ವೈ. ಸಿ. ಭಾನುಮತಿ

ಹಿನ್ನೆಲೆ :

ಕನ್ನಡ ಅಧ್ಯಯನ ಸಂಸ್ಥೆಯ ಕೆ. ಎ. ೬೭ ಹಸ್ತಪ್ರತಿಯ ಅಂತ್ಯದ ಕೆಲವು ಪುಟಗಳಲ್ಲಿ (೪೬೦-೪೭೬) ಚರಿತ್ರೆ ಸಂಬಂಧಿಯಾದ ಸಂಗತಿಗಳು ದಾಖಲಾಗಿವೆ. ಈ ಕೃತಿಗೆ ಕರ್ತೃ ಕೊಟ್ಟ ಹೆಸರು ತಿಳಿಯದು. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯಲ್ಲಿ ಹೊಯ್ಸಳ ರಾಜರ ವಂಶಾವಳಿ ಎಂದು ನಮೂದಾಗಿದೆ. ಇದು ಪ್ರತಿಯನ್ನು ಓದಿದವರು ಇಟ್ಟ ಹೆಸರು. ಪ್ರಸ್ತುತ ಕೃತಿಯಲ್ಲಿ ಹೊಯ್ಸಳ ರಾಜರಿಂದ ಮೈಸೂರು ಒಡೆಯರ ವರೆಗಿನ ಚಾರಿತ್ರಿಕ ಸಂಗತಿಗಳು ಎಡೆಪಡೆದಿರುವುದರಿಂದ ಹೊಯ್ಸಳಾದಿ ರಾಜರ ಚರಿತ್ರೆ ಎಂದು ಕೃತಿಯ ತಲೆಬರಹವನ್ನು ಬದಲಿಸಿದೆ.

ಹೊಯ್ಸಳಾದಿ ರಾಜರ ಚರಿತ್ರೆ ಒಂದು ಸಂಕಲನ ಕೃತಿಯಂತೆ ತೋರುತ್ತದೆ. ಇದರ ಕರ್ತೃವಿನ ಅಥವಾ ಸಂಕಲನಕಾರನ ಹೆಸರಾಗಲಿ, ಕಾಲವಾಗಲಿ ಎಲ್ಲಿಯೂ ಉಕ್ತವಾಗಿಲ್ಲ. ಹಸ್ತಪ್ರತಿಯ ಮೊದಲ ಭಾಗದಲ್ಲಿ ಮಹಾಬಲನ ನೇಮಿನಾಥ ಪುರಾಣವಿದ್ದು ಇದರ ಪ್ರತಿಕಾರ ನೇಮಿಚಂದ್ರ ಎಂದು ತಿಳಿದು ಬರುತ್ತದೆ. ನೇಮಿನಾಥಪುರಾಣದ ಕಡೆಯಲ್ಲಿ ಬರುವ—

ಅತ್ಯಂತಾದರದಿಂ ಶುಭ
ಚಿತ್ತಂ ಮಲೆಯೂರ ಪದ್ಮರಾಜಂ ಲಿಖಿಸೆಂ
ದಿತ್ತಡೆ ತ್ರಿಕದಂಬ ಪುರಾ
ಶ್ರಿತ್ಯಂ ಗುಣಿ ನೇಮಿಚಂದ್ರನಾನಿದ ಬರೆದೆಂ

ಎಂಬ ಲಿಪಿಕಾರನ ಪದ್ಯದಿಂದ ಈತ ತೆರಕಣಾಂಬಿಯವನು, ಮಲೆಯೂರ ಪದ್ಮರಾಜ ಹೇಳಲಾಗಿ ಪ್ರತಿಮಾಡಿದನೆಂದು ವ್ಯಕ್ತವಾಗುತ್ತದೆ. ಇದೇ ವ್ಯಕ್ತಿ ಹೊಯ್ಸಳಾದಿ ಚರಿತ್ರೆಯನ್ನೂ ಪ್ರತಿಮಾಡಿದ್ದಾನೆಂಬುದರಲ್ಲಿ ಸಂಶಯವಿಲ್ಲ.

ಮಲೆಯೂರ ಪದ್ಮರಾಜ ಮತ್ತು ದೇವಚಂದ್ರ ಸಹೋದರರು ಏಕಕಾಲಕ್ಕೆ ಕೃತಿರಚನೆ ಮಾಡಿದವರು. ದೇವಚಂದ್ರನ "ರಾಜಾವಳಿ ಕಥಾಸಾರ" ಚಾರಿತ್ರಿಕ ಸಂಗತಿಗಳ ಆಗರ. ಇದರಲ್ಲಿ ಅನೇಕ ಶಾಸನ ಪದ್ಯಗಳು ಯಥಾವತ್ತು ಬಳಕೆಯಾಗಿರುವುದು ಸಹೃದಯರಿಗೆ ವೇದ್ಯ. ಹೊಯ್ಸಳಾದಿ ರಾಜರ ಚರಿತ್ರೆಯಲ್ಲಿ ಬಂದಿರುವ ಅನೇಕ ಸಂಗತಿಗಳು ರಾಜಾವಳಿ ಕಥಾಸಾರದಲ್ಲಿಯೂ ಸ್ಥಾನ ಪಡೆದಿರುವುದರಿಂದ

ಪ್ರಸ್ತುತ ಕೃತಿ ರಾಜಾವಳಿ ಕಥಾಸಾರದ ವಿವರಣದ ಹಿನ್ನೆಲೆಯಲ್ಲಿ ಮಾಡಿಕೊಂಡ ಟಿಪ್ಪಣಿ ಎಂದು ಊಹಿಸಬಹುದು. ಸದ್ಯದಲ್ಲಿ ಹೊಯ್ಸಳಾದಿ ರಾಜರ ಚರಿತ್ರೆಯ ಸಂಕಲನಕಾರನಾಗಿ ದೇವಚಂದ್ರನನ್ನು ಸ್ವೀಕರಿಸಬಹುದು. ಈತನ ಕಾಲವೇ ಕೃತಿಯ ಕಾಲವಾಗುವುದರಿಂದ ಕ್ರಿ. ಶ. ೧೮೦೦ ಎಂದು ಇಟ್ಟುಕೊಳ್ಳಬಹುದು.

ಇತಿಹಾಸದ ಮೇಲೆ ಹೊಸ ಬೆಳಕು ಮೂಡಿಸುವ ಸಂಗತಿಗಳನ್ನು ಅರಸುತ್ತ ಹೊಯ್ಸಳಾದಿ ಚರಿತ್ರೆಯನ್ನು ಅವಲೋಕಿಸಿದಾಗ ಒಂದು ರೀತಿಯ ನಿರಾಶೆ ಉಂಟಾಗುವುದು ಸಹಜ. ಆದರೆ ಕರ್ನಾಟಕ ಚರಿತ್ರೆಯ ಕಲ್ಪನೆಯೇ ಇಲ್ಲದ ಕಾಲದಲ್ಲಿ ಚರಿತ್ರೆ ರಚನೆಗೆ ಕೈಹಾಕಿದುದರಲ್ಲಿ, ಶಾಸನದ ಅಂಶಗಳನ್ನು ಬಳಸಿಕೊಳ್ಳುವ ಪ್ರಯತ್ನದಲ್ಲಿ ಈ ಕೃತಿಯ ಮಹತ್ವ ಅಡಗಿರುವುದನ್ನು ಅಲ್ಲಗಳೆಯುವಂತಿಲ್ಲ. ಈ ಕೃತಿಗೆ ಬೇಲೂರು ತಾಲೂಕಿನ ಬಸ್ತಿಹಳ್ಳಿ 389, ಚಾಮರಾಜನಗರ 2 ಮತ್ತು ನಾಗಮಂಗಲ ತಾಲೂಕಿನ ಅಳೀಸಂದ್ರ 72 ಶಾಸನಗಳು ಪ್ರಮುಖ ಆಕರಗಳಾಗಿವೆ. ಪ್ರಸ್ತುತ ಕೃತಿಯಲ್ಲಿ ನಿರೂಪಿತವಾಗಿರುವ ಅಂಶಗಳನ್ನು ನಾಲ್ಕು ನೆಲೆಯಲ್ಲಿ ಗುರುತಿಸಬಹುದು— ಹೊಯ್ಸಳರು, ದಂಡಾಧಿಪರು, ವಿಜಯನಗರದವರು, ಮೈಸೂರು ಒಡೆಯರು. ಹೈದರಲಿಯ ಉಲ್ಲೇಖವೂ ದೊರೆಯುವುದು. ಕೃತಿಕಾರ ಜೈನಮತದವನಾಗಿರುವುದರಿಂದ ಚಾವುಂಡರಾಯನ ವಂಶಾವಳಿ, ಶ್ರವಣಬೆಳಗೊಳದಲ್ಲಿ ಗೊಮ್ಮಟ ಪ್ರತಿಮೆಯ ಸ್ಥಾಪನೆ ಇಂಥ ವಿಚಾರಗಳೂ ಎಡೆಪಡೆದಿವೆ.

ಹೊಯ್ಸಳಾದಿ ರಾಜರ ಚರಿತ್ರೆ ಆರಂಭಗೊಳ್ಳುವುದೆ ಬಸ್ತಿಹಳ್ಳಿ ಶಾಸನ ಪದ್ಯಗಳಿಂದ. ಗಂಗರಾಜ ಮತ್ತು ಬೊಪ್ಪನ ಚರಿತ್ರೆಗೆ ಬಸ್ತಿಹಳ್ಳಿ ಶಾಸನ, ಮರಿಯಾನೆ ದಂಡನಾಯಕನ ವಿಚಾರಗಳಿಗೆ ಅಳೀಸಂದ್ರದ ಶಾಸನ, ಪುಣಿಸನ ವ್ಯಕ್ತಿತ್ವ ನಿರೂಪಣೆಗೆ ಚಾಮರಾಜನಗರದ ಶಾಸನವನ್ನು ಕೃತಿಕಾರ ಆಧರಿಸಿದ್ದಾನೆ. ಬಹುಪಾಲು ಪದ್ಯಗಳನ್ನು ಶಾಸನಗಳಿಂದ ಯಥಾವತ್ತು ಎತ್ತಿಕೊಳ್ಳಲಾಗಿದೆ. ಆದರೂ ಪಾಠಾಂತರಗಳು ಸಾಕಷ್ಟು ಕಂಡುಬರುತ್ತವೆ. ಶಾಸನಗಳಲ್ಲಿ ಬರುವ ದತ್ತಿವಿವರಗಳನ್ನು ಕೈಬಿಟ್ಟು, ಅಂಥ ಜಾಗದಲ್ಲಿ ಮುಂದಿನ ವಿಷಯ ನಿರೂಪಣೆಗೆ ನೆರವಾಗುವಂತೆ ಗದ್ಯಗಳನ್ನು ಹೆಣೆದಿದ್ದಾನೆ. ಹೊಯ್ಸಳರ ವಂಶಾವಳಿಯನ್ನು ಸಳನಿಂದ ಆರಂಭಿಸಿ ವಿಜಯನರಸಿಂಹನ ವರೆಗೆ ಮುಂದುವರಿಸಿದ್ದರೂ ವಿಷ್ಣುವರ್ಧನನ ಶೌರ್ಯ ಸಾಹಸಗಳಿಗೆ ಆದ್ಯತೆ ನೀಡಿರುವುದು ಸ್ಪಷ್ಟವಾಗಿದೆ. ಈತನ ವಿಜಯಗಾಥೆಯಲ್ಲಿ ಹಲವು ದಂಡನಾಯಕರ ನೆರವಿರುವುದನ್ನು ಗುರುತಿಸಿದ ಕೃತಿಕಾರ ಗಂಗರಾಜ, ಬೊಪ್ಪ, ಮರಿಯಾನೆ ದಂಡನಾಯಕ, ಪುಣಿಸ ಎಂಬ ದಂಡನಾಯಕರನ್ನು ವಿಶೇಷವಾಗಿ ದೀರ್ಘವಾಗಿ ಪ್ರಸ್ತಾಪಿಸಿದ್ದಾನೆ. ಮರಿಯಾನೆಯ ಮೂವರು ತಂಗಿಯರನ್ನು ವಿಷ್ಣುವರ್ಧನನು ಒಂದೇ ಹಸೆಯಲ್ಲಿ ವಿವಾಹವಾದುದು, ಅವನ ಕೆಲವು ಸಾಹಸಕಾರ್ಯಗಳನ್ನು ಪರಿಗಣಿಸಿ ಸಿಂಧಗೆರೆಯ ಪ್ರಭುತ್ವವನ್ನು ಕೊಟ್ಟ ಸಂಗತಿಗಳು ಹೆಚ್ಚಿನ ಮನ್ನಣೆ ಗಳಿಸಿವೆ. ಗಂಗರಾಜ

ದಂಡನಾಯಕನಾದರೂ ಜಿನರಾಜ ಪೂಜಾಪುರಂದರ, ದಾನಶ್ರೇಯಾಂಸ, ಮಂತ್ರಿ ಮಾಣಿಕ್ಯ, ಧೃತಸತ್ಯವಾಕ್ಯ, ಜಿನಶಾಸ್ತ್ರರಕ್ಷಾಮಣಿ, ಜಯಾಂಗನಾವಲ್ಲಭ, ದ್ರೋಹಘರಟ್ಟ, ಭಿನ್ನಜಿನ ಚೈತ್ಯಾಲಯೋದ್ಧರಣ, ಪರನಾರಿಯರೊಳ್ ನುಡಿಯು ಇವೇ ಮುಂತಾದ ಗುಣಗಳಿಂದ ಕೂಡಿದುದನ್ನು ಉಲ್ಲೇಖಿಸಲಾಗಿದೆ. ಈತನ ಹೆಂಡತಿ ನಾಗಲೆದೇವಿಯ ಉದರದಲ್ಲಿ ಬೊಪ್ಪದಂಡಾಧೀಶ ಜನಿಸಿದ. ಈತನ ಗುರುಗಳು ಶುಭಚಂದ್ರದೇವ, ಪ್ರಭಾಚಂದ್ರದೇವ. ವಿಷ್ಣುವರ್ಧನನಿಗೆ ಶತ್ರುಜಯ ಮತ್ತು ಕುಮಾರೋದಯವಾದಾಗ ಬೊಪ್ಪನು ಶಕ ೧೦೫೫ರಲ್ಲಿ ಹಳೆಯಬೀಡಿನಲ್ಲಿ ವಿಜಯಪಾರ್ಶ್ವನಾಥ ಬಸದಿಯನ್ನು ನಿರ್ಮಿಸಿದ.

ಹೊಯ್ಸಳರ ಮತ್ತೊಬ್ಬ ದಂಡನಾಯಕ ಪುಣಿಸಚಮೂಪನ ಬಗೆಗೆ ಕೂಡ ಇಲ್ಲಿ ಸಾಕಷ್ಟು ಮಾಹಿತಿ ದೊರೆಯುತ್ತದೆ. ಈತ ಚಾಮರಾಜನಗರದವನಾಗಿದ್ದುದರಿಂದ ಕೃತಿಕಾರನೂ ಆ ಭಾಗದಲ್ಲೇ ಇದ್ದುದರಿಂದ ಹೆಚ್ಚಿನ ವಿವರ ನೀಡಲು ಸಾಧ್ಯವಾಗಿದೆ. ಪುಣಿಸ ಚಮೂಪ 'ಶಾಸನ ಚಕ್ರವರ್ತಿ' ಎಂಬ ಬಿರುದಾಂಕಿತ. ಈತ ಹೊಯ್ಸಳ ಸಂಧಿವಿಗ್ರಹಿ. ನೀಲಗಿರಿ, ಮಲೆಯಾಳ ಯುದ್ಧಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ. ಇಂದಿನ ಚಾಮರಾಜನಗರಕ್ಕೆ ಅರಿಕುಠಾರ ಎಂಬ ಹೆಸರು ಬಂದುದು ಈತನಿಂದಲೇ. ಜಿನಭಕ್ತನಾದುದರಿಂದ ತ್ರಿಕೂಟ ಚೈತ್ಯಾಲಯವನ್ನು ನಿರ್ಮಿಸಿದ. ಏಳು ಬಸದಿಗಳಿಗೆ ಕ್ಷೇತ್ರಗಳನ್ನು ದತ್ತಿಕೊಟ್ಟ. ಈತನ ವಂಶಾವಳಿಯನ್ನು ವಿವರವಾಗಿ ನೀಡಲಾಗಿದ್ದು ಅದು ಹೀಗಿದೆ—

ಪುಣಿಸ
| (ಹೆಂ. ಸೋಮಲೆ)
- ಚಾಮರಾಜ
  | (ಹೆಂ. ಏಚಬ್ಬೆ)
  - ಪುಣಿಸ
  - ಮರಯ್ಯ
  - ಬೆಟ್ಟದಯ್ಯ
    | (ಹೆಂ. ದೇವಾಂಬೆ)
    - ದೊಡ್ಡಯರಸು
- ಕನಕ
- ಮರಯ್ಯ

ಬೇಲೂರು ೪೪ನೆಯ ಶಾಸನದಲ್ಲಿ ಪುಣಿಸ (I)ನ ಮಕ್ಕಳಲ್ಲಿ ಕನಕ, ಮರಯ್ಯ ಎಂಬ ಹೆಸರಿಗೆ ಬದಲಾಗಿ ನಾಕಣ, ಕುಮಾರಯ್ಯ ಎಂದಿವೆ. ಇಲ್ಲಿ ಉಕ್ತನಾಗಿರುವ ದೊಡ್ಡಯರಸು ಒಂದು ಕೊಳವನ್ನು ಕಟ್ಟಿಸಿದ್ದ. ಅದು ಚಾಮರಾಜನಗರದಲ್ಲಿ ದೊಡ್ಡರಸಿನ ಕೊಳ ಎಂದು ಈಗಲೂ ಪ್ರಸಿದ್ಧ.

ಹೊಯ್ಸಳರ ಬಳಿಕ ಹಲವು ವರ್ಷಗಳು ಕಳೆದ ಮೇಲೆ ಅರಿಕುಠಾರದಲ್ಲಿ ಚಾಮರಾಜನ ಜನನವಾಯಿತು. ಈತನಿಂದಾಗಿ ಆ ಊರು ಚಾಮರಾಜನಗರವೆಂದು ನಾಮಾಂತರವಾಯಿತು. ಚಾಮರಾಜ ಲಕ್ಷ್ಮೀದೇವಿಯರ ಪುತ್ರನೆ ಮುಮ್ಮಡಿ ಕೃಷ್ಣರಾಜ. ಮುಂದೆ ಚಾಮುಂಡರಾಯನ ವಂಶಾವಳಿ, ವಿಜಯನಗರ ಹಾಗೂ ಮೈಸೂರು ಒಡೆಯರ ಆಳಿಕೆಯ ವಿಚಾರಗಳನ್ನು ನಿರೂಪಿಸಿ ಕೃತಿ ಮುಕ್ತಾಯವಾಗುತ್ತದೆ.

ಹೀಗೆ ಪ್ರಸ್ತುತ ಕೃತಿಕಾರ ಕರ್ನಾಟಕ ಚರಿತ್ರೆಯ ಮುಖ್ಯ ಕಾಲಘಟ್ಟಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಇತಿಹಾಸ ನಿರೂಪಿಸುವಲ್ಲಿನ ಉತ್ಸಾಹ ಮೆಚ್ಚುವಂತಹದು. ವಸ್ತು ವಿಶ್ಲೇಷಣೆಯಲ್ಲಿ ಕೆಲವೊಂದು ಕೊರತೆಗಳಿರುವುದು ನಿಜ. ಆದರೂ ಎಪಿಗ್ರಾಫಿಯ ಕರ್ನಾಟಿಕಗಳ ಅಚ್ಚಾದ ಸಂಪುಟಗಳು ಲಭ್ಯವಿಲ್ಲದ ಕಾಲದಲ್ಲಿ ಅನೇಕ ಊರು ಸುತ್ತಿ, ಅಲ್ಲಿನ ಶಾಸನಗಳನ್ನು ಅಭ್ಯಾಸಮಾಡಿ, ಅವುಗಳನ್ನು ಚಾರಿತ್ರಿಕ ಚೌಕಟ್ಟಿನಲ್ಲಿ ಅಳವಡಿಸಿರುವಾಗಿನ ಶ್ರಮವನ್ನು ಅಲಕ್ಷಿಸುವಂತಿಲ್ಲ*.

ಪ್ರಸ್ತುತ ಹಸ್ತಪ್ರತಿಯ ಪಾಠಕ್ಕೂ ಶಾಸನಪಾಠಕ್ಕೂ ಕ್ವಚಿತ್ತಾದ ವ್ಯತ್ಯಾಸಗಳು ಕಂಡು ಬರುತ್ತವೆ. ಹಸ್ತಪ್ರತಿಯ ಪಾಠಗಳ ಸಹಾಯದಿಂದ ಚಾಮರಾಜನಗರ ಶಾಸನದ ಲುಪ್ತಾಕ್ಷರಗಳನ್ನು ತುಂಬಬಹುದು. ಛಂದೋದೋಷವಿದ್ದ ಕಡೆಗಳಲ್ಲಿ ಶಾಸನಪಾಠಗಳನ್ನು ಆಧರಿಸಿ ಪರಿಷ್ಕರಿಸಲು ಯತ್ನಿಸಿದ್ದರೂ ಹಸ್ತಪ್ರತಿಯ ಪಾಠಗಳನ್ನೇ ಉಳಿಸಿಕೊಳ್ಳಲಾಗಿದೆ.

ಪಠ್ಯಭಾಗ :

ಜಯತು ಜಗತು ನಿತ್ಯಂ ಜೈನಸಂಘೋದಯಾಖ್ಯಃ
ಪ್ರಭವತು ಜಿನಯೋಗಿವ್ರಾತಪದ್ಮಾಕರ ಶ್ರೀ
ಸಮುದಯತು ಚ ಸಮ್ಯಗ್ದರ್ಶನಜ್ಞಾನವೃತ್ತ
ಪ್ರಕಟಿತಗುಣ ಭಾಸ್ವದ್ಭವ್ಯ ಚಕ್ರಾನುರಾಗಃ ೧

ಜಗತಿ ತಯ ವಲ್ಲಭಃ ಶ್ರಿಯಮುಪೃಥ ವಾಗುರ್ವಭಃ
ಸಿತಾತಪನಿವಾರಣತ್ರಿತಯ ಚಾಮರೋದ್ಭಾಸನಃ
ದೇವಾತ್ಮಯುದಘೂಸ್ನಿತಃ ಪದಪಿನಮ್ರ ಜಂಭಾಸತಃ
ಸನತ್ಕಲಧೀಕ್ಷ್ವದೋಃ ವಿಜಯಪಾರ್ಶ್ವ ತೀರ್ಥೇಶ್ವರಃ ೨

ಶ್ರೀಮನ್ನತೇಂದ್ರ ಮಣಿಮೌಳಿ ಮರೀಚಿ ಮಾಲಾ
ಪಾದಾರ್ಚಿತಾಯ ಭುವನತ್ರಯ ಧರ್ಮನೇಮಿ

* ಕೃತಿಯ ಆಕರ ಗುರುತಿಸುವಲ್ಲಿ ನೆರವಾದ ಶ್ರೀ ಜಿ. ಜಿ. ಮಂಜುನಾಥನ್ ಮತ್ತು ಶ್ರೀ ಸೀತಾರಾಮ ಜಾಗೀರ್‌ದಾರ್ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಕಾಮಾಂತಕಾಯ ಜಿತಜನ್ಮ ಜರಾಂತಕಾಯ
ಭಕ್ತ್ಯಾನ್ನಮೋ ವಿಜಯಪಾರ್ಶ್ವ ಜಿನೇಶ್ವರಾಯ ೪

ವೃತ್ತ :

ನೆಗೆದುರಿ ಭೂರ್ಭುಗಿಲ್ ಭುಗಿಲೆನುತ್ತಮುಗುರ್ವಿಸಿ ಪರ್ವೆ ನೀಳ್ದ ನಾ
ಲಗೆಗಳ ತೆಕ್ಕೆ ತಕ್ಕಿಸೆ ನಭಸ್ಥಲಮಂ ಬಿರುಗಾಳಿ ಏಳ್ಗೆಯಿಂ
ಮಿಗೆ ಪುರಮಂ ಮುಸುಂಕೆ ಕಿಡಿ ಕಣ್ಬಡೆ ಶಾಲೆಗೆ ದೇಹಿ ಸಂಕುಲಂ
ನಗರದೊಳೊಂದನೊಂದೆಡೆಪುದುಂ ಬಿಡೆ ಬಿಳ್ತರೆ ಬೀದಿ ಬೀದಿಯೊಳ್ ೫

ಕಂದ :

ಇದು ದೇವದಾನವರ ಕೋ
ಪದಿನುಣ್ಮಿದ ಕಿಚ್ಚು ನೀರ ಪೂರದೊಳುಂ ನಂ
ದದುದೆಂದೆನುತ್ತ ಚಿತ್ತದಿ
ಹೆದರಿಯು ಬಲಭದ್ರ ಚಕ್ರಿಗಳ್ ಬೇಗದೊಳುಂ ೬

ವಚನ :

ಮುನ್ನಮೀ ವಾರಾಸಿ ನಮ್ಮ ಶುಭೋದಯದಿಂದಾದುದುಮೀಗೆಮ್ಮ ಶುಭೋದಯದಿಂ ಪೋಪುದೆಂದು ನಿಶ್ಚೈಸಿ—

ವೃತ್ತ :

ಇದು ಪುರಮೆಲ್ಲಮಂ ನೆರೆ ಸುಟ್ಟಪುದಿಲ್ಲಿರಲಾಗದಿಂದು ಪೋಗಿಮೀ
ಉದಧಿಯ ತೀರ ಧಾರುಣಿಯೊಳಿದ್ದು ವೀಕ್ಷಿಪೆವೆಂದು ಯಾನಪಾ
ತ್ರದೊಳಪೊಕ್ಕು ಪೋಗಿ ಜಲಮಂ ಕಳಿದು ತಡಿಯಲ್ಲಿ ನೋಡುತಿ
ರ್ಪುದುಮುಳಿದ ಪುರಜನಂ ಬರೆಯಾ ತೆರದಿಮಾಗಳುಂ ೭

ಅಂತು ತಳರ್ದು ದಕ್ಷಿಣಾಭಿಮುಖರಾಗಿ

ಕಂದ :

ತಾವಿರ್ವರು ಪೆರರಟ್ಟಿದ
ಸೇವಕರೆಂಬಂತೆ ನಡೆಯೆ ಮುಳಿದವರಾಗಲ್
ಏವೇಳ್ವೆ ಬಂದು ತಮ್ಮಯ
ಜೀವನದೋಪಾಯಮರಿದುಮಲ್ಲಲ್ಲಿರ್ದರ್ ೮

ತದನ್ವಯಾವತಾರಂ

---

[1] ಕನ್ನಡ ಅಧ್ಯಯನ ಸಂಸ್ಥೆಯ ಕೆ. ಎ. ೬೮ ಕ್ರಮ ಸಂಖ್ಯೆಯ ಹಸ್ತಪ್ರತಿಯಿಂದ ಪ್ರತಿಮಾಡಲಾಗಿದೆ.

ಶ್ಲೋಕ :

ಹೊಯ್ಸಳೋರ್ವೀಶ ವಂಶಾಯ ಸ್ವಸ್ತಿ ವೈರಿ ಮಹೀಭೃತಾಂ
ಖಂಡನೇ ಮಂಡಲಾಗ್ರಾಯ ಶತಧಾರಾಗ್ರ ಜನ್ಮನೇ ॥

ತದನ್ವಯೇ ॥

ವೃತ್ತ :

ನೆಗಳ್ದಾ ಬ್ರಹ್ಮನಿನತ್ರಿ ಸೋಮ ನೆಸೆವಾ ಶ್ರೀ ಸೋಮಜಂ ಭೂತಳಂ
ಪೊಗಳುತ್ತಿರ್ಪ ಪುರೂರವಂ ಪತಿ ಸನ್ನಾಯುರ್ಮಹೀವಲ್ಲಭಂ
ಸೊಗಯಿಪ್ಪಂ ನಹುಷಂ ಯಯಾತಿ ಯದುವೆಂಬುರ್ವೀಶರಾಸ್ಥಾನದೊಳ್
ನೆಗಳ್ದಂ ಶ್ರೀ ಸನಾತನಾನ್ಯನಿಕರಂ ಸಮ್ಯಕ್ತ್ವರತ್ನಾಕರಂ ೮

ವಚನ :

ಆಗಳು ದಕ್ಷಿಣ ಮಧುರೆಯೊಳು ಕೂನಪಾಂಡ್ಯಮಹೀಪತಿಯು ಲಿಂಗಧಾರಣೆಯಂ ಮಾಡುತ್ತಿರೆ ಜಿನಮುನಿಗಳು ಹೇಳೆ ಕೇಳದಿರೆ ಶಶಕಪುರಕಂ ಬಂದು.

ಕಂದ :

ಸಳನೆಂಬ ರಾಜಪುತ್ರನ
ಸಿಳಯುಕೈತಂದು ಭಿಕ್ಷೆಯಾದುತ್ತರದೊಳ್
ತಿಳಿದಿವನಿಂದಂ ಧರ್ಮ
ಗ್ಗಳವಕ್ಕೆಂದಾಗ ದೇವಿಯಾರಾಧಿಸುತಂ ೯

ಆ ಸಳನೃಪತಿಯು ರಾಜ್ಯ
ಶ್ರೀ ಸಂವರ್ಧನಮನೆಯ್ದೆ ಮಾಡುವ ಬಗೆಯಂ
ವಾಸವ ವಂದಿತ ಜಿನಪೂ
ಜಾಸಹಿತಂ ಸಕಲ ಮಂತ್ರ ವಿದ್ಯಾಕುಳಮಂ ೧೦

ಮುದದಿಂ ಜಿನವ್ರತೀಶಂ
ಸದಮಲ ಶ್ರೀ ಶಶಕಪುರದ ಪದ್ಮಾವತಿ ಶ್ರೀ
ಪದನಿಕಟದಲ್ಲಿ ಮಂತ್ರಮ
ನುದಾತ್ತನಾ ಸಳನು ಸಾಧಿಸಲ್ಕೀಯಲ್ಕಂ ೧೧

ವಚನ :

ಮಂತ್ರ ಸಾಧನಮಂ ಮಾಳ್ಪಾಗ ಪುಲಿ ಮೇಲ್ವಾಯೆ ಯೋಗೀಶ್ವರಂ ಕುಂಚದ ಕಾವಿಂ ಪಾಂತಮಂ ಪೊಯಿ ಸಳಾಯೆನಲು ಪೊಯಿದುದರಿಂ ಹೊಯಿಸಳಾಂಕ ಬಂದುದು ಯದುಭೂಪರ್ಗಂ ಶಾರ್ದೂಲ ಚಿಹ್ನಂ

ಕಂದ :

ಆ ಸಂದಯುಕ್ತಿಯೊರದಿಂ
ಕೈಸಾರಲ್ ಸಕಲವಿದ್ಯಾರಾಜ್ಯ ಶ್ರೀಯುಂ
ವಾಸಂತಿಕದೇವಿಯನುಂ
ವ್ಯಾಸಂಗವು ಮಾಡಿ ಪೂಜಿಸುವನನವರತಂ

ಕೈಸಾರ್ದಿರೆ ಪುಲಿಯುಂಡಿಗೆ
ಕೈಸಾರ್ದಿರೆ ವೀರಲಕ್ಷ್ಮಿ ರಿಪುನೃಪರಾಜ್ಯಂ
ಕೈಸಾರ್ದಿರೆ ಪಲಕಾಲಂ
ಹೊಯ್ಸಳನಾವುದೊಳು ನೆಗಳ್ದರಾ ಯದುಕುಲರುಂ

ತತ್ಕುಲದೊಳಗಿಂತು ಮಹೀ
ಭೃತ್ಕುಲದೊಳಗಚಲನಾದನೆಸೆವಂತೆಸೆದಂ
ಸತ್ಕುಲದೆ ವಿಜಿತರಿಪುಭೂ
ಭೃತ್ಕುಳನಾದಿತ್ಯಮೂರ್ತಿ ವಿನಯಾದಿತ್ಯಂ

ತದಪತ್ಯಂ ರಿಪು ನೃಪಭುಜ
ಮದಮರ್ದನನಖಿಳ ವಿಬುಧಜನ ಸಂಸ್ತುತ್ಯಂ
ಉದಿತಾಸ್ಪದ ಮಹಿಮನೆಂದು
ಸದಮಲಗುಣಿ ಅಂಗರಾಜನಂಗಜರೂಪಂ

ಮೆರೆವಂಗರಾಜನೊಪ್ಪುವ
ಕರದಸಿಯುಂ ಬಂದು ಪದಕೆ ಯೆರಗದರಿಗಳಂ
ಧುರದಲ್ಲಿ ಬಿಸಿಯು ನೆತ್ತರ
ಸುರಿಯಿಪುದುಂ ಮುನ್ನ ಬಂದು ನಮಿಸುವರೆಲ್ಲಂ

ಈ ವಸುಧೆ ಪೊಗಳೆ ಏಚಲ
ದೇವಿ [ಗಮೆ] ರೆಯುಂಗ ನೃಪತಿಗಂ ತ್ರಯಕುವರರ್
ತಾವೆನಲಾದರ್ ಬಲ್ಲಾ
ಳಾವನಿಪತಿ ವಿಷ್ಣುನೃಪನು ವಿನಯಾದಿತ್ಯರ್

ಕಂದ :

ಅಂತವರೊಳ್ ವಿಷ್ಣುಮಹೀ
ಕಾಂತಂ ತಾನೆಸೆದ ನಹುಷ ನಳಭರತರವೊಲ್

ಸಂತತ ವಿಶದ ಯಶಃ ಶ್ರೀ
ಕಾಂತಂ ಜಿನಧರ್ಮ ವಾರ್ಧಿ [ವರ್ಧನ ಚಂದ್ರಂ]

ವೃತ್ತ :

ಪೊಡರದೆ ಸಾಧ್ಯಮಾಯ್ತು ಮಲೆಯಾಳಮುಂ ಮಾಳವದೇಶಮುಂ
ನಡೆಯದೆ ಕುಮಾರನಾಡು ತಳಕಾಡುಗಳೆಂಬಿವು ಕೈಸಾರ್ದೊವ
ಗ್ಗೊಡೆಯ ಮುಂಚೆ ಕಂಚಿಕಾಳಾಂಚಿ [ಬೆಸಕೆಯ್ದುದು] ವಿಷ್ಣುವರ್ಧನ
ಕೃಪಾಣಮಂ
ಝುಡಿಯದ ಮುನ್ನ ಕೊಂಕಣ ಗುಜ್ಜರರಡಿಗೆರಗಿದರು
ಏನು ಪ್ರತಾಪಿಯೊ ವಿಷ್ಣುವರ್ಧನಂ

ವೃತ್ತ :

ಚೋಳನೃಪಾಳ ಪಾಂಡ್ಯನೃಪಾಳ ಕೇರಳಭೂಪ ಭುಜಾಳೀಶ ನಿ
ಸ್ಸಾಳನನಾಂಧ್ರ ಗಂಧಗಜಕೇಸರಿಮೋಡೆ ಶಾರದೆ ಧರಣೀ
ಪಾಲ ಘನಾನಿಲಂ ಕದನಶೂರ ಕದಂಬವನಾಗ್ನಿ ವಿಷ್ಣುಭೂ
ಪಾಳನುದಾರ ವೀರ್ಯ [ಸಿಧಿಯಾತನ] ಶೌರ್ಯಮುಸಾರು
ಕೀರ್ತಿಪರ್ ?

ವಚನ :

ಶ್ರೀಮನ್ಮಹಾ ಮಂಡಲೇಶ್ವರಂ, ದ್ವಾರಾವತೀ ಪುರಾಧೀಶ್ವರಂ, ಯಾದವ ಕುಲಾಂಬರ ದ್ಯುಮಣಿ, ಸಮ್ಯಕ್ತ್ವ ಚೂಡಾಮಣಿ ಶಶಕಪುರಿವಾಸಂತಿಕಾದೇವಿ ಲಬ್ಧ ವರಪ್ರಸಾದಂ, ದರದಳ ಮಲ್ಲಿಕಾಮೋದಂ, ಪರಿಹಸಿತ ಶರದುದಿತ ತುಹಿನಕರನಿಕರ ಹರಿಹಸನ ಸುರುಚಿರ ವಿಶದಯಶಸ್ಸಂವಿಕಾವಿಳಾಸಂ, ನಿರತಿಶಯ ನಿಖಿಳವಿದ್ಯಾ ವಿಳಾಸಂ, ವಿನಮದಹಿತನಹಿತ ಚೂಡಾಲೀಢನೂತ್ನರತ್ನ ರಶ್ಮಿಜಾಲ ಛುರಿತ ಚರಣನಖ ಕಿರಣಂ, ಚತುಸ್ಸಮಯ ಸಮುದ್ಧರಣಂ, ಕರಕರಾಳ ಕರವಾಳ ಪ್ರಭಾಪ್ರಚಳಿತ ದಿಶಾಮಂಡಳಂ, ವೀರಲಕ್ಷ್ಮೀ ಕುಂಡಲ ಹಿರಣ್ಯ ಗರ್ಭ ತುಲಾಪುರುಷ ವರದ ವಿಶ್ವಚಕ್ರ ಕಲ್ಪವೃಕ್ಷ ಜಿನೇಂದ್ರ ಮುಖಾ ಶಶಿಮುಖಂ ರಾಜವಿದ್ಯಾವಿಲಾಸಿನೀ ವಿಲೋಲಂ, ಸ್ಥಿರಕೃತ ಯಾದವ ಸಮುದ್ರ ವಿಷ್ಣು ಸಮುದ್ರೋತ್ತುಂಗ ಮಂಗಲೇಂದು ಸಮುಸಮುಜ್ಜೃಂಭಿತ ದಿಶಾಕರಿಜನಂ, ಶರಣಾಗತ ವಜ್ರಪಂಜರಂ, ಅಮಲ ಕಮಲ ಲತಾಲಕ್ಷ್ಮೀ ಲಕ್ಷಿತ ವಕ್ಷಂ, ವಿಬುಧಜನ ಕಲ್ಪವೃಕ್ಷಂ, ವಿಜಯಗಜಘಟಾತ್ಕರಳ ಕದಳಿಕಾಕದಂಬಚುಂಬಿ ತಾಂಬುಲಂ, ಪ್ರತಿದಿನ ಸಮರ್ಧಮಾನನಂದನಂ, ರಿಪುನೃಪಾಲವಾರ್ಧಿ ವಡಬಾನಲಂ ಚರೋಚ್ಚಳಿತ ಜಾತ್ಯಶ್ವಸೂರ್ಯತುರಂಗಸಮಾನಂ, ಚತ್ತ್ರೋದಾತ್ತ ಪುಣ್ಯನುಂ, ಕಂದಮಂದಾಕಿನೀ ಸಿನ್ಧುರೋದಾತ್ತ ಗಂಭೀರಂ, ಗಂಡಗಿರಿನಾಥಂ, ಚಂಡಪಾಂಡ

ಪೋದ್ದಂಡ ಕುಂಡಲೀಶಂ, ಜಗದ್ದೇವಬಳಕಳಕಳಂ, ಚಕ್ರಕೂಟಾಧೀಶ್ವರ ಸ್ಫೋಟನಂ ಸೋಮೇಶ್ವರಾಭಿಮಾನವರ್ಧನಂ ತುಳುನೃಪಾಳಾಸುರ ಜನಾರ್ದನಂ, ಕರವಾಳ ತಾರಕಾಮಯೂರವಾಹನಂ ನರಸಿಂಹ ಸಮ್ಮೋಹನಂ ಇರುಂಗೋಳಬಳ ಜಳಧಿಕುಂಭ ಸಂಭವಂ ಪ್ರತಿಮಹಾರಾಜವ್ಯೋಮಸುಧಾಕರಂ, ದುಷ್ಟಮೌರ್ಪೀಶ್ವರ ಯಮರಾಜಂ ಕಾಳಾಂಜಯಕ್ಕೆ ಮೇಘಾನಿಳನೆಂದಿವು ಮೊದಲಾಗಿ ಸಮಸ್ತ ಪ್ರಶಸ್ತಿ ಸಹಿತ ತಳಕಾಡು ಕೊಂಗು ಕೊಡಗು ಗಂಗವಾಡಿ ನೊಳಂಬವಾಡಿ ಮಾಸವಾಡಿ ಹುಲಿಗೆರೆ ಹಲಸಿಗೆ ಬನವಾಸಿ ಹಾನುಗಲ್ಲು ನಡುಗೊಂಡ ತ್ರಿಭುವನಮಲ್ಲ ಭುಜಬಲವೀರಗಂಗ ಹೊಯ್ಸಳ ಮೊದಲಾದ ರಾಜ್ಯವಾಳುತ್ತಂ ವಿಷ್ಣುಭೂಭುಜನಿರೆ ತದೀಯ ಪಾದಪದ್ಮೋಪಜೀವಿ ನಿರಂತರ ಭೋಗಾನುಭಾವಿ ಜಿನರಾಜಪೂಜಾ ಪುರಂದರಂ ಐಶ್ವರ್ಯಮಂದರಂ ಕೌಂಡಿನ್ಯ ಗೋತ್ರಪವಿತ್ರಂ [ಏಚಿ] ರಾಜಪ್ರಿಯಪುತ್ರಂ ಪೋಚಾಂಬಿಕಾದರೋದನ್ವಂ ಪಾರಿಜಾತಾಶುಭೋದಯಂ ಪಿತೃಮಾತ್ರಾನ್ವಯ ಸಜ್ಜಾತಂ ಕರ್ನಾಟಕ ಧರಾಮರೋತ್ತಂಸಂ ದಾನ ಶ್ರೇಯಾಂಸಂ ಕುಂದೇಂದು ಮಂದಾಕಿನೀವಿಶದ ಯಶಃಪ್ರಕಾಶ ಮಂತ್ರವಿದ್ಯಾವಿಲಾಸಂ ಜಿನಮುಖಚಂದ್ರ ವಾಕ್ಚಂದ್ರಿಕಾಚಕೋರಂ, ಜಿನೇಂದ್ರೋದಿತ ಭಾರತೀ ಕರ್ಣಪೂರಂ ಚಾರಿತ್ರಲಕ್ಷ್ಮೀಕಟಾಕ್ಷವಿಕ್ಷೇಪಣಂ ಧೃತಸತ್ಯವಾಕ್ಯಂ ಮಂತ್ರಿಮಾಣಿಕ್ಯಂ ಜಿನಶಾಸ್ತ್ರರಕ್ಷಾಮಣಿ ಸಮ್ಯಕ್ತ್ವಚೂಡಾಮಣಿ ವಿಶುದ್ಧ ರತ್ನಾಕರಂ ವಿಷ್ಣುವರ್ಧನ ಪ್ರಿಯಂಕರಂ ಚತುರ್ವಿಧ ದಾನ ವಿನಯ ಸನ್ಮಾನ ಪದ್ಮಾವತೀಲಬ್ಧಪ್ರಸಾದಂ ಸದ್ಗುಣಬೋಧಂ ಭಯಲೋಭ ದುರ್ಲಭಂ-ಜಯಾಂಗನಾವಲ್ಲಭಂ ವೀರಭಟ ಲಲಾಟ ಪಟ್ಟಂ ದ್ರೋಹಘರಟ್ಟಂ ವಿಬುಧಜನಫಲಪ್ರದಾಯಕಂ ಹಿರಿಯ ದಂಡನಾಯಕಂ ಅಪ್ರತಿಮ ತೇಜಂ ಜಯಾಂಗನಾರಾಜಂ ಒಂದನೇದು ಭಿನ್ನಜಿನಚೈತ್ಯಾಲಯೋದ್ಧರಣಂ ಎರಡನೆಯದು ಪರನಾರಿಯರೊಳ್ನುಡಿಯನೆಂಬುದು ಮೂರನೆಯದು ಸಮ್ಯಗ್ದರ್ಶನಜ್ಞಾನಂ ನಾಲ್ಕನೇದು ಬೇಡಿದುದಂ ಕೊಡುವುದು ನಾಲ್ಕು ಸಂಘಮಂ ಸತ್ಕರಿಪುದೈದನೆಯದು ನಿತ್ಯದಾನವಾರನೇದು ವ್ಯಸನಂಗಳಂ ಬಿಡುವುದೇಳನೇದು ಸತ್ಪುರುಷರ ಸ್ತುತಿಪುದಿಂತೇಳುಗುಣಂ.

ಕಂದ :

ಆ ಗಂಗಾಭೂಪತಿಗಂ
ನಾಗಲೆದೇವಿಂಗೆಯೊಗೆದ ನವನಿಧಿಯಂದದಿ
ಭೋಗದಿ ಪುರಂದರಗೆ ಸಮ
ವಾಗಿಯು ತಾನಿಪ್ಪ ಬೊಪ್ಪನೆಂಬ ಕುಮಾರಂ

ಪರಮಾರ್ಥಂ ವಿದ್ವದರ್ಥಂ ಕವಿಸದನಧನಂ ವೆರ್ಥವಂದರ್ಶಿ ಸಾರ್ತಂ
ನಿರವದ್ಯಂ ಜ್ಞಾನವದ್ಯಂ ದಳಿತರಿಪುಮಣಂದಂ ತಿರಸ್ಕಾರಕಾದುಂ

ಧರೆ ತನ್ನಂ ಕೀರ್ತಿಪನ್ನಂ ವಿಬುಧಸತಿಗೆ ಪೊನ್ನಂದಿಪ ಶ್ಚಿತ್ಪ್ರಸನ್ನಂ
ಕರೆದೀವಂ ಬೊಪ್ಪದೇವಂ ಸಮರಮುಖ ದಶಗ್ರೀವನುದ್ಯತ್ಪ್ರಭಾವಂ

ಸಮರಾಯತ್ತಾಜಿತ ಕ್ಷೋಹಿಣಿಯತುಳ ಬಲೋದ್ಯಾನದೊಳ್
ಪಾವಕಾನುಕ್ರಮದಿಂದಂ ಕ್ರೀಡಿಸುತ್ತಿರೆ ರಿಪುನೃಪತಿಶಿರಕದರ್ಳಕ
ಕ್ರೀಡಿತಂ ಕ
ತ್ಸಮಯೋದ್ಭೂತಾರುಣಾಂಭೋಭರಿತ ಸಮರದ ಶ್ರೀಸತೀಮಧ್ಯ
ದೊಳ್ ವಿ
ಕ್ರಮಲಕ್ಷ್ಮೀಲೋಲನೋಲಾಡುವ ನೆರೆದ ಬುಧರ್ಗಪ್ಪಡಂ ದೇವ
ಬೊಪ್ಪಂ

ಕಂದ :

ಲೋಭಿಗಳಂತುರೆ ಶುಭೆಯುಂ
ಶೋಭಾಜನನಪ್ಪ ಮನಂಗಾಲದೊಳುಂ
ಭೂಭುವನದೊಳಾಹಾ
ರಾಭಯ ಭೈಷಜಶಾಸ್ತ್ರ ದಾನಮಂ ನೆಗಳ್ದಹನುಂ

ವಚನ :

ತದೀಯ ಗುರುಕುಲಂ

ಕಂದ :

ಗೌತಮಗಣಧರರಿಂ ದಾ
ಯಾತ ಪರಂಪರೆಯ ಕೊಂಡಕುಂದಾನ್ವಯ ವಿ
ಖ್ಯಾತಮಲಧಾರಿ ದೇವರ್
ಪೂತತಪೋನಿಧಿಗಳಾಮುನೀಶ್ವರ ಶಿಷ್ಯರ್

ವಚನ :

ಶ್ರೀಧರಾದ್ಯಂತ ಸುಧಾಂಬುಧಿ
ಪಾರಗ ಶುಭಚಂದ್ರದೇವಮುನಿಪ ವಿಮಳಾಚಾರನಿಧಿ ಗಂಗರಾಜನ
ಸುತ ಬೊಪ್ಪನ ಗುರುಗಳು
ಜಿನಧರ್ಮವಸಧಿ ಸಂವರ್ಧನ ಚಂದ್ರಂ ಗಂಗಮಂಡಳಾಚಾರ್ಯರ್
ಪಾವನಚರಿತರೆಂದು ಪೊಗಳ್ವರು ಪ್ರಭಾಚಂ
ದ್ರದೇವನಂ ಇವರು ಬೊಪ್ಪದೇವನ ದೇವತಾರ್ಚನಾ ಗುರುಗಳು

ವೃತ್ತ :

ಜಲಜಭವಂಗದಿಂ ಬರಿಯುಲ್ಕಡೆಯುಲ್ಲರು ವಿಡಲ್ಕಳ
ವಲ್ಲವೆನಿಪಂತೆ ಪೊಳೆವ ಬೆಳ್ಳಿಯ ಬೆಟ್ಟವೆನೆ ಪೋಲ್ವುದಂ ಜಗ
ತ್ತಿಳಕಮನೀ ಜಿನಾಲಯಮನೆತ್ತಿಸಿದಂ ವಿಭು ಬೊಪ್ಪದೇವನ
ಗ್ಗಳಿಕೆಯ ರಾಜಧಾನಿಯೊಳೊಪ್ಪುವ ದೋರಸಮುದ್ರ ಮಧ್ಯದೊಳ್

ಕಂದ :

ಸಾಸಿರ ದ್ವೈವಕ್ತ್ರೈದೆನ
ಲಾಶಕನಬ್ದಂ ಪ್ರಮಾತಿ ಮಾಘ ಶು ಪಂಚಮಿ
ಈ ಶುಭದಿವಸ ಪ್ರತಿಷ್ಠೆಯಾ
ಹೊಯ್ಸಳನೃಪ ಕುಲನು ಬೊಪ್ಪನೃಪ ಮಾಡಿಸಿದಂ

ಪ್ರತಿಷ್ಠಾಚಾರ್ಯರು ನಯಕೀರ್ತಿ ಸಿದ್ಧಾಂತಿಗಳು

ಕಂದ :

ಭ್ರಾಂತಿನೊಳೇನೋ ಮುನ್ನಂ
ಕಂತುಮದಧ್ವಂಸ ಚಾರಣಂ ಶೋಭಿಸೆಮ
ಸಂತತಿ ಕುಂದಾನ್ವಯದೊಳ್
ಶಾಂತಂ ನಯಕೀರ್ತಿದೇವ ಸಿದ್ಧಾಂತಿಗಳುಂ

ವಚನ :

ಜಿನಶಾಸನಮುಂ ಬೆಳಗಲ್ ಪುಟ್ಟಿದಂ ಶ್ರೀಮೂಲಸಂಘದ ದೇಶೀಗಣದ ಪುಸ್ತಕ ಗಚ್ಛದ ಕೊಂಡಕುಂದಾನ್ವಯದ ಹನಸೋಗೆಯ ಬಳಿಯ ದ್ರೋಹಘರಟ್ಟ ಜಿನಾಲಯ ಪ್ರತಿಷ್ಠಾನಂತರಂ ನಯಕೀರ್ತಿದೇವರು ಕುಡೆ ಇದ್ರಕೊಂಡು ಪೋಗಿ ವಿಷ್ಣುವರ್ಧನ ದೇವಂಗೆ ಬಂಕಾಪುರದೊಳ್ ಕೊಡುವವಸರದೊಳು.

ವೃತ್ತ :

ಕವಿಯೇಱಿಂಗೆಂದು ಬಂದಾ ಮಸಣನ ಸಮಸ್ಸೈನ್ಯಂಗಳಂ ವಿಷ್ಣುಭೂಪಂ
ತವೆ ಕೊಂದು ಪ್ರಾಜ್ಯ ಸಾಮ್ರಾಜ್ಯಮ ಭುಜಬಲದಿಂ ಕೊಳ್ವುದುಂ ಮುತ್ಸಹಂಗಳ್
ಭುವನಕ್ಕಾಗಲ್ಕೆ ಲಕ್ಷ್ಮೀಯುವತಿಂಗಾಸುತನುಂ ಪುಣ್ಯಪುಂಜನುದಾತ್ತಂ
ರವಿತೇಜಂ ಶೂರವೀರಂ ದಶರಥ ನಹುಷಾಚಾರ ಸಾರಂ ಕುಮಾರಂ

ಕಂದ :

ಭೂಭೃತ್ಪತಿ ಮದಕರಿ ಹರಿ
ಶೋಭಾಸ್ಪದ ಪುಣ್ಯಪುಂಜನಚಳಿತ ಧೈರ್ಯಂ

ಮೇದಿನಿಗುತ್ತುಂಗಶ್ರೀ
ಯಾದುದಖಂಡಲನ ವಿಭವ ವಿಷ್ಣುನೃಪಸಂಗಂ

ವಚನ :

ಇಂತು ಅರಿಜಯೋತ್ಸಹವುಂ ಕುಮಾರನ ಜನ್ಮೋತ್ಸಹವುಮಾಗಿರೆ ವಿಷ್ಣುದೇವಂಗೆ ಪಾರ್ಶ್ವದೇವರ ಪ್ರತಿಷ್ಠೆಯ ಪಾರ್ಶ್ವರ್ಪೇಳಿ ಗಂಧೋದಕ ಸೇಸೆಗಳಂ ಕುಡೆ ಭರದಿಂದಿದಿರೆದ್ದು ಪೊಡವಟ್ಟು ಶೇಸೆಯಂ ಕೊಂಡು ಎನಗೆ ದೇವರ ಪ್ರತಿಷ್ಠೆಯ ಫಲದಿಂ ವಿಜಯೋತ್ಸಹವು ಕುಮಾರೋತ್ಸಹವುಮಾದುದೆಂದು ಸಂತೋಷ ಪರಂಪರೆಯನೆಯ್ದಿ ಕುಮಾರಂಗೆ ವಿಜಯನಾರಸಿಂಹನೆಂದು ಪೆಸರಿಟ್ಟು ತ್ರಿಕಾಲ ಪೂಜಾರ್ಚನಾಭಿಷೇಕಕ್ಕೆ ಕ್ಷೇತ್ರಮಂ ಕೊಟ್ಟು.

ಶ್ಲೋಕ :

ಬಹುಭಿರ್ವಸುಧಾ ದತ್ತಾ ರಾಜವತ್ಸಗರಾಧಿಭಿಃ
ಯಸ್ಯ ಯಸ್ಯ ಯಥಾ ಭೂಮೀ ತಸ್ಯ ತಸ್ಯ ಕದಾಚನ

ವಚನ :

ಇಂತು ಪ್ರಶಂಸೆಗೈದು.

ವೃತ್ತ :

ಪೆಸರ್ಗೊಂಡಾವಾವ ದೇಶಂಗಳ ನುತಿಸುವನದಾವಾವ ದೇಶಂಗಳಂ ಬ
ಣ್ಣಿಸಿ ಪೇಳುತ್ತಿರ್ಪುದಾವಾವನಿಪತಿಗಳನುಂ ಲೆಕ್ಕಿಸುತ್ತಿರ್ಪುದೆಂಬಂ
ತೆಸಕಂ ಕೈಗಣ್ಮೆ ನಾಲ್ಕುಂಗಡಲ ತಡಿವರಂ ದಿಗ್ಜಯ ಕ್ರೀಡೆಯೊಳ್ಸಾ
ಧಿಸಿದಂ ಭೂಲೋಕಮಂ ಕ್ಷತ್ರಿಯಕುಳತಿಲಕಂ ಧೀರವಿಷ್ಣುಕ್ಷಿತೀಶಂ

ವಚನ :

ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಲೇಶ್ವರಂ ದ್ವಾರಾವತೀ ಪುರಾಧೀಶ್ವರಂ ಯಾದವ ಕುಲೋದಯಗಿರಿ ಬಾಲದ್ಯುಮಣಿ ಮಂಡಳಿಕ ಚೂಡಾಮಣಿ ಶ್ರೀಮದಚ್ಯುತ ಪದ್ಮನಾಭಾರಾಧನ ಲಬ್ಧ ವರಪ್ರಭಾವಂ ಸಕಲ ದಿಕ್ಪಾಲಕ ಪರಾಕ್ರಮ ಕ್ರಮಣ ಪಟು ಪರಾಕ್ರಮಮೋಕ್ಷಭಾವಂ ಶತ್ರು ಕ್ಷತ್ರಿಯ ಕಳತ್ರ ಗರ್ಭಸ್ರಾವಂ ನಿಪಾವಕ ದಿಕ್ಪಾಲ ಗಭೀರ ವಿಜಯ ಶಂಖನಾದ ಪದ್ಮಾವತೀದೇವಿಲಬ್ಧ ವರಪ್ರಸಾದಂ ಪ್ರತಿದಿನ ನಿರತ ನಿರುಪಮ ಹಿರಣ್ಯಗರ್ಭ ತುಳಾಪುರುಷಾದಿಕ್ರತು ಸಹಜ ಸಂತರ್ಪಿತ ಪಿತೃ ದೇವ ಗುರು ಪ್ರತಿಪಕ್ಷ ಲಕ್ಷಿತನುಂ ಭುಜಬಳಪ್ರಭಾವ ನಿರ್ಜಿತಾರಿ ರಾಜವಿಷ್ಣುವೀಶ್ವರ ವಿಜಯನಾರಾಯಣಾಂದ್ಯಸಂಖ್ಯಾತ ದೇವ ಕುಲಾಚಲ ಯೂಥ ಜಲಧಿ ಸಮುದ್ರ ಮುದ್ರಿತನುಂ ಮಹೀತಲ ವಿತರಣ ಚಾತುರ್ಯ ಚತುರಾನನಂ ಚತುರ್ಗುಣ ಮಂಡಿತ ಪಂಡಿತಗೋಷ್ಠಿ ಸದಾನಂದನುಂ ಸಮರಮುಖ ಗೃಹಿತ ಹಿತ ಮಹಿತಾಂತ

ವಿಲಾಸನುಂ ಶಶಾಂಕ ಮುಖನಿರೀಕ್ಷಣ ಕೃತಸೂರ್ಯ ನಿರೀಕ್ಷಣ ನೃಸಿಂಹಧ್ಯಾನ ನಿಶ್ಚಲ ಭೂತ ನಿರ್ಮಲ ಚರಿತನುಂ ಪರಾಗವಿತ್ರನುಂ.

ವೃತ್ತ :

ಇನಿತುಂ ಕೋಪಾನುಲೇಪಂ ಭ್ರುಕುಟಿ ನಿಕಟದೊಳ್ ಪುಟ್ಟಿ
ದಾವಾಗ್ನಿಯಿಂದಂ
ಘನದೇಶಾಧೀಶರುಂ ಕಳ್ತುರಿಯೆ ನೀಧೀರ ದಿಶಾಧೀಶರೊಳ್ ತಾಗಿ ತಪ್ಪೆ
ನೆನಲಾಶಾದಂತಿಯೂಥಂಗಳು ನಡ ನಡುಗಲ್ ಉಳ್ಕಿ ಪೊಳ್ಮಲ್
ಸಮುದ್ರಂ
ಮೊನೆ ತಾಳಂ ಗೂಡುಗುಂ ಪೋದಮುವ ನೆಳೆಯುಮುಂ ವಿಷ್ಣು ಜಿಷ್ಣು
ಪ್ರಭಾವಂ

ಶ್ರೀಕಾಂತಂ ನೇತ್ರ ನಿಲೋತ್ಪಲ ವದನ ಸರೋಜಾತ ತಸ್ಮೇರಲೀಲಾ
ಲೋಕಂ ಲೋಕತ್ರಯೋಜ್ಜೃಂಭಿತ ವಿಶದಯಶ ಶ್ಚಂದಿಕಾ ದ್ಯೋತ
ಪೂರ್ಣ
ವ್ಯಾಕೀರ್ಣಂ ಯುಕ್ತ ಯುಕ್ತಂ ಕ್ರಮುಕಳಿತಕು ಭೃಶ್ಚಕ್ರ ಭೇದ
ಪ್ರಮೋದ
ಶ್ರೀಕಂ ಶ್ರೀ ವಿಷ್ಣುಭೂಪಂ ಬೆಳಗುಗೆ ಜಗಮುಂ ರಾಜಮಾರ್ತಾಂಡ
ದೇವಂ

ವಚನ :

ಹಿರಿಯುಮಂ ಬಲ್ಲಾಳರಾಯುಂ ಅವನನುಜಂ ವಿಷ್ಣುವರ್ಧನಂ ಅವನನುಜಂ ವಿನಯಾದಿತ್ಯಂ.

ಕಂದ :

ಎನಿತಿತ್ತಡಮೆನಿತಿರದಡ
ಮನಿತೊರ್ಪುಂ ಕೂರ್ಪುಮುಪ್ಪುದಪ್ಯವರ್ಗಂತುಂ
ಕೆಣಕಿದಡಂ ಬಿಡದಿಹ ಸ
ದ್ಗುಣಿ ಬಲ್ಲಾಳಂಗೆ ಬಾಗದಿಪ್ಪವನಾವಂ

ವಚನ :

ಅಂತು ಸುಖಸಂಕಥಾವಿನೋದದಿಂ ಬೇಲೂರ ರಾಜಧಾನಿ ಬೀಡಿನೊಳು ರಾಜ್ಯಂಗೆಯ್ಯುತ್ತಿರೆ ದ್ವಿತೀಯದ ಮರಿಯಾನೆ ದಂಡನಾಯಕಗೆ ಲಕ್ಷ್ಮಿಗೆ ಸಮಾನೆಯಾದ ಚಾಮವೆ ದಂಡನಾಯಕಿಗಂ ಪುಟ್ಟಿದ ಪದ್ಮಲೆ ಚಾವಲೆ ಬಪ್ಪದೇವಿಯರೆಂಬೀ ಮೂವರುಂ ಶಾಸ್ತ್ರ ನೃತ್ಯ ಗೀತದಲ್ಲು ಪ್ರೌಢೆಯರಾಗಿರೆ ನೋಡಿ ಬಲ್ಲಾಳದೇವಂ

ವಿವಾಹವಾಗೆ ಶಕವರುಷ ೧೦೨೫ ಸ್ವಭಾನುಸಂವತ್ಸರದ ಕಾರ್ತಿಕ ಶು ೧೦ ಗುರುವಾರ ಮರಿಯಾನೆ ದಂಡನಾಯಕಗೆ ಸಿಂದಗೆರೆ ಪ್ರಭುತ್ವಮಂ ಕುಡೆ ಮತ್ತಂ ವಿಷ್ಣುವರ್ಧನ ದೇವಂ ಗಂಗವಾಡಿ ತೊಂಬತ್ತು ಸಾವಿರ ನೊಳಂ ಬವಾಡಿ ಮೂವತ್ತಿರ್ಚ್ಛಾಸಿರ ಬನವಾಸಿ ಪನ್ನಿರ್ಚ್ಛಾಸಿರಮಿವರೊಳು ದುಷ್ಟನಿಗ್ರಹ ಶಿಷ್ಟಪ್ರತಿಪಾಲನೆಯುಂ ಮಾಡುತ್ತಿರೆ ಕಂಚಗೊಂಡದ ವಿಷ್ಣುವರ್ಧನ ದೇವಾನ್ವಯ ಮಹಾಪ್ರಚಂಡ ದಂಡನಾಯಕರು ಗಂಗಾವಿಷ್ಣುವರ್ಧನರೆಂಬವರು ಸಮಸ್ತರಾಜ್ಯಂಬರ ನಿರೂಪಿತ ಮಹಾಮಾತ್ಯಪದವಿ ಪ್ರಖ್ಯಾತರುಂ ಅಭಿಜಾತರುಂ ಶ್ರೀಮದರ್ಹತ್ಪರಮೇಶ್ವರ ಪಾದಪಯೋಜ ಷಟ್ಪದರುಂ ರತ್ನತ್ರಯಾಳಂಕೃತ ಶಮದಮ ನಯವಿನಯ ವೀರವಿತರಣಾದಿ ಗುಣಾಭರಣರುಂ ಜಿತ ನಿಟಿಲಾರ್ಧೇಂದು ಮಂಡಳರುಂ ನಿರವದ್ಯ ಶಾದ್ವಾದ ಲಕ್ಷ್ಮೀಕುಂಡಲರುಂ ನಿತ್ಯಭಿಕ್ಷುಕ ನಿರತ ನಿರುಪಮ ಜಿನಪೂಜೋತ್ಸಹ ಜನಿತ ಪ್ರಮೋದರುಂ ಚತುರ್ವಿಧ ದಾನವಿನೇಯರುಂ ಶ್ರೀಮದಕಳಂಕ ಲಕ್ಷ್ಮೀದಶನೋಪಮಾನರುಂ ಪರಸ್ಪರ ಸ್ನೇಹಮೋಹಾಧೀನರುಮಾಗಿ ಶ್ರೀಮನ್ಮಹಾಪ್ರಧಾನ ಮರಿಯಾನೆ ದಂಡನಾಯಕ ಶ್ರೀಮದಾದಿ ಭರತೇಶ್ವರನ ದಂಡನಾಯಕಗಭೇದಭಾವದಿಂ ಗಣ್ಣಮಣೀಸ್ವರೂಪರಾಗಿ ಭೀಮಾರ್ಜುನ ಲವಕುಶಲರಿವರೆನಲ್ಕಮಿರೆ

ಕಂದ :

ಎರಗದೆ ಬುಧಮಧುಕರಗಳು
ಪೆಱಪಿಂಗದೆ ತನ್ನನೆಂದು ಮಲಗಿಪ್ಪನೆಗಂ
ಮರಿಯಾನೆ ದಾನಗುಣದೆರೆ
ವರಿಯದಿರಲ್ಪತಿಗೆ ಪಟ್ಟದಾನೆಯಿದೆಂಬರ್

ಮರುತವನೋದಿಸಲಂತಾ
ನೆರೆ ರಾಜ್ಯಶ್ರೀವಿಳಾಸಮಂ ನೆರೆಯಲುಮೀ
ಮರಿಯಾನೆಗೆರಗುವುದಕಂ
ಪರಿ ಮೆಚ್ಚಿಯು ಪಟ್ಟದಾನೆ ತಾನೆಂದೆಂಬರ್

ವಚನ :

ಎನೆ ಮೆಚ್ಚಿ ವಿಷ್ಣುನೃಪಂ ಧ್ವಜನೀಪತಿತ್ವಮನಿತ್ತಂ.

ಎರಗಿದ ಸುಭಟರ ಮಕುಟದಿ
ತುರುಗಿದ ಮಾಣಿಕದ ತಣ್ಣ ಬಿಸಿಲಿನ ಪೊಳಪಿಂ
ಮಿರುಗುವ ಜಿನಪದ ನಖರುಚಿ
ಮರಿಯಾನೆಗೆ ಮಾಳ್ಕೆ ಸಕಳ ಮಹಿಮಾಸ್ಪದಮಂ

ಆತನ ಸತಿ ಮುನ್ನಿರ್ದಾ
ಸೀತೆ ಪ್ರಭಾವತಿಗೆ ರತಿಗೆ ವಾಣಿಗೆ ಗಾಂಗೆ

ಮಾತೇಂ ಭೂದೇವಿಗೆ ಸರಿ
ಪೋತಳ್ ಮುಳಿದವರಿಗವಳ ಹೋಲಿಸಬಾರದು

ವೃತ್ತ :

ಅನುಪಮಮಪ್ಪ ತನ್ನ ಪತಿಭಕ್ತಿ ನಿರ್ಮಳ ಧರ್ಮಯುಕ್ತಿ
ಜನಪತಿಯು ಭಾವಿಸುವ ಶಕ್ತಿ ಕುನಯ ಕುಮಾರ್ಗದೊಳು ವಿರಕ್ತಿ ರೂ
ಪಿನ ವಿಳಾಸ ವಿಭ್ರಮಂ ವಂಶವರ್ಧನ ಕರರಪ್ಪ ಸತ್ಸುತರು ಒಪ್ಪು
ವಿನ ಮರಿಯಾನೆ ದಂಡನಾಥನ ವನಿತೆ ಜಗಕ್ಕೆ ಸೋಪಲೆಯಾದಳೇಂ
ವರ್ಣಿಪೆಂ

ಕಂದ :

ತೊಳ ತೊಳಗಿ ಬೆಳಗಿ ಕೀರ್ತಿಯ
ವಳೆಯುದಿ ನಳವಟ್ಟು ವಿಷ್ಣುಭೂಪನ ರಾಜ್ಯ
ಸ್ಥಳಕೆಸೆವ ಸೌಧಕಿಕ್ಕಿದ
ಕಳಶಂಬೊಲ್ ದಂಡನಾಥಮೋಂ ಕೇವಳಮೋ

ವೃತ್ತ :

ಸಿರಿಗೆ ಪೊಸಮುತ್ತಿನ ಸರದಂತಿರೆ ತನ್ನ ವಿಶಾಲ ವಕ್ಷದೊಳ್
ಸರಸ್ವತಿಯ ಪಣೆಯ ತಿಲಕದಂತಿರೆ ವೀರಲಕ್ಷ್ಮಿಯ ಶೋಳಮಣಿ
ಬಂಧದಂ
ತಿರೆ ಕೀರ್ತಿ ವಿಸ್ತರ ಮಹಾಲತೆಯಂತಿರೆ ಸೊಬಗುಗಳ್ ಶರಧಿಯಂ
ತಿರೆ ಜಿನೇಂದ್ರ ಧರ್ಮ ತಾ ಬರೆದಂತಿರೆ ಏಂ ಮಹಾತ್ಮನೊ ಮರಿಯಾನೆ
ದಂಡನಾಯಕಂ

ಕಂದ :

ವಾರಿಧಿವೃತ ಭೂಲೋಕದೊ
ಳಾರಯ್ಯಲು ಇವನ ಸರಿಗೆ ಅಮಮಂ ಭರತಂ
ಗೋರಂಕೆ ಜಯಕುಮಾರಂ
ಸೇರಿದವೊಲ್ ಇರ್ಪನವನುಮೀ ಕಲಿಯುಗದೊಳ್

ಭರತೇಶ ಚಕ್ರವರ್ತಿಯ
ಚರಿತವೊ ನಿಜಚರಿತವೆನಲು ವಿಷ್ಣುನೃಪಾಲಂ
ಕರವೆಸೆವನನ್ವಿತಾಖಿಲ
ಪುರುಷಾರ್ಥಂ ಭವ್ಯ ಸೇವ್ಯ ಜಂಗಮತೀರ್ಥಂ

ವೃತ್ತ :

ನಿರಪಾಯಂ ನಿಷ್ಕಳಂಕಂ ನಿಹತರಿಪುಕುಳಂ ನಿರ್ಭರಂ ರಾಜಲಕ್ಷ್ಮೀ
ಪರಿರಂಭಾರಂಭ ಶುಂಭತ್ಸುಖಮಯ ಮತಿ ತೀವ್ರ ಪ್ರತಾಪಂ ಪ್ರಕಾಶ
ಸ್ಫುರಿತಂ ಪದ್ಮಾಕರಾಬ್ಜ ಗ್ರಹಣಕಳಿತ ನಿತ್ಯೋದಯಂ ಲೋಕದೊಳ್ ಸು
ಸ್ಥಿರನಕ್ಕೆಂದುಂ ಯಶಃ ಶ್ರೀಜಿನಮತ ಗಗನೋದ್ದಂಡ ಚಂಡಾಂಶು
ಬಿಂಬಂ

ಕಾಂತಂ ಶ್ರೀಭವ್ಯ ಚೂಡಾಮಣಿ ಗುಣಮಣಿ ಚಿಂತಾಮಣೀ ಕಲ್ಪವೃಕ್ಷಂ
ಕಾಂತಂ ತ್ರೈಲೋಕ್ಯನಾಥಂ ಪರಮ ಜಿನಪನೇ ದೈವ ಸಮ್ಯಕ್ತ್ವರತ್ನಂ
ಶಾಂತಂ ಶ್ರೀಮಾಘಣಂದಿವ್ರತಿಪತಿ ಗುರುಸಿದ್ಧಾಂತವೇ ಜೈನಶಾಸ್ತ್ರ
ಭ್ರಾಂತಿಂ ನಿಲ್ಲೆಂದು ಸಾರುತ್ತಿಹನು ಧರಣಿಯೊಳ್ ಚಾರುದಂಡಾದಿ
ನಾಥಂ

ವಚನ :

ಇಂತು ತನ್ನ ಭಾಗ್ಯಾಭಿವೃದ್ಧಿಯಿಂ ಸುಗುಣಪ್ರಸಿದ್ಧಿಯಿಂ ಸಕಲಜನ ಸಮೃದ್ಧಿಯಿಂ ಚತುಃ ಕಷಾಯ ಶುದ್ಧಿಯಿಂ ಜಗತ್‌ಸೇವ್ಯ ಭವ್ಯ ಸ್ವಯಂಬುದ್ಧನುಂ ಮಹಾಯುದ್ಧ ಪ್ರಸಿದ್ಧವ್ಯಸನ ವಿರೋಧಿ ವೀರಭಟೋದ್ಘಟ್ಟ ನಿಜಭುಜಬಳನಭಿನವ ಜಯಕುಮಾರಂ ವಿನಯ ಜನಾರಾಧಕನುಂ ಜೈನ ಶಾಸನೋದ್ಭಾಸನ ಸೌಧರ್ಮೇಂದ್ರನುಂ ಪರೋಪಕಾರ ಖಗೇಂದ್ರನುಂ ಶ್ರೀಮತ್ಕಂಚಿಗೊಂಡದ ವಿಷ್ಣು [ವ] ರ್ಧನನಣುಗನ ದಂಡನಾಯಕ ಮನ್ವಯಾಗತ ಮಹಾಪ್ರಧಾನಪದವಿಯನಳಂಕರಿಸಿರೆ ಮತ್ತಂ ಮರಿಯಾನೆ ದಂಡನಾಯಕನ ಸಖನು.

ಕಂದ :

ಸ್ವೀಕೃತ ಸದ್ಗುಣ ನಿಕರಂ
ಲೋಕಪ್ರಭು ಗಂಗರಾಜ ಹೊಯ್ಸಳರಾಜ್ಯ
ಕ್ಯೇಕಮುಖ ದಂಡನಾಯಕ
ಲೋಕದೊಳತಿ ಕೀರ್ತಿಯುತನು ಚೂಡಾರತ್ನಂ

ವಚನ :

ಚಮೂಪನೆಂಬ ಜೈನಬ್ರಾಹ್ಮಣಂ ಪವಿತ್ರೀಭೂತ ಭಾರದ್ವಾಜ ಗೋತ್ರಾನ್ವಯಂ ಕಮಲಜಕುಲಭಾನು ಸ್ವೀಕೃತ ಭೂಪಸೌಜನ್ಯ ಶಾಂತಮೂರ್ತಿನತಿಪ್ರೌಢ ಸುವಿವೇಕಿಮಾನ್ಯ ಜಿನಮತಾಂಬರ ಸುಧಾಕರ ದಂಡನಾಥ ಚೂಡಾರತ್ನಂ ಆತನ ಮನೋವಲ್ಲಭೆ ಅಂಬಿಕೆ ಆ ದಂಪತಿಗಳಿಗಭಿನವ ಚಮೂಪನಾತ್ಮಜನಾಗಿರೆ ಚಮೂಪ ಮರಿಯಾನೆ ದಂಡನಾಯಕರು ಚಂದ್ರಾದಿತ್ಯರಂತಿರೆ ಕೃತಕೃತ್ಯರು ಆ ಚಮೂಪನ

ಹಿರಿಯ ಕುಮಾರಂ ಶ್ರೀಮನ್ಮಾಚಣ್ಣ ದಂಡನಾಯಕಂ ಕಲ್ಪಲತೆ ಕಲ್ಪದ್ರುಮ ದಂತಿರೆ ಧಾಮಾದ್ರೀವಿತಲೇಪ ಕಾಂತನೃತ ಪರಿವೃತ್ಯ ಸತ್ಯಾಧೀನ ಮಾಂಗಲ್ಯಗುಣ ನಿರ್ಮಲಜಗ ಪ್ರತ್ಯಾಖ್ಯಾತ ನವ್ಯಗವ್ಯಭವ್ಯಾನಂದಕರ ದಿನವಂ ಸಲಿಸುತ್ತಂ ಪೆಂಪಿಂ ಪಿರಿಯಾನುಸುವೃತ್ತಿಯಿಂ ಪ್ರತಿಪತ್ತಿಯಿಂ ಶ್ರೀಕಂಚಿಗೊಂಡ ವಿಕ್ರಮ ಗಂಗ ವಿಷ್ಣುವರ್ಧನ ಹೊಯ್ಸಳದೇವಾನ್ವಯ ಪರಂಪರೆಯ ದಂಡನಾಥಾನ್ವಯಂ ಸರ್ವಾಧಿಕಾರ ಮಾಣಿಕಭಂಡಾರ ಪ್ರಾಣಾಧಿಕಾರಿಗಳಾಗಿ ಸುಖಸಂಕಥಾ ವಿನೋದದಿಂದಿರೆ ಶ್ರೀಮದ್ರಾಜಧಾನಿ ದ್ವಾರಸಮುದ್ರದ ನೆಲೆವೀಡಿನಲ್ಲು ಶ್ರೀ ವಿಷ್ಣುವರ್ಧನಂ ಪೃಥ್ವೀಸಾಮ್ರಾಜ್ಯಂ ಗೆಯ್ಯುತ್ತಿರೆ ಶಕವರುಷ ೧೦೬೦ನೇ ಪಿಂಗಳ ಸಂವತ್ಸರದ ಪುಷ್ಯ ಶುದ್ಧ ೧೦ ಆದಿವಾರ ಉತ್ತರಾಯಣ ಸಂಕ್ರಾಂತಿಯಲ್ಲು ತಮ್ಮನ್ವಯಲ್ಲಿ ಬಂದ ಸಿಂದಗೆರೆಯಲ್ಲು ಬಸದಿಯಂ ಕಟ್ಟಿಸಿ ಶ್ರೀಮೂಲಸಂಘ ದೇಶೀಯಗಣ ಪುಸ್ತಕಗಚ್ಛ ಕುಂದಕುಂದಾನ್ವಯ ಹನಸೋಗೆ ಬಳಿಯಾಚಾರ್ಯರು ಗಂಡವಿಮುಕ್ತ ಸಿದ್ಧಾಂತದೇವರ ಮಂತೇವಾಸಿ ಮೇಘಚಂದ್ರದೇವರು ಪ್ರತಿಷ್ಠಾಚಾರ್ಯರಾಗೆ ವಿಷ್ಣುವರ್ಧನದೇವನನು ಮತದಿಂ ಪ್ರತಿಷ್ಠೆ ಮಾಡಿಸಿ ಸೀಮೆಯಂ ಬಿಡಿಸಿಕೊಟ್ಟು ಪೂಜೋತ್ಸಹಾ ಮಾಡಿಸಿದರು.

ಭೂಮಿದಾನಂ ಮಹಾದಾನಂ ನ ಭೂತೋ ನ ಭವಿಷ್ಯತಿ
ತಸ್ಯಾಪಹರಣಂ ಪಾಪಂ ನ ಭೂತೋ ನ ಭವಿಷ್ಯತಿ

ವಚನ :

ಸ್ವಸ್ತಿಸಮಧಿಗತ ಪಂಚಮಹಾಶಬ್ದ ಮಹಾಮಂಡಲೇಶ್ವರಂ ದ್ವಾರಾವತಿ ಪುರಾಧೀಶ್ವರ ಯಾದವ ಕುಲಾಂಬರ ದ್ಯುಮಣಿ ಸಮ್ಯಕ್ತ್ವ ಚೂಡಾಮಣಿ ಮಲೆಪರೊಳ್ ಗಂಡಾದ್ಯನೇಕ ಬಿರುದಾವಲಿ ವಿರಾಜಿತ ಸಮಾಲಂಕೃತರಪ್ಪ ಶ್ರೀಮದ್ಭುಜಬಲ ವೀರ ಹೊಯ್ಸಳ ಗಂಗ ವಿಷ್ಣುವರ್ಧನ ಬಿಟ್ಟಿಗ ಬಲ್ಲಾಳ ಉದಯಾದಿತ್ಯರು ಗಂಗವಾಡಿ ತೊಂಬತ್ತಾರು ಸಾಸಿರ ಗಡಿ ಕೊಂಗು ಕೊಡಗು ಮೊದಲಾಗಿ ಏಕಚ್ಛತ್ರ ಚ್ಛಾಯೆಯಿಂ ತಳಕಾಡೊಳುಂ ಕೋಳಲಾಪುರದೊಳುಂ ಸುಖಸಂಕಥಾ ವಿನೋದದಿಂ ರಾಜ್ಯಂ ಗೆಯ್ಯುತ್ತಿರೆ.

ವೃತ್ತ :

ಶ್ರೀಮತ್ಸ್ವಾಮಿ ಸಮಂತಭದ್ರ ಮುನಿಪೋ ದೇವಾಕಲಂಕ ಸ್ತುತಃ
ಶ್ರೀಪೂಜ್ಯಾಂಘ್ರಿರುದಾತ್ತವೃತ್ತಿ ನಿಳಯಃ ಶ್ರೀ ವಾದಿರಾಜಾಂಬುಧೌ
ಆಚಾರ್ಯೋ ದ್ರವಿಡಾನ್ವಯೋ ಜಿನಮುನಿಃ ಶ್ರೀ ಮಲ್ಲಿಷೇಣವ್ರತೀ
ಶ್ರೀಚೋಳಃ ಪರಿಪಾಲಿತಾಖಿಲ ಮುನಿಸ್ಸೋನಂತವೀರ್ಯ ಕ್ರಮಃ

ಕಂದ :

ಜಿನನಿಷ್ಟದೈವ ಅಜಿತಂ
ಮುನಿಪತಿ ಗುರು ಹೊಯ್ಸಳೇಶನಾಳ್ದನು ಮಣಿಸಂ

ಘನ ದಂಡನಾಯಕಂ ಎಂ
ದೆನೆ ಜಿನಪದಸರಿಕುಶರವೆಂಬುದು ಪೊಳಲುಂ

ವಚನ ;

ಆ ಪೊಳಲಾಧಿಪತಿಯು ಹರಿಕುಲಾಬ್ಧಿವರ್ಧನ ಸುಧಾಂಶುವಿರೋಧಿ ಬಳಾಂತಕಂ [ಮಹಾಮಾತ್ಯ ಕುಳೋದ್ಭವಂ] ಸಕಳಕಲಾಕುಶಲ ಜಿನಮತಾಬ್ಧಿವರ್ಧನ ಚಂದ್ರಮ ಶಾಸನಚಕ್ರವರ್ತಿ ಲೋಕತ್ರಯಹಿತಾರ್ಥಿ ಮಣಿಸಂಘ ಚಮೂಪರ್ ಶುದ್ಧಚರಿತ್ರ ಪವಿತ್ರಯುವಂಗೆ ಸೋಮಲೆ ಮನಃ ಪ್ರಿಯವಲ್ಲಭೆಯಾದಳು.

ಕಂದ :

ತೊಳ ತೊಳಗಿ ಬೆಳಗಿ ಕೀರ್ತಿಯು
ವಳಯುದಿಯುಳವಟ್ಟು ತನ್ನ ರಾಜ್ಯಶ್ರೀಯೊಳ್
ನಳನಳಿಸಿ ಬೆಳೆದು ದಶದಿ
ಗ್ವಳಯದೊಳುಂ ತುಂಬಿ ತುಳುಕುವುದು ಅನವರತಂ

ವಚನ :

ಮಣಿಸಂಘ ಚಮೂಪಮೆಂಬೆಸೆವ ಶಾಸನ ಚಕ್ರವರ್ತಿಗಿಂತೆಸೆಸಲೊಡಂ ಪೊಗಳ್ತೆ ಕನಗಾಗಿರೆ ಪುಟ್ಟಿದ ಚಾಮುರಾಜನುಂ ಕನಕ ಮರ್ಯೆಯರೆಂಬ ರತ್ನತ್ರಯ ಮೂರ್ತಿ ಕೀರ್ತಿಸ್ವಾರ್ಥರಾಗಲುಂ[1].

ಕಂದ :

ಅವರೊಳಗೆ ಚಾಮುರಾಜನು ಪಿರಿಯಸುತಂ
ಅವಗೇಕಬ್ಬೆ ಸತಿಯಾಗಲ್ಕಂ
ತು ವರ ಪ್ರಸಿದ್ಧ ಪುರುಷರು ನವಪುಣಿಸ
ಮರಯ್ಯ ಬಿಟ್ಟದಯ್ಯಾಖ್ಯ ದೊಳುಂ

ತೀವಿ ಬೆಳೆಯಲ್ಕೆ ಬಿಟ್ಟದ
ಜೀವಗೆ ಶುಭದಿನ ಮುಹೂರ್ತ ದೊಳ್ ನಾಬದಿಂದಂ
ದೇವಾಂಬೆಯು ಸತಿಯಾಗಲು
ಭೂಪಸುತ ದೇವಣ್ಣಯರಸು ಮುದ್ಭವಿಸಿದನುಂ

ಕೊಳನೊಂದಂ ಕಟ್ಟಿಸಿದು
ಜ್ವಳಕೀರ್ತಿ ಪತಾಕಮೂರ್ತಿ ಘನಸೌಖ್ಯಶ್ರೀ

1 ಪುಣಿಸ ಚಮೂಪನನ್ನು ಇಲ್ಲಿ ಮಣಿಸಂಘ ಚಮೂಪ ಎಂದು ಕರೆದಿದೆ.

ನಿಳಯಂ ವಿಖ್ಯಾತಂ ಬಹು
ಬಳಗಂ ಎಳೆನೇಸರ ಪೋಲ್ವನಾ ನರನಾಥಂ

ಕೇವಳಮೆ ನೆಗಳ್ದ ಪೊಯ್ಸಳ
ಭೂವನಿತೇಶ್ವರನ ಸಂಧಿವಿಗ್ರಹಿ ಪುಣಿಸಂ
ಏ ವೇಳ್ವೆನವನ ಕೀರ್ತಿಸೆ
ದೇವೇಂದ್ರಂಗಲ್ಲದಿಲ್ಲ ಬಾರದುಮಾರ್ಗಂ

ವೃತ್ತ :

ಕೊಂಗರಡಂಗಿಸಿ ಮಲೆಯಾಳರ ಮರ್ದಿಸಿ ತೆಲುಗರ ಪೊರಲ್ಚಿ
ಮಾಣದೆ ಮಾಳವರ ಧೂಳಿಗೊಂಡು ಶ್ರೀಪಾಳ ತೋಳಬಿಂಕಮಂ
ಬೆದರಿಸಿ
ಪೊಕ್ಕು ನೀಲಗಿರಿಯಂ ಜಯಲಕ್ಷ್ಮಿಗೆ ಲೋಲ
ಕೀರ್ತಿಯು ಮಾಡಿದ ಪುಣಿಸ ಚಮೂಪ ಭೂಪನುಂ

ಅದಟಂ ಹೊಯ್ಸಳ ಭೂಪನೊಮ್ಮೆ ಬೆಸಸಲ್ ನೀಲಾದ್ರಿಯಂ
ಕೊಂಡು ತ
ನ್ನೊದವಿಂದಂ ಮಲೆಯಾಳಮಂ ಕದನದೊಳ್ ಕೈಕೊಂಡು ತಾ
ಸಂತತಾ
ಭ್ಯುದಯಂ ಕೈಕೊಳೆ ಕೇರಳಾಧಿಪತಿಯಾಗಿರ್ದ ಬೈಲ್ನಾಡ ಸಂ
ಪದಮಂ ಕಾಣಿಸಿ ಆಳ್ದನಿಂತು ಪುಣಿಸಂ ಶ್ರೀದಂಡನಾಥಾಧಿಪಂ

ಕೆಟ್ಟು ಮದೋದ್ಧತಂ ನಡುಗುತಂ ಸೆರೆಬೆಟ್ಟಮಂ ಕಿರಾತ . . .
. . . . [ನಿತ್ತ] ರಿಸಲಾರದೆ ಸುಯಿಲಿಟ್ಟು ಬಂದೊಡೆ ಕೃಷೀವಲಯು
ನೆರವಿಸಲಾರದೆ
ಅಟ್ಟುದಂ ಕೊಟ್ಟು ಕರಂಜದ ಮರಪೊಡ ಬಟ್ಟೆಯೊಳೆತ್ತಿ ದಂಡನಾಥ
ಪುಣಿಸನಂ ನಿಲ್ಲಿಸುತ ನೆಗಳ ಲ್ದೊನಾಂತರದಿ ಪೊಕ್ಕಡೇ

ವಚನ :

ಇಂತು ಪರಾಕ್ರಮದಿ ಪುಣಿಸ ಚಮೂಪ ಮಹಾರಾಜಂ ಸಂತತ ರಾಜ್ಯಾಂಗನಾ
ತುಂಗ ಪಯೋಧರಾಲಿಂಗ ಸಂಗತನಾಗಿ ರಾರಾಜಿಸುತಂ.

ಕಂದ :

ಗಂಪುರಿಯುದು ಗಂಗರ
ಪರಿಯಿಂದಂ ಗಂಗವಾಡಿ ತೊಂಬತ್ತರು ಸಾ

ಸಿರ ಬಸದಿಗಳನಲಂ
ಕರಿಸಿದಪಂ ಪುಣಿಸರಾಜ ದಂಡಾಧೀಶಂ

ಸ್ವಸ್ತಿ ಶ್ರೀ ಶಕವರುಷ ೧೦೯೮ಯ ದುರ್ಮುಖಿ ಸಂವತ್ಸರದ ಜೇಷ್ಟ ಬ ೧ ಅರ್ಕವಾರದಂದು ತುಲಾರಾಶಿಯೊಳು ಬೃಹಸ್ಪತಿಯಿರೆ ಅದೆ ಲಗ್ನದಲ್ಲು ಯುಂಣಾನಾಡೊಳು ತಾನು ವಾಸವಾಗಿರ್ದುದರಿಂ ಆ ಪುರಕ್ಕೆ ಶತ್ರುಮರ್ದನಪುರವೆಂದು ಪೆಸರಿಟ್ಟು ಮತ್ತಂ ತಾನು ಶತ್ರುಗಳೆಂಬ ಅರಣ್ಯಕ್ಕೆ ಕೊಡಲಿಯೋಪಾದಿಯಿರ್ದುದರಿಂ ಅರಿಕುಠಾರನೆಂದು ಪೆಸರಿಕ್ಕಿ ಆ ಊರ ಮಧ್ಯ ತಮ್ಮರಮನೆಗೆ ಪಶ್ಚಿಮ ದಿಕ್ಕಿನೊಳು ತ್ರಿಕೂಟ ಚೈತ್ಯಾಲಯಮಂ ಮಾಡಿಸಿ ಶ್ರಿ ಸಂಧಿವಿಗ್ರಹಿ ಪುಣಿಸ ಮಹಾರಾಜಂ ತಾನು ಮಾಡಿಸಿದ ಏಳು ಬಸದಿಗಳ್ಗಂ ಕ್ಷೇತ್ರಮಂ ಕೊಟ್ಟು ಆ ಊರ ಪಡುವಲು ಅಣ್ಣಮಾರೆಯ ಕೆರೆ ಕೀಳೇರಿ ಕೆಳಗೆ ಆ ಊರ ತೆಂಕಲು ಹೆಗ್ಗೆರೆ ಕೀಳೇರಿ ಗದ್ದೆ ಕಾಡಹಳ್ಳಿ ಗ್ರಾಮ ಸಹಾ ಧಾರಾಪೂರ್ವಕ ಕೊಟ್ಟ.

ಕಂದ :

ಬಸದಿಗೆ ಬಿಟ್ಟೀ ಧರ್ಮವ
ನೊಸೆದು ಕರಂ ಪಾಲಿಸುವರ್ಗಕ್ಕುಂ ಪುಣ್ಯಂ
ಅಸವಸದಿಂದಳುಪಿದಡಂ
ಪಶುವಂ ಬ್ರಾಹ್ಮಣನ ಕೊಂದ ಪಾಪಕೆ ಪೋಪಂ

ಶ್ರೀಪತಿ ಹೊಯ್ಸಳ ಕುಲದೊಳು
ಭೂಪತಿಗಳು ಪಲಬರಾದ ತದನಂತರದೊಳು
ಯೀಪೇಳ್ವೆ ಅರಿಕುಠಾರ ಮ
ಹಾಪುರದೊಳು ಚಾಮರಾಜನುದ್ಭವಿಸಿದನುಂ

ವಚನ :

ಆ ಮಹಾತ್ಮನ ಪುಣ್ಯೋಪಾರ್ಜನೆಯಿಂದ ಹೈದರಲ್ಲಿ ಎಂಬ ನಬಾಬಂ ಶ್ರೀರಂಗಪಟ್ಟಣಕ್ಕೆ ಬಿಜಯಂಗೈಸಿ ಪಟ್ಟಕಟ್ಟಿದ.

ಕಂದ :

ಶ್ರೀಪಾಲ ಚಾಮರಾಜ ಮ
ಹೀಪಾಲಗೆ ಸತಿಯುಮಾದ ಲಕ್ಷ್ಮೀದೇವಿಗೆ
ಭೂಪನುದಗ್ರಂ ಸತ್ಕುಲ
ದೀಪಂ ಶ್ರೀ ಕೃಷ್ಣರಾಜನುದ್ಭವಿಸಿದನುಂ

ವಚನ :

ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಲೇಶ್ವರಂ ದ್ವಾರಾವತಿ ಪುರ [ವರಾ] ಧೀಶ್ವರಂ ಯದುಕುಲ ವಿಲಸಿತ ವಸುಧಾಕರ ಸತ್ಯರತ್ನಾಕರಂ ರಿಪುಬಲಜಲಧಿ ವಡಬಾನಲಂ ಮಲತರೊಳ್ ಗಂಡ ವಿವಿಧಯಾಚಕ ಜನೈಕ ಚಿಂತಾಮಣಿ ಸಮಸ್ತ ನೃಪಚೂಡಾಮಣಿ ಉದ್ದಂಡ ಪ್ರಚಂಡ ಅಸಹಾಯ ಶೂರ ಪ್ರತಾಪ ಮೂರ್ತಿಗೆ ಸಿದ್ಧಾರ್ಥಿ ಸಂವತ್ಸರದೊಳು ಪುಟ್ಟಿದ ಐದನೆ ವರುಷಕ್ಕೆ ಸಾಮ್ರಾಜ್ಯ ಪಟ್ಟಾಭಿಷೇಕಂ ಗೆಯ್ಯೆ ಮೈಸೂರ ನಗರದಿ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತಿಹಂ

ವೃತ್ತ :

ಉದಯಂಗೈದು ವಿರೋಧಿ ಭೂಭುಜರ ಸಂತಾನಂಗಳಂ ತುಳ್ದು ತ
ನ್ನದಟಿಂ ಸಾಧಿಸಿ ವಿಶ್ವಭೂವಲಯಮಂ ಸಾಮ್ರಾಜ್ಯಲಕ್ಷ್ಮೀ ಮನೋ
ಮುದದಿಂ ಸರ್ವಜನಂಗಳಂ ಪೊರೆಯುತಂ ನಿತ್ಯೋತ್ಸಹಂ ಮಾಡುತ
ಭ್ಯುದಯಂ ಪುಟ್ಟಿಸುತಿರ್ದನಾ ಪ್ರತಿದಿನಂ ಶ್ರೀ ಕೃಷ್ಣರಾಜಾಧಿಪಂ

ವಿವರ :

ಕಣುವೆ ಕೆಳಗೆ ತೊಂಡಮಾನ ದೇಶದಲ್ಲಿ ಮಹಾರಾಜಪುರಿಯೆಂಬ ಪಟ್ಟಣದಲ್ಲಿ ಸತ್ಯಂಧರ ಮಹಾರಾಜನು ರಾಜ್ಯವಾಳಿದನು ಆತನ ಕುಮಾರ ಜೀವಂಧರ ಮಹಾರಾಜಂ ಆತನ ಮಗ ಯಶೋಧರ ಮಹಾರಾಜಂ ಆತನ ಕುಮಾರ ಗುಣಪಾಲ ಮಹಾರಾಜಂ ಆತನ ಮಗ ಲೋಕಪಾಲ ಮಹಾರಾಜಂ ಆತನ ಮಗ ಹಿಮಶೀತಲ ಮಹಾರಾಜಂ ಆತನಿಗೆ ಶಕವರುಷ ೪೪೭ ಪಿಂಗಳ ಸಂವತ್ಸರದಲ್ಲಿ ಪಟ್ಟಾಭಿಷೇಕವಾಯಿತು ೨೫ ವರುಷ ರಾಜ್ಯವಾಳಿದ ಆಗ ಬೌದ್ಧರು ವಾದಮಾಡಿ ಅಕಲಂಕಸ್ವಾಮಿಗಳಿಂದ ಪರಾಜಿತರಾಗಿ ಸಿಂಗಳದ್ವೀಪಕ್ಕೆ ಹೋದರು.

ಹಿಮಶೀತಲ ಮಹಾರಾಜನ ಕುಮಾರ ಹರಿವಿಕ್ರಮರಾಯ ಅವನ ಮಗ ಸಿಂಹವಿಕ್ರಮರಾಯ ಅವನ ಮಗ ಶತರಥರಾಯ ತತ್ಸುತ ನ್ಯಾಯರಥರಾಯ ಅವನ ಮಗ ಧರ್ಮರಥರಾಯ ಅವನ ಮಗ ಚಾಮುಂಡರಾಯನು ಪೌದನಾಪುರಕ್ಕೆ ಗೋಮಟೇಶ್ವರಸ್ವಾಮಿ ದರ್ಶನಕೆಂದು ಹೊರಟುಬರುವಲ್ಲಿ ಶಕವರುಷ ೬೦೦ ವಿಭವ ಸಂವತ್ಸರದ ಚೈತ್ರ ಶು ೧೫ ರವಿವಾರ ಹಸ್ತನಕ್ಷತ್ರ ಕುಂಭಲಗ್ನದಲ್ಲು ನಾಲ್ಕು ಗ್ರಹ ಉಚ್ಚದಲ್ಲಿ ಬೆಳ್ಗೊಳದ ಪರ್ವತದ ಮೇಲೆ ಗೋಮಟೇಶ್ವರಸ್ವಾಮಿ ಬಿಂಬಪ್ರತಿಷ್ಠೆಮಾಡಿ ಲಕ್ಷವು ತೊಂಬತ್ತಾರು ಸಾವಿರ ಹೊನ್ನು ಹುಟ್ಟುವಳಿ ಗ್ರಾಮಗಳ ಶಾಸನದತ್ತವಾಗಿ ಕೊಟ್ಟು ಶೀನದೇಶಿ ಕಾಲೋಗ್ರ ಬಲಾತ್ಕಾರಗಣದಾಚಾರ್ಯರ್ಗೆ ಮಠಾ ಕಟ್ಟಿಸಿ ಸ್ವಾಸ್ತಿಮಾನ್ಯ ಕೊಟ್ಟು ಅದರಲ್ಲಿ ದೇಶೀಗಣ ಪ್ರಸಿದ್ಧ ಸಿದ್ಧಾಂತ ಜ್ಞಾನ ನೇಮಿಚಂದ್ರಸ್ವಾಮಿಗಳಿಗೆ ದೇವರ ಸೇವಾರ್ಥಾ ಮಾಡ್ಸಿ ಹಾಗೆ ನೇಮಕಾಮಾಡಿ ಫೌಜು ಸಹಾ ಉತ್ತರ ಮಧುರೆಗೆ ಹೋದನು.

ಕೆಲವು ದಿವಸದ ಮೇಲೆ ಆ ಉತ್ತರ ಮಧುರೆಯಿಂ ರಾಯನ ವಂಶಸ್ಥ ವಿನಯಾದಿತ್ಯನೆಂಬ ಬಲ್ಲಾಳನು ಫೌಜು ಸಹಾ ಬಂದು ದಕ್ಷಿಣದೆಶದಿ ಯಾದವಪುರಿ ಎಂಬ ಪಟ್ಟಣ ಕಟ್ಟಿಸಿ ಆ ವಿನಯಾದಿತ್ಯ ಬಲ್ಲಾಳಗೆ ಅಮಲಕೀರ್ತಿಯೆಂಬ ಕುಮಾರ ಹುಟ್ಟಿದ ಆತನ ಮಗಂ ಅಂಗರಾಜ ಆತನ ಮಗ ಪ್ರತಾಪ ಬಲ್ಲಾಳ ಆತನ ಮಗ ವಿಷ್ಣುವರ್ಧನ ಆತನ ಮಗ ಉದಯಾದಿತ್ಯ ಆತನಿಂದ ನರಸಿಂಹ ಬಲ್ಲಾಳ ಆತನಿಂದ ಗಂಗರಾಜ ಬಲ್ಲಾಳ ರಾಮಾನುಜಾಚಾರ್ಯರ ಪ್ರೇರಣೆಯಿಂ ತಾಪಾದಿ ಸಂಸ್ಕಾರದಿಂ ಪರಿಶುದ್ಧ ಹರಿಭಕ್ತನಾಗಿ ಬೇಲೂರಂ ಮೊದಲಾದನೇಕ ಸ್ಥಳಗಳೊಳು ವಿಷ್ಣುದೇವಾಲಯಗಳನೇಕ ಮಾಡಿಸಿದನು ಆ ತರುವಾಯ ರುಂಮಿ ಇರರ್ಾ ಕುರರ್ಾ ಮುಸಲರ್ಮಾ ಫೌಜು ಕಟ್ಟಿಕೊಂಡು ಬಂದು ಪಾಂಡವರ ಇಂದ್ರಪ್ರಸ್ಥಪುರವನ್ನು ಡಿಳ್ಳಿಯೆಂಬ ಪೆಸರಿಟ್ಟು ಅನೇಕ ಫೌಜು ಕಟ್ಟಿ ರಾಜ್ಯ ಯೆಾಹೊತ್ತು ಸ್ವಾಧೀನ ಮಾಡಿಕೊಂಡು ಬಂದು ಬಲ್ಲಾಳರಾಯನಿರ್ದ ಯಾದವಪುರಿ ಸೂರೆಮಾಡಿದಲ್ಲಿ ಉತ್ತರದೇಶೆ ಯಾದವ ಪುರಿಯು ಬಲ್ಲಾಳನು ಬಿಟ್ಟು ನಿಜಬಲಸಹಿತ ದ್ವಾರಸಮುದ್ರ ಹಳೇಬೀಡಿಗೆ ಬಂದು ಪಟ್ಟಣ ಕಟ್ಟಿಸಿ ಕೆಲವಾನು ದಿವಸದ ಮೇಲೆ ಅಲ್ಲಿಂ ಬಂದು ವಿಜಯನಗರದಲ್ಲಿ ನಿಂತು ರಾಜ್ಯವನ್ನಾಳುತ್ತಂ ನರ್ಮದಾದಕ್ಷಿಣದೇಶ ಯಾಹೊತ್ತು ಆಳುತ್ತಿರ್ದರು.

ಶಾಲಿವಾಹನಶಕೆ ೧೨೫೮ ಧಾತು ಸಂವತ್ಸರದಲ್ಲಿ ತದ್ವಂಶದೊಳೆ ವಿದ್ಯಾನಗರವೆಂಬ ಪಟ್ಟಣದಲ್ಲಿ ಬುಕ್ಕರಾಯನೆಂಬರಸು ಮಾಧವಾಚಾರ್ಯ ಪಂಡಿತನೆಂಬ ಮಂತ್ರಿಗೂಡಿ ಸುಖದೊಳಿರೆ ಆವನ ಮಗ ಸಂಗಮರಾಯ ಆತನಿಂ ಹರಿಹರರಾಯ ಶಕವರುಷ ೧೨೬೯ ವಿಭವ ಸಂವತ್ಸರದಲ್ಲಿ ಪಟ್ಟಾಭಿಷೇಕವಾಯಿತು.

ಇವರ ಮಗ ಪ್ರತಾಪದೇವರಾಯ ಆತನ ಮಗ ಮಲ್ಲಿಕಾರ್ಜುನರಾಯ ಇವನ ಪ್ರಪೌತ್ರ ಸದಾಶಿವರಾಯ ಆ ಬಳಿಕ ೧೨ ಶಿರಸಾಂತ್ರದಿ ಮಹಾಶೂರವೀರ ನರಸಿಂಹರಾಯ ರಾಜ್ಯವಾಳುವಲ್ಲಿ ದಣಾಯಕನೆಂಬ ಮಂತ್ರಿಯು ನರಸಿಂಹೋಪಾಸನೆಯಿಂ ಮಾಡಿ ದ್ರವ್ಯವಿದ್ದಿ ಯಾಗೆ ಶಕವರುಷ ೧೨೫೧ ಶುಕ್ಲ ಸಂವತ್ಸರದಲ್ಲಿ ನಾಗಮಂಗಲವೆಂಬ ಪಟ್ಟಣ ಕಟ್ಟಿಸಿ ಪರಾಕ್ರಮದಿಂದ ವೀರನರಸಿಂಹರಾಯರಿಗೆ ಹಿತಕರನಾಗಿ ರಾಜ್ಯವಾಳುವಾಗ ವೀರನರಸಿಂಹರಾಯ ವಿಜೇನಗರದಿಂ ಹೊರಟು ಕರ್ನಾಟ ದೇಶಕ್ಕೆ ಬರುವಲ್ಲಿ ನಾಗಮಂಗಲದಲ್ಲಿರ್ದ್ದ ದಣಾಯಕ ತನ್ನ ವೃತ್ತಾಂತ ಯಾಹೊತ್ತು ಬಿನ್ನವಿಸೆ ಸಂತೋಷಪಟ್ಟು ಸಂಗಡಲೆ ಕರದುಕೊಂಡು ಬರುವಾಗ ಗೌತಮ ಕ್ಷೇತ್ರ ಉಭಯ ಕಾವೇರಿ ಮಧ್ಯದಿ ಶಕವರುಷ ೧೨೬೬ ವಿಭವ ಸಂವತ್ಸರದಲ್ಲಿ ಶ್ರೀರಂಗಪಟ್ಟಣವ ಕಟ್ಟಿಸಿ ಪ್ರತಾಪನರಸಿಂಹರಾಯರು ತಮ್ಮ ಅಣುಗರು ಶ್ರೀರಂಗರಾಯ ಜಗದೇರಾಯರೆಂಬವರ್ಗೆ ಶ್ರೀರಂಗರಾಯರಿಗೆ ೨೪ ಗಡಿ ಜಗದೇರಾಯರಿಗೆ ೨೦ ಗಡಿ ಕೊಟ್ಟು ಸುಖದೊಳಿರೆ ೨೪ ವರುಷ ಸರಿ ಆ ಶ್ರೀರಂಗರಾಯರ್ಗೆ . . . . ೨೪ ವರುಷ ರಾಜ್ಯವಾಳೆ ಕೃಷ್ಣರಾಜಗೆ ಪಟ್ಟಾ ಕಟ್ಟಿ ಶ್ರೀರಂಗರಾಯ ಸ್ವರ್ಗಸ್ಥನಾಗೆ ಆ ತರುವಾಯ

ಶ್ರೀರಂಗರಾಯರು ಮಹಿಸೂರ ಸಂಸ್ಥಾನಾಧಿಪರಾದ ರಾಜವಡೇರಿಗೆ ಶ್ರೀರಂಗಪಟ್ಟಣ ವನ್ನು ಸ್ವಾಧೀನ ಮಾಡಿಕೊಟ್ಟು ಚೆನ್ನಪಣೆಯಿಂ ತಳಕಾಡಿಗೆ ಹೋಗಿ ಮೃತವಾದರು.

[ಡಿ]ಳ್ಳಿ ಪಾದಶಾಯರ ಪೌಜು ಬಂದು ಕೃಷ್ಣರಾಯರೊಡನೆ ಬಹಳ ಯುದ್ಧ ಮಾಡಲಾಗಿ ಉಭಯತ್ರರು ಸನ್ಮತಪಟ್ಟು ನರ್ಮದಾ ದಕ್ಷಿಣದೇಶ ಯಾಹೊತ್ತು ಡಿಳ್ಳಿ ಪಾದಶಾಯರಿಗೆ ಎಂಬುದಾಗಿ ವಿಭಾಗಿಸಿಕೊಂಡು ಹೋದರು. ಈ ಕೃಷ್ಣ ರಾಜಗೆ ೩೦ ಕೋಟಿ ರಾಜ್ಯ ದೇವಸ್ಥಾನಕ್ಕೆ ಬ್ರಾಹ್ಮರಗ್ರಾರಕ್ಕೆ ೧೦ ಕೋಟಿ ತಾಮ್ರಶಿಲಾಶಾಸನ ದತ್ತವಾಗಿ ಕೊಟ್ಟು ರಾಜ್ಯವಾಳುತ್ತಿದ್ದರು.

ಇವರ ಕುಮಾರ ಅಚ್ಯುತರಾಯರು ೧೪ ವರುಷವಾಳಿದರು. ಇವರ ತಮ್ಮನ ಮಗ ಸದಾಶಿವರಾಯರು ವಿದ್ಯಾನಗರದಿ ೩೪ ವರುಷ ರಾಜ್ಯವಾಳಿದರು ಆ ಬಳಿಕ ಅನೇಕ ದೊರೆಗಳು ತಮ್ಮ ತಮ್ಮ ಭುಜಬಲಕ್ಕೆ ತಕ್ಕ ತಕ್ಕಷ್ಟು ರಾಜ್ಯವನಾಳಿಕೊಂಡು ಬಾಳ್ವೆಪಟ್ಟು ಆಗೆ ಶ್ರೀರಂಗಪಟ್ಟಣದಲ್ಲಿ ವಿಜಯನಗರದ ರಾಯರು ಇಟ್ಟಿದ್ದ ಶ್ರೀರಂಗ ರಾಯರು ಮೃತವಾಗೆ ಶಕವರುಷ ೧೫೩೨ನೆಯ ಸಾಧಾರಣ ಸಂವತ್ಸರದಲ್ಲಿ ರಾಜ ವಡೇರಿಗೆ ಶ್ರೀರಂಗಪಟ್ಟಣ ಸ್ವಾಧೀನವಾಗೆ ರತ್ನಸಿಂಹಾಸನಾರೂಢನಾಗಿ ೮ ವರುಷ ರಾಜ್ಯವಾಳಿದರು.

ಅವರ ಮಗ ನರಸರಾಜವಡೇರು ಶಕವರುಷ ೧೫೪೦ ಕಾಳಾಯುಕ್ತಿ ಸಂದಲ್ಲಿ ರಾಜ್ಯಾರ್ಹರಾಗಿ ೧೨ ವರುಷವಾಳೆ ಶಕವರುಷ ೧೫೪೮ ಶುಕ್ಲ ಸಂವತ್ಸರದೊಳು ಅವರ ಕುಮಾರರು ಚಾಮರಾಜವಡೆಯರವರು ೮ ವರುಷ ಆಳೆ ಬಳಿಕ ಇಮ್ಮಡಿ ರಾಜವಡೆ ಯರು ೨ ವರುಷ ರಾಜ್ಯವಾಳಿದರು ಶಕವರುಷ ೧೫೬೭ ಪ್ರಮಾದಿ ಸಂವತ್ಸರದಿ ಕಂಠೀರವ ನರಸರಾಜವಡೆಯರು ೨೧ ವರುಷ ರಾಜ್ಯಪಾಲನೆ ಶಕವರುಷ ೧೫೮೨ ಶಾರ್ವರಿ ಸಂವತ್ಸರದಿ ದೊಡ್ಡದೇವರಾಜವಡೇರು ೧೪ ವರುಷ ರಾಜ್ಯಶ್ರೀಯೊಳಿರೆ ಶಕವರುಷ ೧೫೯೬ ಆನಂದ ಸಂವತ್ಸರದಿ ಚಿಕ್ಕದೇವರಾಜವಡೆಯರು ೩೧ ವರುಷ ರಾಜ್ಯಾರ್ಹರಾಗೆ ಶಕವರುಷ ೧೬೨೭ ಪಾರ್ಥಿವ ವತ್ಸರದಿ ಕಂಠೀರವ ನರಸರಾಜ ವಡೇರು ಹಸ್ತನೇತ್ರ ಸಂಜ್ಞೆಯಿಂ ೮ ವರುಷ ರಾಜ್ಯವಾಳೆ ಶಕವ ೧೬೩೬ ವಿಜಯ ಸಂವತ್ಸರದಿ ದೊಡ್ಡಕೃಷ್ಣರಾಯರು ೧೮ ವರುಷ ರಾಜ್ಯವಾಳಿದರು ಮೃತವಾಗೆ ಶಕ ವರುಷ ೧೬೫೪ ವಿರೋಧಿಕೃತು ಸಂವತ್ಸರದಿ ಅವರ ಪತ್ನಿ ದೇವಮ್ಮಣ್ಣಿಯವರು ತಮ್ಮ ತಮ್ಮಂದಿರಾದ ದೇವರಾಜಗೆ ದಳವಾಯಿ ಪಟ್ಟಗಟ್ಟಿಸಿ ಶ್ರೀ ಚಾಮರಾಜನ ಪಟ್ಟಕ್ಕೆ ಸಿಲ್ಲಿಸಿದರ್ು ಮೂರು ವರುಷ ಸಲೆ ಚಾಮರಾಜನ ಚರ್ಯಾ ನೋಡಿ ಪಟ್ಟಕ್ಕೆ ಯೋಗ್ಯನಲ್ಲೆಂದು ಕಳೆದು ಶಕವರುಷ . . . . ನಂದ ಸಂವತ್ಸರದಲ್ಲಿ ಇಮ್ಮಡಿ ಕೃಷ್ಣ ರಾಜಗೆ ದಳವಾಯಿ ದೇವರಾಜಯ್ಯನವರ ಮುಖಾಂತ್ರ ಪಟ್ಟಗಟ್ಟಿ ತಮ್ಮನುಜ ಕರಾಚುರಿ ನಂಜರಾಜಯ್ಯನವರ ಕುಮಾರಿಯು ಕೊಟ್ಟು ಮೂವತ್ತು ವರುಷ ಪರ್ಯಂತ ಸುಖದಿಂ ರಾಜ್ಯಂಗೈದರು.

ಬಹುಧಾನ್ಯಾಬ್ದದಲ್ಲಿ ದಳವಾಯಿ ದೇವರಾಜಯ್ಯನವರು ಮೃತವಾಗೆ ಅವರ ನುಜ ಕರಾಚೂರಿ ನಂಜರಾಜಯ್ಯನವರು ದಳವಾಯಿಪಟ್ಟ ಸರ್ವಾಧಿಕಾರ ಸಹಾ ಮಾ ಕೊಂಡಿದ್ದರು ರಾಜ್ಯನೆ ಸ್ವಾಧೀನ ಮಾಡಿಕೊಂಡಿದ್ದರು ಶಕವರುಷ ೧೬೮೮ ವ್ಯಯ ಸಂವತ್ಸರದಿ ಇಮ್ಮಡಿಕೃಷ್ಣರಾಜ ಪಂಚತ್ವವನ್ನೈದೆ ಅವರ ಹಿರಿಕುಮಾರ ನಂಜರಾ ವಡೇರಿಗೆ ಪಟ್ಟವಾಯಿತು ೪ ವರುಷ ರಾಜ್ಯವಾಳಿದರು ಶಕವರುಷ ೧೬೯೨ಯು ವಿಕೃ ಸಂವತ್ಸರದಿ ಅವರ ತಮ್ಮಂದಿರು ಬೆಟ್ಟಚಾಮರಾಜವಡೇರಿಗೆ ಪಟ್ಟ ನವಾಬು ಹೈದರ ಖಾನನು ಪ್ರಬಲವಾಗಿ ಆರ್ಕಾಡು ಚಿತ್ರಕಲ್ಲು ಕಡಪೆ ಧಾರವಾಡ ಶಾರ್ವ ಸಂವತ್ಸರದಲ್ಲಿ ಕಂಚಿ ಕಾಳಾಂಚಿ ತಂಜಾವೂರು ಗೂಳೂರು ದೇವಣಾ ಪಟ್ಟಣ ಪರಾ ಸರದಾರು ಮುಂತಾಗಿ ಸಾಧ್ಯಮಾಡಿ ಪುನಹಾ ಆರ್ಕಾಡು ಬಳಿಗೆ ಬಂದು ಚಕ್ರ ಮಲ್ಲೂರು ಬಳಿಯಲ್ಲಿ ಶಕವರುಷ ೧೭೦೫ ಶುಭಕೃತು . . . .

ಸುಗಟೂರು ವಂಶದ ಪಾಳೆಯಗಾರರ 'ಸುಗಟೂರು' — ಒಂದು ಪರಿಶೀಲನೆ*

— ಪಿ. ವಿ. ಕೃಷ್ಣಮೂರ್ತಿ

ಕೆಲವು ರಾಜವಂಶಗಳು ತಮ್ಮ ಹೆಸರಿನೊಂದಿಗೆ ತಮ್ಮ ಮೂಲಸ್ಥಳದ ಉಲ್ಲೇಖವನ್ನು ಮಾಡಿಕೊಂಡಿರುತ್ತವೆ. ವಿಜಯನಗರದ ಆಳಿಕೆಯ ಕಾಲದಲ್ಲಿ ವಿಶೇಷ ಸ್ಥಾನಮಾನಗಳಿಂದ ಮೆರೆಯತೊಡಗಿದ್ದ ಅನೇಕ ಪಾಳೆಯಗಾರ ವಂಶೀಯರು ತಮ್ಮ ಮೂಲರಾಜಧಾನಿಯನ್ನಾಗಲೀ, ತಮ್ಮ ಆಳಿಕೆ ಪ್ರಾರಂಭಮಾಡಿದ ಮೂಲಸ್ಥಳವನ್ನಾಗಲೀ ತಮ್ಮ ಹೆಸರಿನೊಂದಿಗೆ ಸೇರಿಸಿಕೊಂಡಿರುವುದು ಕಂಡು ಬರುತ್ತದೆ. ಅಂತೆಯೇ, ಈಗಿನ ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಬಹು ಭಾಗ, ಬೆಂಗಳೂರು ಜಿಲ್ಲೆಯ ಹಲವು ಭಾಗಗಳು ಹಾಗೂ ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಪುಂಗನೂರು ಪ್ರದೇಶಗಳನ್ನೊಳಗೊಂಡಂತೆ ಕ್ರಿ.ಶ. ೧೫–೧೭ನೇ ಶತಮಾನದ ಅವಧಿಯಲ್ಲಿ ಆಳಿದ ಸ್ಥಳೀಯ ಪಾಳೆಯಗಾರರು ತಮ್ಮ ಎಲ್ಲ ಶಾಸನಗಳಲ್ಲೂ ತಮ್ಮ ಹೆಸರಿನೊಂದಿಗೆ 'ಸುಗಟೂರು' ಎಂಬುದನ್ನು ಅವಿಭಾಜ್ಯವಾಗಿ ಸೇರಿಸಿಕೊಂಡಿರುವುದು ಕಂಡುಬರುತ್ತದೆ. ಅವರ ಶಾಸನಗಳಲ್ಲಿ ಉಕ್ತವಾಗಿರುವ 'ಸುಗಟೂರು' ಯಾವುದು ? ಮತ್ತು ಎಲ್ಲಿದೆ ? ಎಂಬುದನ್ನು ಪರಿಶೀಲಿಸುವುದೇ ಪ್ರಸ್ತುತ ಬರಹದ ಉದ್ದೇಶ.

ಈ ಪಾಳೆಯಗಾರರ ಆಳಿಕೆಯ ಪ್ರದೇಶದಲ್ಲಿ 'ಸುಗಟೂರು' ಎಂಬ ಹೆಸರಿನ ಎರಡು ಸ್ಥಳಗಳು ಅಸ್ತಿತ್ವದಲ್ಲಿವೆ. ಇವುಗಳಲ್ಲಿ ಒಂದು ಕೋಲಾರ ಜಿಲ್ಲೆಯ ಕೋಲಾರ ತಾಲೂಕಿನ ಹೋಬಳಿಯೊಂದರ ಕೇಂದ್ರವಾಗಿರುವ 'ಸುಗಟೂರು' ಕೋಲಾರಕ್ಕೆ ಸುಮಾರು ೮ ಕಿ.ಮೀ. ಉತ್ತರಕ್ಕಿದೆ. ಇದೇ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ ಹೋಬಳಿಗೆ ಸೇರಿದ ಇನ್ನೊಂದು 'ಸುಗಟೂರು'; ಇಂದಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲೂಕೊಂದರ ಕೇಂದ್ರವಾದ ಹೊಸಕೋಟೆಯ ಉತ್ತರಕ್ಕೆ ಸುಮಾರು ೧೬ ಕಿ.ಮೀ. ಅಂತರದಲ್ಲಿದೆ.

* ತುಮಕೂರಿನಲ್ಲಿ ದಿನಾಂಕ 7-9, ಜುಲೈ 1990ರಂದು ಏರ್ಪಾಡಾಗಿದ್ದ ಕರ್ನಾಟಕ ಹಿಸ್ಟರಿ ಕಾಂಗ್ರೆಸ್‌ನ ಒಂಬತ್ತನೆಯ ಅಧಿವೇಶನದಲ್ಲಿ ಮಂಡಿಸಿದ ಸಂಪ್ರಬಂಧ. ಇದಕ್ಕೆ ಸಂಬಂಧಿಸಿದ ಕ್ಷೇತ್ರ ಪರಿವೀಕ್ಷಣೆಯಲ್ಲಿ ನನ್ನೊಂದಿಗಿದ್ದು ಸಹಕರಿಸಿದ ಸನ್ಮಿತ್ರರಾದ ಶ್ರೀ ಬಿ. ತಾಯಪ್ಪ, ಜೌಗುಪಾಳ್ಯ, ಹಲಸೂರು – ಅವರಿಗೆ ಲೇಖಕ ಕೃತಜ್ಞ.

ಪ್ರಸ್ತುತ ಈ ಪಾಳೆಯಗಾರರ ಬಗ್ಗೆ ಪ್ರಕಟವಾಗಿರುವ ಬರಹಗಳಲ್ಲಿ ಸುಗಟೂರಿನ ಬಗೆಗಿನ ಮಾಹಿತಿಯನ್ನು ಗಮನಿಸೋಣ :

ಕ್ರಿ.ಶ. ೧೮೬೯ ರಷ್ಟು ಹಿಂದೆಯೇ 'Kolar District Gazetteer' ಎಂಬ ಸಣ್ಣ ಸಂಪುಟವೊಂದು ಪ್ರಕಟವಾಗಿದೆ. ಈ ಸಂಪುಟದ ಪುಟ ೧೫ ರಲ್ಲಿ ಈ ವಂಶೀಯರ ಬಗ್ಗೆ : "It is about this time (in the 15th century) that a ryot, named ತಿಮ್ಮೇಗೌಡ is said to have settled himself at Sugatur, a village five miles from Kolar." ಎಂದು ಉಕ್ತವಾಗಿದೆ.

ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಲೂಯಿರೈಸ್‌ರವರು ರಚಿಸಿದ Mysore Gazetteer ಸಂಪುಟಗಳಲ್ಲಿ, ಒಂದು ಕಡೆ ಕೋಲಾರದ ಸಮೀಪದ ಸುಗಟೂರು, ಇವರ ಮೂಲಸ್ಥಳವೆಂದು ಬರೆದಿದ್ದರೆ; ಮತ್ತೊಂದು ಕಡೆ ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ ಸಮೀಪದ ಸುಗಟೂರೇ, ಈ ವಂಶೀಯರ ಮೂಲಸ್ಥಳವೆಂದು ದಾಖಲಿಸಿದೆ. ಮುಂದೆ ಬಂದ ಮಾನ್ಯ ಶ್ರೀ ಸಿ. ಹಯವದನ ರಾಯರ ಗೆಝೆಟಿಯರ್‌ಗಳಲ್ಲೂ ಹೀಗೇ ದಾಖಲಾಗಿದೆ.

ಕ್ರಿ.ಶ. ೧೮೯೪ ರಲ್ಲಿ ಪ್ರಕಟವಾಗಿರುವ Madras Districts Manualsನ ಮಾಲಿಕೆಯಲ್ಲಿನ ಉತ್ತರ ಆರ್ಕಾಡಿಗೆ ಸಂಬಂಧಿಸಿದ ಸಂಪುಟದಲ್ಲಿ "One Sitappa Gavanivaru, leaving his own village of Mudwarpur, the position of which seems unknown, came with his near relatives, composing seven families, by way of Canjeevaram and settled at Varigapalli in the Chittoor Taluk. After residing for a short time the immigrants in S.S. 1172 (1250 AD) moved to Sugatur, founded a city, built a fort, and constructed a pagoda which they dedicated to Chennakeswaraswamy" ಎಂದು ಉಕ್ತವಾಗಿದೆ.

ಕ್ರಿ.ಶ. ೧೯೩೫ ರಲ್ಲಿ ಶ್ರೀ ಕೆ. ಎಸ್. ನರಸಿಂಹಯ್ಯ ಎಂಬವರು ಪ್ರಕಟಿಸಿರುವ 'ಬೆಂಗಳೂರು ಕೆಂಪೇಗೌಡ' ಎಂಬ ಪುಸ್ತಿಕೆಯಲ್ಲಿ ಪ್ರಾಸಂಗಿಕವಾಗಿ ಸುಗಟೂರು ಪಾಳೆಯಗಾರರ ಬಗ್ಗೆ ಬರೆಯುತ್ತ "ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ ಸಮೀಪದ ಸುಗಟೂರು ಈ ವಂಶೀಯರ ಮೂಲಸ್ಥಳ"ವೆಂದು ತಿಳಿಸಿರುತ್ತಾರೆ.

ಭಾರತದ ಸ್ವಾತಂತ್ರ್ಯದ ಅನಂತರ Gazetteer of India ಸರಣಿಯಲ್ಲಿ ಕ್ರಿ.ಶ. ೧೯೬೮ ರಲ್ಲಿ ಪ್ರಕಟವಾಗಿರುವ ಮೈಸೂರು ರಾಜ್ಯದ Kolar District Gazetteer ನಲ್ಲಿ "Sugatur is a village in Kolar Tq., situated

about eight miles to the north west of Kolar town. It was at one time the head quarters of a line of local chiefs" (ಪುಟ 555) ಎಂದು ಉಕ್ತವಾಗಿದೆ.

ಇತ್ತೀಚೆಗೆ ಪ್ರಕಟವಾದ (ಅಂದರೆ ಕ್ರಿ.ಶ. ೧೯೯೦ ರಲ್ಲಿ) Bangalore Rural District Gazetteerನಲ್ಲಿ "They call themselves as chieftains of Sugatur, hailing from Sugatur in Kolar District" (p. 72) ಎಂದು ಇವರ ಮೂಲಸ್ಥಳದ ಬಗ್ಗೆ ತಿಳಿಸುತ್ತದೆ.

ಈ ಮೇಲಿನ ಉಲ್ಲೇಖಗಳನ್ನು ಗಮನಿಸಿದರೆ; ಕೋಲಾರದ ಸಮೀಪದ ಸುಗಟೂರು ಈ ವಂಶೀಯರ ಮೂಲಸ್ಥಳವೆಂದು ಕೆಲವು ಆಕರಗಳು ಹೇಳಿದರೆ ಮತ್ತೆ ಕೆಲವು ಆಕರಗಳು ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ ಸಮೀಪದ ಸುಗಟೂರು, ಇವರ ಮೂಲಸ್ಥಳವೆಂದು ಸಾರುತ್ತವೆ. ಆದರೆ ತೀರ ಇತ್ತೀಚಿನ ಉಲ್ಲೇಖ ಮಾತ್ರ ಕೇವಲ 'ಕೋಲಾರ ಜಿಲ್ಲೆಯ ಸುಗಟೂರು' ಎಂದು ಹೇಳಿ ಇನ್ನಷ್ಟು ಸಂದಿಗ್ಧತೆಯನ್ನುಂಟುಮಾಡಿದೆ. ಒಟ್ಟಾರೆ ಈ ವಂಶೀಯರ ಇತಿಹಾಸದಲ್ಲಿ ಮೂಲಪುರುಷನ ಬಗ್ಗೆ ಇದ್ದಂತೆಯೇ ಮೂಲಸ್ಥಳದ ಬಗ್ಗೆಯೂ ಗೊಂದಲವಿರುವುದು ಎದ್ದು ಕಾಣುತ್ತದೆ.

ಮೇಲೆ ಉಲ್ಲೇಖಿಸಲಾಗಿರುವ Madras Districtsನ ಸರಣಿಯ North Arcot ಮ್ಯಾನ್ಯುಯಲ್‌ನ ಕೊನೆಯ ವಾಕ್ಯ ಗಮನ ಸೆಳೆಯುತ್ತದೆ. ಅದರ ಪ್ರಕಾರ ಈ ಪಾಳೆಯಗಾರ ವಂಶೀಯರು ಸುಗಟೂರು ಸ್ಥಳಕ್ಕೆ ಬಂದು ಊರನ್ನು ಅಭಿವೃದ್ಧಿಪಡಿಸಿ ಕೋಟೆಯನ್ನು ಕಟ್ಟಿದರು ಮತ್ತು ಚೆನ್ನಕೇಶವ ದೇವರಿಗಾಗಿ ದೇಗುಲವೊಂದನ್ನು ನಿರ್ಮಿಸಿದರು ಎಂಬ ಅಂಶ ಅವರ ಮೂಲಸ್ಥಳದ ಬಗೆಗಿನ ಗೊಂದಲವನ್ನು ಬಿಡಿಸಿಕೊಳ್ಳಲು ಒಂದು ಕೀಲಿಕೈಯನ್ನು ಒದಗಿಸುತ್ತದೆ.

ಈ ಹಿನ್ನೆಲೆಯಲ್ಲಿ ಮೇಲೆ ಉಲ್ಲೇಖಿಸಲಾಗಿರುವ ಎರಡೂ ಸುಗಟೂರುಗಳನ್ನು ಪರಿವೀಕ್ಷಿಸಿದರೆ; ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ ಸಮೀಪದ ಸುಗಟೂರಿನಲ್ಲಿ ಈಗಲೂ ಅಳಿದುಳಿದಿರುವ ವಿಶಾಲವಾಗಿ ಆವೃತವಾಗಿದ್ದ ಮಣ್ಣಿನ ಕೋಟೆಯ ಗೋಡೆ ಮತ್ತು ಕಂದಕಗಳಿದ್ದ ಕುರುಹುಗಳು, ಆ ಕಂದಕಗಳಿಗೆ ನೀರು ಸರಬರಾಜು ಮಾಡಲು, ಮಳೆಯ ನೀರನ್ನು ಸಂಗ್ರಹಿಸಲು ಅನೇಕ ಕುಂಟೆಗಳು ಇರುವುದು ಕಂಡುಬರುತ್ತದೆ. ಈಗಲೂ ಈ ಊರಲ್ಲಿ ಊರಿನ ಬಾಗಿಲು ಮತ್ತು ಕೋಟೆಯ ಬಾಗಿಲು ಎಂದು ಕರೆಯುವ ಎರಡು ದ್ವಾರಮಂಟಪಗಳು ಊರಿನ ಪಶ್ಚಿಮಕ್ಕೆ ಇವೆ ಕೋಟೆಯ ಬಾಗಿಲ ಸಮೀಪದಲ್ಲಿ ಸತ್ಯಮ್ಮನೆಂದು ಕರೆಯಿಸಿಕೊಂಡು ಪೂಜಿಸಲ್ಪಡು

ತ್ತಿರುವ ಯಂತ್ರದ ಕಲ್ಲೊಂದು ಇದೆ. ಊರ ಬಾಗಿಲ ಸಮೀಪದಲ್ಲಿ ಒಂದು ಸುಂದರವಾದ ಸೋಮೇಶ್ವರ ದೇವಾಲಯವಿದ್ದು ಅದನ್ನು ಕ್ರಿ. ಶ ೧೧೨೧ ರಲ್ಲಿ ವಿಕ್ರಮ ಚೋಳದೇವನಾದ ರಾಜರಾಜ ಚೋಳನ ಆಳಿಕೆಯ ಕಾಲದಲ್ಲಿ ನಲ್ಲೂರಿನ ಒಡೆಯನಾದ ಉದಯ ಮಾರ್ತಾಂಡ ಬ್ರಹ್ಮರಾಯನ್ ಎಂಬುವವನು ಕಟ್ಟಿಸಿ, ದೇವರನ್ನು ಪ್ರತಿಷ್ಠಿಸಿ ಅನೇಕ ಪೂಜಾಕೈಂಕರ್ಯಗಳಿಗೆ ವ್ಯವಸ್ಥೆ ಮಾಡಿದ್ದನು. ಈ ದೇವಾಲಯದ ದಕ್ಷಿಣಕ್ಕೆ ಅಂದರೆ ಬಲಕ್ಕೆ ಚೆನ್ನಕೇಶವ ದೇವಾಲಯವಿದ್ದು ಅದರಲ್ಲಿ ಸುಮಾರು ಮೂರು ಅಡಿ ಎತ್ತರದ ಸುಂದರವಾದ ಚೆನ್ನಕೇಶವ ಬಿಂಬವಿದೆ. ಅಂತರಾಳದಲ್ಲಿ ಮೂವರು ಆಳ್ವಾರರ ಶಿಲ್ಪಗಳೂ ಇವೆ. ಸರಳ ಅಧಿಷ್ಠಾನದ ಮೇಲೆ ರಚಿತವಾಗಿರುವ ಈ ದೇವಾಲಯ ವಿಜಯನಗರ ಕಾಲದ ರಚನೆಯಾಗಿದೆ, ಅಂದರೆ ಇದು ಸುಗಟೂರು ಪಾಳೆಯಗಾರರ ರಚನೆ ಎನ್ನಬಹುದು. ಈ ಊರಿನ ಆಸುಪಾಸಿನಲ್ಲಿ ಗಂಗರ ವೀರಗಲ್ಲುಗಳು, ಚೋಳರ ಮತ್ತು ವಿಜಯನಗರ ಹಾಗೂ ಸುಗಟೂರು ಪಾಳೆಯಗಾರರ ಶಾಸನಗಳು ಲಭ್ಯವಾಗಿವೆ. ಅಲ್ಲದೆ ವಿಜಯನಗರ ಕಾಲದ ಶಾಸನ ರಹಿತ ಹಲವು ವೀರಗಲ್ಲುಗಳೂ ಇವೆ. ಚೋಳರ ತಮಿಳು ಶಾಸನಗಳಲ್ಲಿ ಸುಗಟೂರನ್ನು 'ಸುಗ್ಗಟ್ಟೂರು' ಎಂದು ಕರೆದಿರುವುದಲ್ಲದೆ, ಆ ಊರಿಗೆ ಅರುಮೊಳಿದೇವ ಚತು-ರ್ವೇದಿ ಮಂಗಲಂ' ಎಂಬ ಪ್ರತಿನಾಮವಿದ್ದ ಬಗ್ಗೆಯೂ ಉಕ್ತವಾಗಿದೆ, ಹಾಗೂ ದಕ್ಷಿಣದ ಅಹಿಚ್ಛತ್ರಪುರ ಎಂದೂ ಹೇಳಲಾಗಿದೆ.

ಪ್ರಾಯಶಃ ಪಾಳೆಯಗಾರರು ತಮ್ಮ ಆಳಿಕೆಯನ್ನು ಈ ಊರಿನಲ್ಲಿ ಪ್ರಾರಂಭಿಸಿದ್ದುದರಿಂದಾಗಿ 'ಸುಗಟೂರು ಎಂಬುದನ್ನು ಈ ವಂಶದ ಎಲ್ಲ ಪಾಳೆಯಗಾರರೂ ತಮ್ಮ ಹೆಸರಿನೊಂದಿಗೆ ಸೇರಿಸಿಕೊಂಡು ತಮ್ಮ ವಂಶವನ್ನು ಸುಗಟೂರು ವಂಶವೆಂದು ಗುರುತಿಸಿಕೊಂಡಿರುತ್ತಾರೆ. ಈ ಸುಗಟೂರಿನ ದಕ್ಷಿಣಕ್ಕೆ ಸುಮಾರು ೧೬ ಕಿ.ಮೀ. ಅಂತರದಲ್ಲಿ ರಕ್ಷಣೆಯ ದೃಷ್ಟಿಯಿಂದ ಹೆಚ್ಚು ಪ್ರಶಸ್ತವಾದ ಸ್ಥಳದಲ್ಲಿ ಅಂದರೆ ಇಂದಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯನ್ನು ಈ ಸುಗಟೂರು ವಂಶದ ಇಮ್ಮಡಿ ತಮ್ಮೇಗೌಡನು ಕ್ರಿ.ಶ. ೧೪೯೪ಕ್ಕೂ ಮೊದಲೇ ನಿರ್ಮಿಸಿದ್ದನು. ಈಗಲೂ ಈ ಹೊಸಕೋಟೆಯಲ್ಲಿ ಅಳಿದುಳಿದಿರುವ ಕೋಟೆಯ ಭಾಗಗಳು, ಕಂದಕ, ಕಂದಕಕ್ಕೆ ನೀರೊದಗಿಸಲು ಹಾಗೂ ಒಕ್ಕಲುತನಕ್ಕೆ ಅನುಕೂಲವಾಗುವಂತೆ ಉತ್ತರ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ನಿರ್ಮಿತವಾಗಿರುವ ದೊಡ್ಡ ಕೆರೆಗಳು, ಕೋಟೆಯ ಒಳಭಾಗದ ಪ್ರದೇಶದಲ್ಲಿ ಕಂಡುಬರುವ ದೇವಾಲಯಗಳು, ಕೊಳ ಮತ್ತು ಬಾವಿ ಹಾಗೂ ಮಂಟಪಗಳು ನಮ್ಮ ಗಮನ ಸೆಳೆಯುತ್ತವೆ. ಅಂದರೆ ಈ ವಂಶದ ಇಮ್ಮಡಿ ತಮ್ಮೇಗೌಡನ ಕಾಲಕ್ಕಾಗಲೇ (ಕ್ರಿ. ಶ. ೧೪೯೪ಕ್ಕೂ ಮೊದಲೇ) ಸುಗಟೂರನ್ನು ಬಿಟ್ಟು ಈ ಹೊಸಕೋಟೆಯನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ಆಡಳಿತವನ್ನು ನಿರ್ವಹಿಸತೊಡಗಿದ್ದರು ಈ ವಂಶೀಯರು ಹೊಸಕೋಟೆಯಿಂದಲೇ

ಆಳುತ್ತಿದ್ದರೆಂಬ ಅಂಶ ಅಜ್ಞಾತ ಕವಿಯೊರ್ವನ ಕೃತಿಯಾದ ತಮ್ಮರಾಯು ಕೆಂಪರಾಯನ ಪದಗಳು ಅಥವಾ ಕೆಂಪೇಗೌಡನ ಜಯಪ್ರಶಸ್ತಿಯಲ್ಲಿ ಉಕ್ತವಾಗಿರುವ ವಿವರಗಳಿಂದಲೂ ದೃಢಪಡಿಸಿಕೊಳ್ಳಬಹುದಾಗಿದೆ. ಇವೆಲ್ಲಕ್ಕೂ ಮುಖ್ಯವಾಗಿ ಈ ಸುಗಟೂರು ವಂಶೀಯರ ಪ್ರಾರಂಭ ಕಾಲದ ಶಾಸನಗಳೆಲ್ಲವೂ ಈ ಹೊಸಕೋಟೆಯ ಆಸುಪಾಸಿನಲ್ಲಿಯೇ ದೊರೆತಿರುತ್ತವೆ. ಆದರೆ ಕೋಲಾರದ ಸಮೀಪದ ಸುಗಟೂರಿಗೆ ಇಂತಹ ಯಾವುದೇ ಗಮನಾರ್ಹ ಹಿನ್ನೆಲೆ ಇಲ್ಲದಿರುವುದರಿಂದಾಗಿ, ಈ ಸುಗಟೂರು ವಂಶದ ಪಾಳೆಯಗಾರರ ಮೂಲಸ್ಥಳವು ನಿರ್ವಿವಾದವಾಗಿ ಹೊಸಕೋಟೆಗೆ ಸಮೀಪದಲ್ಲಿರುವ, ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ ಹೋಬಳಿಗೆ ಸೇರಿದ ಸುಗಟೂರು ಗ್ರಾಮವೇ ಆಗಿದೆಯೆಂದು ದೃಢವಾಗಿ ಹೇಳಬಹುದಾಗಿದೆ.

——

‘ಸಾಪೇಕ್ಷ’ದ ಪಂಪ

—ನಳಿನಿ ವೆಂಕಟೇಶ್, ಎಂ.ಎ.

ಶ್ರೀ ಸೀತಾರಾಮ ಜಾಗೀರ್‌ದಾರ್ ಅವರ “ಸಾಪೇಕ್ಷ” ಗ್ರಂಥದಲ್ಲಿ ಪಂಪನನ್ನು ಕುರಿತ ವಿಮರ್ಶಾತ್ಮಕ ಪ್ರಬಂಧಗಳಿವೆ. ಪಂಪನ ಕೆಲವು ಪದ್ಯಭಾವಗಳು, ಪಂಪನ ತಮ್ಮನಾದ ಜಿನವಲ್ಲಭನ ಗಂಗಾಧರಂ ಶಾಸನ, ಹಾಗೂ ಕರೀಂನಗರ ಜಿಲ್ಲೆಯ ಮತ್ತೊಂದು ಶಾಸನವನ್ನು ಕುರಿತು ದೀರ್ಘವಾದ ಸಮಾಲೋಚನೆಯಿದೆ. ಪಂಪನ, ಹಾಗೂ ಅವನ ಕಾವ್ಯಗಳನ್ನು ಕುರಿತ ಮಾಹಿತಿಗಳ ಸಂಗ್ರಹಣೆ ವಿಪುಲವಾಗಿದೆ. ಆದರೆ ಕೆಲವೊಂದು ಕಡೆ ವಿರೋಧಾಭಾಸದ ಅಭಿಪ್ರಾಯಗಳೂ, ಅವರೇ ಗುರುತಿಸಿರುವ ವಿಷಯಗಳಲ್ಲಿ ತಪ್ಪು ವ್ಯಾಖ್ಯಾನವೂ, ಅದರಂತೆ ಕೆಲವು ಹಿರಿಯ ವಿಮರ್ಶಕರ ಬಗ್ಗೆ ಕಟು ಟೀಕೆಯೂ ಕಂಡುಬರುತ್ತದೆ.

ಅವುಗಳಲ್ಲಿ ಕೆಲವನ್ನು ಗಮನಿಸಹುದು.

ಅಭಿಮಾನಚಂದ್ರ ಜೈನನೆ?

ಲೇಖಕರು “ವಾಸ್ತವದಲ್ಲಿ ಜೈನಧರ್ಮಕ್ಕೆ ಮತಾಂತರ ಹೊಂದಿದ್ದ ವ್ಯಕ್ತಿ ಅಭಿಮಾನಚಂದ್ರನೇ” ಎನ್ನುತ್ತಾರೆ. (ಸಾಪೇಕ್ಷ ಪು. 64). ಅಭಿಮಾನಚಂದ್ರನು ಪಂಪನಿಗೆ ಮುತ್ತಾತನಾಗಬೇಕು. ಲೇಖಕರು ಹೇಳುವಂತೆ ಅಭಿಮಾನಚಂದ್ರನೇ ಜೈನಧರ್ಮಕ್ಕೆ ಮತಾಂತರವಾಗಲಿಲ್ಲ. ಇದಕ್ಕೆ ಜಿನವಲ್ಲಭನ ಶಾಸನವೂ, ಪಂಪನ ಪದ್ಯವೂ ಆಧಾರ. ಪಂಪನಂತೂ ತನ್ನ ತಂದೆ ಭೀಮಪಯ್ಯನೇ ಜೈನಧರ್ಮವನ್ನು ಸ್ವೀಕರಿಸಿದ ವಿಷಯವನ್ನು ಸ್ಪಷ್ಟವಾಗಿ ಹೇಳುತ್ತಾನೆ. ಆ ಪದ್ಯ ಇಂತಿದೆ:

ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲಂಗೆ ನಂಬಲೇ
ಮಾತೊ ಜಿನೇಂದ್ರ ಧರ್ಮಮೆ ವಲಂ ದೊರೆ ಧರ್ಮದೊಳೆಂದು ತ
ಜ್ಜಾತಿಯನುತ್ತರೋತ್ತರಮೆ ಮಾಡಿ ನೆಗಳ್ಚಿದನಿಂತಿರಾತ್ಮ ವಿ
ಖ್ಯಾತಿಯನಾತನಾತನ ಮಗಂ ನೆಗಳ್ದಂ ಕವಿತಾಗುಣಾರ್ಣವಂ

(ಪಂಪಭಾರತ 14–48)

ಈಗ ಪಂಪನೇ ಹೇಳಿರುವ ತನ್ನ ಕುಲಕ್ಕೆ ಸಂಬಂಧಿಸಿರುವ ವಿಷಯವನ್ನು ಇನ್ನಷ್ಟು ವಿಸ್ತರಿಸಬಹುದು. ಏನೆಂದರೆ ಪಂಪನು ತನ್ನ ಪೂರ್ವಜರನ್ನು ಕುರಿತು ಹೇಳಿರುವ ವಿಷಯಗಳು ತುಂಬ ಕುತೂಹಲವನ್ನು ಉಂಟುಮಾಡುತ್ತವೆ. ಪಂಪನು ಮೊದಲು ಮಾಧವ ಸೋಮಯಾಜಿಯನ್ನು ಕುರಿತು ಪ್ರಸ್ತಾವಿಸುತ್ತಾನೆ. ಮಾಧವ

ಸೋಮಯಾಜಿಗೆ ಸಂಪತ್ತು, ಪದವಿ ಎರಡೂ ಇತ್ತು. ಅದರಲ್ಲಿ ಅಗ್ರಗಣ್ಯನೂ ಆಗಿದ್ದನು. ಅವನು ಯಜ್ಞ ಯಾಗಾದಿಗಳನ್ನು ಆಚರಿಸಿ ಪುಣ್ಯಶಾಲಿಯೂ ಆಗಿದ್ದನು. ಇದರಲ್ಲಿ 'ಸಂಪತ್ತು' ಎಂಬುದಕ್ಕಿಂತಲೂ 'ಪದವಿ'ಗೆ ಹೆಚ್ಚು ಒತ್ತು ಕೊಡಬೇಕು. ಅವನೂ ರಾಜ್ಯದಲ್ಲಿ ಒಳ್ಳೆಯ ಅಧಿಕಾರದಲ್ಲಿದ್ದನೆ? ಮಾಧವ ಸೋಮಯಾಜಿಗೆ ಸಂಬಂಧಿಸಿದ ಈ ಪದ್ಯ ಕುತೂಹಲಕರವಾಗಿದೆ :

ಅದುವೆ ವಸಂತಂ ಕೊಟ್ಟೂ | ರೊದವಿದ ಸಿಡುಗುಂದಿ ಮಿಕ್ಕ ವಿಕ್ರಮ ಪುರವೆಂ
ಬುದಗ್ರಹಾರ ಸಂಪ | ತ್ಪದವಿಗಳೊಳಮಗ್ರಗಣ್ಯನೂರ್ಜಿತ ಪುಣ್ಯಂ
(ಪಂ. ಭಾ. 14—41)

ಈ ಪದ್ಯದಲ್ಲಿ ಬರುವ 'ಒದವಿದ' ಪದದ ಅರ್ಥ 'ದಾನವಾಗಿ ಬಂದ', 'ಕೊಡುಗೆಯಾಗಿ ಬಂದ' ಎಂದು. ಅಂದರೆ ವಸಂತ, ಕೊಟ್ಟೂರು, ಸಿಡುಗುಂದಿ ಹಾಗೂ ಅತಿಶಯವಾದ ವಿಕ್ರಮಪುರ ಇವು ಮಾಧವ ಸೋಮಯಾಜಿಗೆ ದಾನವಾಗಿ ಬಂದ ಅಗ್ರಹಾರಗಳು. ಅದೇನೂ ಕೇವಲ ಒಂದು ಅಗ್ರಹಾರವಲ್ಲ. ದಾನವಾಗಿ ಬಂದದ್ದೇ ಆದರೆ ಯಾರು ಕೊಟ್ಟಿರಬಹುದು ? ಈ ನಾಲ್ಕು ಅಗ್ರಹಾರಗಳನ್ನು ಯಾರಾದರೂ ರಾಜರೇ ಕೊಟ್ಟಿರಬಹುದೇ ? ಆ ರಾಜರು ಅರಿಕೇಸರಿಯ ಪೂರ್ವಜರು ಎಂದು ಊಹಿಸಬಹುದೇ ?

ಮಾಧವ ಸೋಮಯಾಜಿಯ ಮಗ ಅಭಿಮಾನಚಂದ್ರ. ಈತನೂ ಬ್ರಾಹ್ಮಣನೇ ಆಗಿದ್ದನೆಂಬುದಕ್ಕೆ ಜಿನವಲ್ಲಭನ ಶಾಸನವು ಸ್ಪಷ್ಟವಾದ ಆಧಾರವಾಗಿದೆ. ".... .... ವೆಂಗಿಪಱ್ರ ಕಮ್ಮೆ ಬ್ರಾಹ್ಮಣಂ ಜಮದಗ್ನಿ ಪಂಚಾರ್ಷೇಯಂ ಶ್ರೀವತ್ಸಗೋತ್ರಂ ಗುಣ್ಡಿಕಱ್ರ ಸಿಡುಂಗೊಣ್ಡೆಯಭಿಮಾನಚಂದ್ರ ...." ಎಂದು, 'ಕಮ್ಮೆಬ್ರಾಹ್ಮಣ' ಎಂದು ಸ್ಪಷ್ಟವಾಗಿ ಹೇಳಿದ್ದನ್ನು ಗಮನಿಸಬೇಕು. ಅಭಿಮಾನಚಂದ್ರನು ದಾನ ಧರ್ಮಕ್ಕೆ ಎತ್ತಿದ ಕೈ. ಈತ ದಾನ ಮಾಡುತ್ತಿದ್ದುದಾದರೂ ಏನು ? ಕರಿ, ತುರಗಗಳನ್ನೂ, ಮಣಿ ಕನಕಗಳನ್ನೂ ದಾನಮಾಡುತ್ತಿದ್ದನಂತೆ. ಉತ್ತಮೋತ್ತಮ ಮಣಿಕನಕಗಳನ್ನು ದಾನ ಮಾಡುತ್ತಿದ್ದನೆಂದರೆ ಅವನು ಶ್ರೀಮಂತ ಮನೆತನದವನು ಎಂದು ಹೇಳಬಹುದು. ಅದಕ್ಕೆ ಸರಿಯಾಗಿ ಅವನ ತಂದೆ ಮಾಧವ ಸೋಮಯಾಜಿಯೂ ಸಂಪತ್ತು ಐಶ್ವರ್ಯ ಇದ್ದವನು. ಆದರೆ ಆನೆ ಕುದುರೆಗಳನ್ನು ದಾನ ಮಾಡುತ್ತಿದ್ದ ಎಂಬುದು ಏನನ್ನು ಸೂಚಿಸುತ್ತದೆ ? ತಂದೆಯ 'ಪದವಿ'ಯೂ ಮಗನ 'ಕರಿತುರಗ'ದ ದಾನವೂ ರಾಜ್ಯದಲ್ಲಿಯ ಯಾವುದೋ ಹಿರಿಯ ಅಧಿಕಾರದ ಕಡೆಗೆ ಬೆರಳು ತೋರುವುದಿಲ್ಲವೇ ? ರಾಜ್ಯದಲ್ಲಿ ಮಂತ್ರಿಯೋ ದಂಡನಾಯಕನೋ ಆಗಿರಬಹುದೇ ?

ಅಭಿಮಾನಚಂದ್ರನ ಮಗ ಕೊಮರಯ್ಯ. ಈತನು ವೇದ ವೇದಾಂಗ ಪಾರಂಗತ. ಕವಿ ಈತನಿಗೆ 'ಸಮಸ್ತ ವೇದವೇದಾಂಗ ಸಮುದ್ಯೋತಿತ ಮತಿ',

'ಪುರಾತನ ಚರಿತಂ' ಎಂದು ಹೇಳುತ್ತಾನೆ. ಈತನೂ ಬ್ರಾಹ್ಮಣನೇ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಈತನ ಮಗ ಭೀಮಪಯ್ಯ. ಈತನಿಗೆ ಅಂದರೆ ಭೀಮಪಯ್ಯನಿಗೆ ಬೆಳ್ವೊಲ-ದಣ್ಣಿಗೆಜ಼ಿಯ ಜೋಯಿಸ ಸಿಂಘನ ಮೊಮ್ಮಗಳು ಅಬ್ಬಣಬ್ಬೆಯೊಡನೆ ಮದುವೆಯಾಗಿತ್ತು (ಜಿನವಲ್ಲಭನ ಶಾಸನ). ಇಲ್ಲಿ 'ಜೋಯಿಸ' ಎಂಬ ಪದವೇ ಬ್ರಾಹ್ಮಣನೆಂದು ನಿರ್ದೇಶಿಸುತ್ತದೆ. ಇಲ್ಲಿ ಒಂದು ಊಹೆಯನ್ನು ಮಾಡುವುದಾದರೆ—ಮದುವೆಯಾದ ಮೇಲೆಯೇ ಭೀಮಪಯ್ಯನು ಮತಾಂತರ ಹೊಂದಿರಬಹುದು. ಏಕೆಂದರೆ ಜೋಯಿಸರ ಮನೆಯ ಹುಡುಗಿಯನ್ನು ಜೈನನೊಬ್ಬನಿಗೆ ಕೊಟ್ಟು ಮದುವೆ ಮಾಡುವುದು ಅಸಂಭಾವ್ಯ. ಒಬ್ಬ ವ್ಯಕ್ತಿ ಮತಾಂತರವಾಗಬೇಕಾದರೆ ಎರಡೂ ಮತಗಳನ್ನು ಚೆನ್ನಾಗಿ ತಿಳಿದು, ತತ್ತ್ವಗಳನ್ನು ಅರ್ಥಮಾಡಿಕೊಂಡು ಒಳಿತು-ಕೆಡುಕ.ಗಳನ್ನು ತೂಗಿ ನೋಡಬೇಕು. ತಾನು ಹೋಗಲಿರುವ ಮತದ ಮಹತ್ತ್ವವನ್ನು ಚೆನ್ನಾಗಿ ತಿಳಿದವನಾಗಿರಬೇಕು. ಈ ಹಿನ್ನೆಲೆಯಲ್ಲಿ ಯೋಚಿಸಿದಾಗ ಭೀಮಪಯ್ಯನು ವಯಸ್ಕ ವ್ಯಕ್ತಿಯಾಗಿ ಮತಾಂತರವಾಗಿರಬೇಕು. ಅಷ್ಟು ಹೊತ್ತಿಗೆ ಮಗನಾದ ಪಂಪನೂ ತಿಳಿವಳಿಕೆ ಬಂದಿರುವ ವಯಸ್ಸಿನವನಾಗಿರಬೇಕು.

ಈ ಊಹೆಗೆ ಕಾರಣವೆಂದರೆ ಪಂಪನಿಗೆ ವೈದಿಕಧರ್ಮದಲ್ಲಿ ತುಂಬ ಗೌರವವಿದ್ದಿತು. ಈ ಅಂಶ ಅವನದೇ ಆದ ಅನೇಕ ಪದ್ಯಗಳಿಂದ ತಿಳಿಯುತ್ತದೆ. ಮೊದಲನೆಯದಾಗಿ ತನ್ನ ತಂದೆಯ ವಿಷಯವಾಗಿ ಹೇಳುವಾಗ, ಉತ್ತಮವಾದ ಬ್ರಾಹ್ಮಣ ಕುಲದಲ್ಲಿ ಹುಟ್ಟಿದನೆಂದೂ, ಧರ್ಮದೊಳಗೆಲ್ಲ ಉತ್ತಮವಾದುದು ಜೈನಧರ್ಮವೆಂದೂ ಸ್ಪಷ್ಟವಾಗಿ ಹೇಳಿದ್ದಾನೆ. (ಒಂದುಪಕ್ಷ ಮುತ್ತಾತನಾದ ಅಭಿಮಾನಚಂದ್ರನೇ ಜೈನಧರ್ಮವನ್ನು ಅವಲಂಬಿಸಿದ್ದರೆ ಪಂಪನಿಗೆ ಈ ಮಾತನ್ನು ಹೇಳುವ ಅಗತ್ಯವೇ ಇರುತ್ತಿರಲಿಲ್ಲ).

ಇಷ್ಟೇ ಅಲ್ಲದೆ ಲೇಖಕರೇ ಕೊಟ್ಟಿರುವ ಉದಾಹರಣೆ :

ದೆಸೆ ಮಖಧೂಮದಿಂ ದ್ವಿಜರ ಹೋಮದಿನೊಳ್ಗಿಱಿ ಹಂಸ ಕೋಕ ಸಾ
ರಸ ಕಳನಾದದಿಂದೊಳಗೆ ವೇದನಿನಾದದಿನೆತ್ತಮೆಯ್ದೆ ಶೋ
ಭಿಸೆ ಸುರಮರ್ತ್ಯಮಾನ ವನಧಿ ಕ್ಷುಭಿತಾರ್ಣವ ಘೋಷದಂತೆ ಘೂ
ರ್ಣಿಸುತಿರಲೀ ಗುಣಾರ್ಣವನ ಧರ್ಮದ ಧರ್ಮಪುರಂ ಮನೋಹರಂ.

(ಪಂ. ಭಾ. 14—57)

ತನಗೆ ದಾನವಾಗಿ ಬಂದ 'ಧರ್ಮಪುರ'ವನ್ನು ಪಂಪನು ಈ ರೀತಿಯಾಗಿ ವರ್ಣಿಸಿದ್ದಾನೆ. ತನಗೆ 'ಧರ್ಮಪುರ'ವು ದಾನವಾಗಿ ಬಂತು ಎಂದು ಒಂದು ಮಾತಿನಲ್ಲಿ ಹೇಳದೆ ಮಖಧೂಮ, ದ್ವಿಜ, ಹೋಮ, ವೇದನಿನಾದಘೋಷ ಇತ್ಯಾದಿಗಳನ್ನು

ಅಭಿಮಾನದಿಂದ ವರ್ಣಿಸುತ್ತಾನೆ. ಇವೆಲ್ಲ ತಾನು ಹುಟ್ಟಿದ ಧರ್ಮದ ಮೇಲೂ ಅತಿಶಯ ಗೌರವವಿತ್ತು ಎಂಬುದನ್ನು ಸೂಚಿಸುತ್ತದೆ. ತನ್ನ ಕೃತಿಯನ್ನು 'ಶ್ರೌತ-ವಿದು' ಎನ್ನುತ್ತಾನೆ. ಈ ಹಿನ್ನೆಲೆಯಲ್ಲಿ ಪಂಪನಲ್ಲಿ ಬರುವ ಭಗವದ್ಗೀತೆಯ ಭಾಗ ವನ್ನು ಗಮನಿಸಬಹುದು. ಅವನು ವೈದಿಕ ಧರ್ಮದಲ್ಲಿ ಗೌರವವುಳ್ಳವನಾಗಿ ಜೈನ ಧರ್ಮದಲ್ಲಿ ನಂಬಿಕೆಯಿಟ್ಟು ಆಚರಣೆಯಲ್ಲಿ ತಂದವನು. ಭಗವದ್ಗೀತೆಯನ್ನು ಸಮರ್ಥಿಸಿ ಬರೆದರೆ ತಾನು ನಂಬಿ ಆಚರಿಸುತ್ತಿರುವ ಜೈನಧರ್ಮದ ದೃಷ್ಟಿಯಿಂದ ಸರಿಯಲ್ಲ. ಅದನ್ನು ವಿರೋಧಿಸುವುದೇ ಆದರೆ ತಾಸಿಟ್ಟಿರುವ ಗೌರವಕ್ಕೆ ಪೆಟ್ಟು. ಅವನ ಇಂಥ ಮನೋಭಾವದ ಹಿನ್ನೆಲೆಯಲ್ಲಿ ಈ ಭಾಗವನ್ನು ಪರೀಕ್ಷಿಸಿದರೆ, ಕೇವಲ ಒಂದು ವೃತ್ತ ಹಾಗೂ ಎರಡು ಸಾಲಿನ ವಚನದಲ್ಲಿ ಬರೆದಿದ್ದರೂ ಸಮರ್ಥವಾಗಿಯೇ ನಿಭಾಯಿಸಿದ್ದಾನೆನ್ನಬೇಕು.

"…. …. ವಿಕ್ರಮಾರ್ಜುನನ ಮನದೊಳಾದ ವ್ಯಾಮೋಹಮಂ ಕಳೆಯಲೆಂದು ಮುಕುಂದಂ ದಿವ್ಯ ಸ್ವರೂಪಮಂ ತೋರಿ …. …." ಎಂಬಲ್ಲಿ ವಿಶ್ವರೂಪದರ್ಶನ ವನ್ನೂ, ಮುಂದಿನ ವೃತ್ತದಲ್ಲಿ "…. …. ಚಾತುರಂಗಮೆಂಬುದು ನಿನಗೊಡ್ಡಿನಿಂದುದ-ನೋವದೆ ಕೊಲ್ವರೆ ನೀನುಮೆನ್ನ ಕಜ್ಜದೊಳೆಸಗೆಂದು ಸೈತಜಿತನನ್ …. …." — "ಈ ಚತುರಂಗಬಲವು ನಿನಗೆದುರಾಗಿದೆ. ಇದನ್ನು ಲಕ್ಷ್ಯಮಾಡದೆ ಕೊಲ್ಲುವಲ್ಲಿ ನೀನು ನನ್ನ ಕೆಲಸದಲ್ಲಿ ಸೇರು"—ಎಂದು ಅಜಿತನು ಎಂದರೆ ಕೃಷ್ಣನು ಹೇಳಿ, ವೇದ ರಹಸ್ಯವನ್ನು—"ನಿರಂತರಂ ಪರಿಚರ್ಯೆಯಿಂ ನೆಱೆಯೆ"—ಸಾಕಸ್ಸು, ಉಪದೇಶಿಸಿ ದನು ಎಂಬ ಸೂಚನೆಯೂ ಇದೆ. ಕವಿ ಕೃಷ್ಣನನ್ನು 'ಅಜಿತ' ಎಂದು ಸಂಬೋಧಿಸಿ ರುವುದೇ ಅಲ್ಲದೆ 'ಪುರಾಣಪುರುಷನಪ್ಪ ಪುರುಷೋತ್ತಮು'ನೆಂದು ಕರೆದಿದ್ದಾನೆ. ಅಂದರೆ ಭಗವದ್ಗೀತೆಯ ಮುಖ್ಯ ತಾತ್ಪರ್ಯವನ್ನು ಪಂಪನು ಇದಿಷ್ಟರಲ್ಲಿಯೇ ಸಾಧಿಸಿ ದ್ದಾನೆ ಎನ್ನಬೇಕು

"ಅ ಕೊಮರಯ್ಯಂ …." ಎಂಬ ಪದ್ಯವನ್ನು ಡಿ.ಎಲ್.ಎನ್. ಅವರು "ಪಂಪ ಭಾರತದೀಪಿಕೆ"ಯಲ್ಲಿ ತಮ್ಮ ತಪ್ಪನ್ನು ತಿದ್ದಿಕೊಂಡು "ಭೀಮನಾಮಧೇಯಂ" ಎಂಬುದು ಸರಿಯಾದ ಪಾಠವೆಂದು ಹೇಳಿದ್ದಾರೆ. ಅವರು ಛಂದಸ್ಸು ಸರಿಯಿಲ್ಲವೆಂದಿ ರುವುದು "ಸಿಕರಂ ಭೀಮನಾಮಧೇಯಂ" ಎಂಬುದಕ್ಕೆ. ಲೇಖಕರು ಗುರುತಿಸಿರು ವಂತೆ "ಸೀಕಪ । ರಂಭೀ । ಮನಾಮ । ಧೇಯಂ । ತನಯಂ" ಎಂಬುದಕ್ಕಲ್ಲ. ಈ ಪಾಠ ಶುದ್ಧವೆಂದು ಲೇಖಕರು ಹೇಳುತ್ತಾರೆ. (ಸಾಪೇಕ್ಷ ಪುಟ 64). 'ತಮೋಸೀಕ' ಆದ ಮೇಲೆ 'ಪರಂ' ಎಂಬುದನ್ನು ಹೇಗೆ ಅರ್ಥೈಸಬೇಕು ? ಶ್ರೀ ಡಿ.ಎಲ್.ಎನ್. ಅವರು ಸರಿಯಾದ ಅರ್ಥದ ದೃಷ್ಟಿಯಿಂದಲೂ ಛಂದಸ್ಸಿನ ದೃಷ್ಟಿಯಿಂದಲೂ ತಿದ್ದಿ "ತಮೋನೀ[ಶಾ]ರಂ ಭೀಮನಾಮಧೇಯಂ ತನಯಂ" ಎಂದು ಸರಿಯಾದ ಪಾಠ

ವನ್ನು ರಚಿಸಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ. (ಪಂಪಭಾರತದೀಪಿಕೆ, ಮೈ.ವಿ.ವಿ. ಪ್ರಕಟಣೆ, ಎರಡನೇ ಮುದ್ರಣ-1976).

ಶ್ರೀ ಜಾಗೀರದಾರರು ಮುಂದುವರಿದು "ಅಭಿಮಾನಚಂದ್ರನಿಗೆ 'ಭವ್ಯರತ್ನಾಕರ' ಎಂಬ ಬಿರುದಿದ್ದುದರಿಂದ ಅವನು ಜೈನನಾಗಿದ್ದ" ಎಂದು ಮುಂತಾಗಿ ಹೇಳುತ್ತಾರೆ. ಅದು ಸರಿಯಲ್ಲವೆಂದು ಜಿನವಲ್ಲಭನ ಶಾಸನದಿಂದಲೂ ಪಂಪನ ಪದ್ಯದಿಂದಲೂ ಖಂಡಿತವಾಗಿಯೇ ತಿಳಿಯುತ್ತದೆ. ಅದರಲ್ಲಿಯೂ 'ತನ್ನ ಸಮಾಜದಿಂದ ಬಹಿಷ್ಕೃತನಾಗಿ ಎಲ್ಲ ಸಂಪತ್ಪದವಿಯನ್ನು ತ್ಯಜಿಸಿ ಹೊರಬಿದ್ದಿದ್ದಾನೆ' ಎಂಬ ಶ್ರೀಯುತರ ಹೇಳಿಕೆಗೆ ಆಧಾರವೆಲ್ಲಿದೆ? ಹಾಗಿದ್ದಿದ್ದರೆ ಕರಿತುರಗ, ಮಣಿಕನಕಗಳನ್ನು ದಾನಮಾಡಿ ಪ್ರಸಿದ್ಧನಾಗಲು ಹೇಗೆ ಸಾಧ್ಯ? 'ಅವನು ವೆಂಗಿಪಟು ಊರಿನಲ್ಲಿ ನೆಲಸಿನಿಂತಿಲ್ಲ. ಶಾಸನದಲ್ಲಿ ಆತನನ್ನು ನಿಡುಂಗೊಣ್ಡೆ(=ನಿಡುಗುಂದಿ)ಯ ಅಭಿಮಾನಚಂದ್ರ ಎಂದು ಹೇಳಿರುವುದರಿಂದ ಮತ್ತು ಅವನು ಪಡೆದ ಊರೆ ಆಗಿದ್ದುದರಿಂದ ಅಲ್ಲಿಗೆ ಹೋಗಿ ನಿಂತು ಅಲ್ಲಿಂದ ಮುಂದಕ್ಕೆ ಇನ್ನಾವುದೋ ಸ್ಥಳಕ್ಕೆ ಈ ಕುಟುಂಬ ವಲಸೆ ಹೋಗಿದೆ' ಎಂದು ಲೇಖಕರು ಹೇಳುತ್ತಾರೆ. (ಸಾಪೇಕ್ಷ ಪುಟ 64). ಇದು ಕೂಡ ಸರಿಯಲ್ಲವೆಂದು ಪಂಪನ ಪದ್ಯದಿಂದಲೇ ತಿಳಿಯುತ್ತದೆ. ನಿಡುಂಗೊಣ್ಡೆ (=ನಿಡುಗುಂದಿ)ಯು ಅಭಿಮಾನಚಂದ್ರನು 'ಪಡೆದ ಊರು' ಆಗಿಲ್ಲದೆ ಮಾಧವ ಸೋಮಯಾಜಿಯು 'ಪಡೆದ ಊರು' ಆಗಿದೆ. ಇಲ್ಲಿಯು ಅವನ 'ಕರಿತುರಗ'ದ ದಾನದ ವಿಷಯು ಅವನ ಯಾವುದೋ ಪ್ರಮುಖ ಅಧಿಕಾರವನ್ನೇ ತೋರುತ್ತದೆ ಎಂದು ಹೇಳಬೇಕು. ಏಕೆಂದರೆ ಆನೆ ಕುದುರೆಗಳನ್ನು ದಾನ ಕೊಡುವುದು ಸಾಧಾರಣ ಶ್ರೀಮಂತರಿಗೆ ಹೋಗಲಿ, ಹೆಚ್ಚಿನ ಸಂಪತ್ತುಳ್ಳವರಿಗೂ ಅಸಾಧ್ಯವಾದ ಮಾತೇ ಸರಿ. ಆದ್ದರಿಂದಲೇ ಈತನ ತಂದೆ ಮಾಧವ ಸೋಮಯಾಜಿಯ 'ಪದವಿ' ವಂಶಪರಂಪರೆಯಿಂದ ಮುಂದುವರಿದಿರಬೇಕು. ಇಲ್ಲಿಯೇ ಇನ್ನೊಂದು ವಿಷಯು. ಏನೆಂದರೆ, ಅಭಿಮಾನಚಂದ್ರನಿಗೆ "ಭವ್ಯರತ್ನಾಕರ", ಭೀಮನಿಗೆ "ಗುಣಮಣಿರತ್ನಾಕರ", ಹಾಗೂ ಜಿನವಲ್ಲಭನಿಗೆ "ವಾಗ್ವಧೂವರವಲ್ಲಭ" ಎಂಬ ಬಿರುದಿದ್ದಿತು. ಈ ಬಿರುದುಗಳನ್ನು ಯಾರು ಕೊಟ್ಟಿರಬೇಕು? ಪಂಪನಿಗಂತೂ ಅರಿಕೇಸರಿಯೇ—ಅಂದರೆ ರಾಜನೇ—ಬಿರುದುಗಳನ್ನು ಕೊಟ್ಟನು ಎಂಬುದು ಖಚಿತವಾಗಿಯೇ ಇದೆ. ಆದರೆ ಅಭಿಮಾನಚಂದ್ರನಿಗೆ, ಭೀಮನಿಗೆ ಬಿರುದನ್ನು ಯಾರು ಕೊಟ್ಟಿರಬಹುದು? ಅವರುಗಳಿಗೆ ಸಮಕಾಲೀನ ರಾಜನೇ ಬಿರುದುಗಳನ್ನು ಕೊಟ್ಟಿರಬಹುದೆಂದು ಊಹಿಸಬಹುದಲ್ಲವೇ? ಹಾಗಾದರೆ ಮಾಧವ ಸೋಮಯಾಜಿಯು 'ಪದವಿ'ಯಿಂದ ಮೊದಲು ಮಾಡಿ ಜಿನವಲ್ಲಭನ ವರೆಗಿನ ಈ ಸಾಮಂತನವರೆಗೂ ರಾಜಮನೆತನದವರಿಗೂ ಸಂಬಂಧವನ್ನು ಕಲ್ಪಿಸಬಹುದೇ?

ಪಂಪನು ಯತಿಯಾಗಿದ್ದನೇ ?

ಲೇಖಕರು ಪಂಪನು ಯತಿಯಾಗಿದ್ದ ಎನ್ನುತ್ತಾರೆ. ಅದಕ್ಕೆ ಈ ರೀತಿಯ ವಿವರಣೆಯನ್ನು ಕೊಡುತ್ತಾರೆ : "ಪಂಪನು ತನ್ನನ್ನು 'ಕೊಂಡಕುಂದಾನ್ವಯನಂದನ ವನಶುಕ' ಎಂದು ಹೇಳಿಕೊಂಡಿದ್ದಾನೆ. ಕೊಂಡಕುಂದಾನ್ವಯವು ಯತಿಗಳ ಪರಂಪರೆ. ಜಿನವಲ್ಲಭನು ತನ್ನನ್ನು ಕೊಂಡಕುಂದಾನ್ವಯದವನು ಎಂದು ಹೇಳಿಕೊಂಡಿಲ್ಲ. ಲೌಕಿಕರಿಗೆ ಯತಿಗಳ ಅನ್ವಯವು ಬರುವುದಿಲ್ಲ. ಈ ಸಂಗತಿಯನ್ನು ತಿಳಿಯದೆಯೆ ಪಂಪನನ್ನು ಲೌಕಿಕವ್ಯಕ್ತಿಯೆಂದು ಕನ್ನಡ ಸಾರಸ್ವತಲೋಕ ಇದುವರೆಗೆ ನಿರೂಪಿಸುತ್ತ ಬಂದಿದೆ. ಈಗ ಈ ತಪ್ಪುಗ್ರಹಿಕೆ-ತಿಳಿವಳಿಕೆ ಮಾರ್ಪಾಟು ಆಗಬೇಕಿದೆ" ಎನ್ನುತ್ತಾರೆ. (ಸಾಪೇಕ್ಷ ಪುಟ 69).

ಈ ವಿವರಣೆಯಲ್ಲಿ ಮೊತ್ತಮೊದಲಿಗೇ ಗಮನಿಸಿದಂತೆ ಆ ರೂಪಕದ ಅರ್ಥವನ್ನು ಲೇಖಕರು ಮಾಡಿಕೊಂಡಿಲ್ಲವೆಂದೇ ಹೇಳಬೇಕಾಗುತ್ತದೆ. 'ಕೊಂಡಕುಂದಾನ್ವಯನಂದನ ವನಶುಕ' ಎಂಬುದು ಪಂಪನ ಮಾತು. ಅದಕ್ಕೆ ಅರ್ಥ ಹೇಳುವಾಗ 'ನಂದನವನಶುಕ' ಎಂಬುದನ್ನು ಪೂರ್ತಿಯಾಗಿ ಬಿಟ್ಟು 'ಕೊಂಡಕುಂದಾನ್ವಯ' ಎಂಬ ಪದವನ್ನು ಮಾತ್ರ ತೆಗೆದುಕೊಂಡಿದ್ದಾರೆ. "ಕೊಂಡಕುಂದಾನ್ವಯ ನಂದನವನಕ್ಕೆ ಶುಕ (ಗಿಣಿ)" ಎಂಬುದು ಅದರರ್ಥವಲ್ಲವೇ ? ಅಂದರೆ 'ಕೊಂಡಕುಂದಾನ್ವಯ'ದ ಭಕ್ತ ಎಂದು ಹೇಳಬಹುದಲ್ಲವೇ ?

"ಪಂಪನು ವಿಕ್ರಮಾರ್ಜುನವಿಜಯ ಗ್ರಂಥವನ್ನು ಬರೆಯುವ ಕಾಲಕ್ಕೆ ಸಂಘದ ನೇತಾರನಾಗಿದ್ದ ; ಎಂದರೆ ಸಂಘದ ಮತ್ತು ಪಂಪನ ಆತ್ಮೀಯ ಗುರು ಜಿನೇಂದ್ರ ಮುನಿಗಳು ನಿರ್ವಾಣವನ್ನು ಹೊಂದಿದ್ದಾರೆ. ಅಂತೆಯೇ ಆದಿಪುರಾಣ 'ದೇವೇಂದ್ರ-ಮುನೀಂದ್ರವಂದಿತ ಜಿನೇಂದ್ರ ವಾಕ್ಚಂದ್ರಿಕಾ ಪ್ರಸರಪ್ರಸಾದ ವಾದರೆ, ವಿಕ್ರಮಾರ್ಜುನವಿಜಯವು ನೇರವಾಗಿ ತಾನು ಪೂಜಿಸುತ್ತಿರುವ ಜಿನಪದಾಂಭೋಜದ ವರಪ್ರಸಾದವಾಗಿದೆ" ಎನ್ನುತ್ತಾರೆ (ಸಾಪೇಕ್ಷ ಪುಟ 43). ಈ ವಿಷಯಕ್ಕೆ ಅಂದರೆ ಪಂಪನು ಜಿನಸಂಘದ ನೇತಾರನಾಗಿದ್ದ ಎಂದು ಹೇಳುವುದಕ್ಕೆ ಏನು ಆಧಾರವಿದೆ ? ಲೇಖಕರೇ ಖಚಿತವಾಗಿ ಹೇಳುವಂತೆ ಆದಿಪುರಾಣ, ವಿಕ್ರಮಾರ್ಜುನವಿಜಯ ಗ್ರಂಥಗಳು ಒಂದೇ ವರ್ಷದಲ್ಲಿ ರಚನೆಯಾಗಿವೆ. ಕೃತಿಗಳು ಪ್ರಕಟಗೊಂಡ ಕಾಲ ಕ್ರಿ.ಶ. 941 ನವೆಂಬರ್ 7 ರಲ್ಲಿ ಆದಿಪುರಾಣ, ಕ್ರಿ. ಶ. 942 ಮಾರ್ಚ್ ತಿಂಗಳಲ್ಲಿ ವಿಕ್ರಮಾರ್ಜುನವಿಜಯ. ಕೇವಲ ಐದೇ ತಿಂಗಳಲ್ಲಿ ಅವನ ಗುರುಗಳು ನಿರ್ವಾಣಗೊಂಡು (–ಇನ್ನೂ ಪಂಪಭಾರತ ರಚನೆಯಾಗುತ್ತಿರುವಾಗಲೇ–) ಪಂಪನು ಸಂಘದ ನೇತಾರನೂ ಆಗಿಬಿಟ್ಟಿದ್ದನೆ ?

ಇಷ್ಟೇ ಅಲ್ಲ. ಈ ಪದ್ಯವನ್ನು ಗಮನಿಸಬೇಕು :

ಕದಳೀಗರ್ಭಶ್ಯಾಮಂ । ಮೃದುಕುಟಿಲಶಿರೋರುಹಂ ಸರೋರುಹವದನಂ
ಮೃದುಮಧ್ಯಮ ತನು ಹಿತಮಿತ । ಮೃದುವಚನಂ ಲಲಿತಮಧುರ ಸುಂದರವೇಷಂ ॥

ಈ ಪದ್ಯವು ಆದಿಪುರಾಣದಲ್ಲಿ ಬಂದಿದೆ. ಇದಕ್ಕೆ ಲೇಖಕರು ಕೊಡುವ ಅರ್ಥ ಇಂತಿದೆ. "ಜಿನರೂಪವೇ (ದಿಗಂಬರತ್ವವೇ) ಲಲಿತ ಮಧುರ ಸುಂದರ ರೂಪ. ಸುಂದರವಾದ ವ್ಯಕ್ತಿ ಮಾತ್ರ ದಿಗಂಬರತ್ವವನ್ನು ಧರಿಸಲು ಯೋಗ್ಯ. ಅಸುಂದರ ದೇಹವಂತರಿಗೆ ದಿಗಂಬರತ್ವವನ್ನು ಕೊಡಬಾರದೆಂದೇ ಜೈನಶಾಸ್ತ್ರಗಳು ಹೇಳಿವೆ" ಎನ್ನುತ್ತಾರೆ. (ಸಾಪೇಕ್ಷ ಪುಟ 42). ಕವಿ "ಲಲಿತ ಮಧುರ ಸುಂದರ ವೇಷಂ" ಎಂದು ಹೇಳಿದ್ದರೆ ಇವರು 'ರೂಪ'ವೆಂದು ಅರ್ಥ ಮಾಡುತ್ತಾರೆ. (ವೇಷ=ಉಡುಗೆ, ಪೋಷಾಕು, ಅಲಂಕಾರ ಎಂಬ ಅರ್ಥವಿದೆ). ಇಲ್ಲಿ 'ಮೃದುಕುಟಿಲಶಿರೋರುಹಂ' ಎಂಬ ಭಾಗಕ್ಕೆ ಲೇಖಕರು ಅರ್ಥ ಹೇಳಿಯೇ ಇಲ್ಲ. ಪಂಪನು ಯತಿಯೇ ಆಗಿದ್ದರೆ ಅವನಿಗೆ ಗುಂಗುರುಕೂದಲು ಇರುತ್ತಿತ್ತೆ ?

ಆದಿಪುರಾಣದಲ್ಲಿ ಬರುವ ಮೊದಲನೇ ಪದ್ಯದ ಅರ್ಥವನ್ನು ಲೇಖಕರು ಹೇಳಿದಂತೆ ತಿಗೆದುಕೊಳ್ಳಲಾಗುವುದಿಲ್ಲ. ".... ಪಾಪಪರಿಹಾರಮಾಡುವ ಪದಕಮಲಗಳನ್ನು ಉಳ್ಳವನು. ಆತ ಎಮಗೆ ಮುಕ್ತಿಸುಖವನ್ನು ಕೊಡಲಿ". (ಎಮಗೆ=ದೇವೇಂದ್ರ ಮುನೀಂದ್ರ ಹಾಗೂ ಆ ಪರಂಪರೆಯಲ್ಲಿ ಬಂದ ತನಗೆ ಎಂದರೆ ಪಂಪನಿಗೆ) ಅದಿ ಟಿಪ್ಪಣಿಯಲ್ಲಿ ಪಂಪನ ಗುರುಪರಂಪರೆಯಲ್ಲಿ ದೇವೇಂದ್ರ ಮುನೀಂದ್ರರೂ ಒಬ್ಬರೆಂದೂ ಎಮಗೆ ಎಂಬ ಬಹುವಚನಕ್ಕೆ ಬೆಲೆಕೊಟ್ಟು ಪಂಪನನ್ನೂ ಅವನ ಗುರುಗಳನ್ನೂ ಸ್ವೀಕರಿಸಿದ್ದೇನೆಂದೂ ಹೇಳಿದ್ದಾರೆ. (ಸಾಪೇಕ್ಷ ಪುಟ 79). ಅವರು ಉದಾಹರಿಸಿರುವ ಆರನೆಯ ಪದ್ಯದಲ್ಲಿಯೂ ".... ಸರ್ವ ಸಾಧುಗಳೆಮ್ಮಂ" ಎಂಬ ಬಹುವಚನವೇ ಬಂದಿದೆ. ಎಂಟನೆಯ ಪದ್ಯದಲ್ಲಿ ".... ವೃಷಭಕಥಾರಚನೋಕ್ತಿಯಲ್ಲಿ ಮಾಣ್ದರ-ದೆಮಗಾಗಳುಂ ವೃಷಭಯಕ್ಷನ ವಿಘ್ನಮನಃ ಪ್ರವೃತ್ತಿಯುಂ" ಇಲ್ಲಿಯೂ ಪಂಪ ತನ್ನ ಗ್ರಂಥ ರಚನೆಗೆ ಕೇಳಿಕೊಳ್ಳುವಾಗಲೂ ಬಹುವಚನವನ್ನೇ—'ಎಮಗಾಗಳುಂ'—ಪ್ರಯೋಗಿಸಿದ್ದಾನೆ. ಆದರೆ ಇದರ ಮುಂದಿನ ಪದ್ಯದಲ್ಲಿ ಸ್ಪಷ್ಟವಾಗಿ ".... ಭಾವಿಸಿ-ಯೋದುವ ಕೇಳ್ವ ಪೂಜಿಸಾದರಿಸುವ ಭವ್ಯಕೋಟಿಗೆ ನಿರಂತರ ಸೌಖ್ಯಮನೀ-ವುದು ...." ಎಂದು ಎಲ್ಲರನ್ನೂ ಸೇರಿಸಿಯೇ ಬೇಡಿಕೊಳ್ಳುತ್ತಾನೆ. ಮುಂದೆ ಹತ್ತನೆಯ ಪದ್ಯದಿಂದ ಹದಿನಾರನೆಯ ಪದ್ಯದ ವರೆಗೆ ನಮ್ಮ ಎಲ್ಲರಿಗೂ ಒಳ್ಳೆಯದು ಮಾಡಲಿ ಎಂಬ ಬೇಡಿಕೆಯಿದೆ. 16ನೆಯ ಪದ್ಯವಂತೂ "ಸೂರ್ಯನ ಬೆಳಕು ಕತ್ತಲೆಯನ್ನು ಓಡಿಸುವಂತೆ ಇಡೀ ಜಗತ್ತಿನ ಮಿಥ್ಯಾತ್ವವೆಂಬ ಕತ್ತಲೆಯನ್ನು ಅಕಳಂಕದೇವ ಪ್ರಮಾಣವೆಂಬ ರತ್ನದೀಪಗಳ ಕಿರಣ ಸಮೂಹವು ಕಳೆಯಲಿ" ಎಂಬ ವಿಶಾಲಮನೋಭಾವದ ಪ್ರಾರ್ಥನೆಯಿದೆ. ಸಾಧಾರಣವಾಗಿ ಮಂಗಳಪದ್ಯಗಳಲ್ಲಿ ಸಮಸ್ತ ಜನರಿಗೂ ಮಂಗಳವಾಗಲಿ ಎಂಬ ಆಶಯ ಎಲ್ಲ ಕವಿಗಳಲ್ಲಿ ಕಾಣುವಂತೆಯೇ

ಪಂಪನಲ್ಲೂ ಬಂದಿದೆ. ವಾದಕ್ಕಾಗಿ ಪಂಪನನ್ನು 'ಯತಿ' ಎಂದು ಒಪ್ಪಿಕೊಂಡರೂ ಅವನು ತನಗೊಬ್ಬನಿಗೇ ಅಥವಾ ತಾನು ಹಾಗೂ ತನ್ನ ಗುರುಗಳಿಗೆ ಮಾತ್ರ ಮುಕ್ತಿ ಸಿಗಲಿ, ಒಳ್ಳೆಯದಾಗಲಿ ಎಂದು ಬೇಡಿಕೊಳ್ಳಲಾರ.

ಈಗ ಲೇಖಕರು ಕೊಟ್ಟಿರುವ ಎರಡು ಆದಿಪುರಾಣದ ಪದ್ಯಗಳನ್ನು ನೋಡೋಣ :—

ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆ ನೆಗೞ್ತೆ ಲಾಭಮೆಂ
ಬಿವೆ ವಲಮಿಂದ್ರಪೂಜೆ ಭುವನಸ್ತುತಮಪ್ಪ ನೆಗೞ್ತೆ ಮುಕ್ತಿ ಸಂ
ಭವಿಸುವ ಲಾಭಮೆಂಬಿವೆ ಜಿನೇಂದ್ರಗುಣಸ್ತುತಿಯಿಂದೆ ತಾಮೆ ಸಾ
ರವೆ ಪೆಱರೀವುದೇಂ ಪೆಱರ ಮಾಡುವುದೇಂ ಪೆಱರಿಂದಮಪ್ಪುದೇಂ ।

ಪೆಸರ್ಗೊಂಡಿಂದ್ರನರೇಂದ್ರವಂದ್ಯನನೊರಲ್ದೆತ್ತಾನುಮೋರೊರ್ಮೆ ಚಿಂ
ತಿಸಿದೊಂಗಂ ಪವಣಲ್ಲ ಪುಣ್ಯಮೆನೆ ಪೂಣ್ದೊಳ್ಪಿಂದಮೋರಂತೆ ಭಾ
ವಿಸಿ ತಾಂ ತನ್ಮಯನಾಗಿ ತಚ್ಚರಿತಮಂ ಕಾವ್ಯಂಗಳೊಳ್ಮಾಡೆ ಬ
ಣ್ಣಿಸಿ ಪೇೞ್ದಾತನ ಕರ್ಮನಿರ್ಜರೆಯನಂತಿಂತುಂತೆನಲ್ಪರ್ಕುಮೇ ।

"ಜಿನೇಂದ್ರ ಗುಣಸ್ತುತಿಯಿಂದ ಏನೆಲ್ಲವೂ ದೊರೆಯುತ್ತದೆ. ಕವಿತೆ ಬರೆಯುವುದರಿಂದ ಏನನ್ನೂ ಆಶಿಸಬೇಕಾಗಿಲ್ಲ. ಮೇಲಾಗಿ ಮನುಷ್ಯರು ಏನು ಕೊಟ್ಟಾರು? ಅದು ಎಷ್ಟು ಇದ್ದೀತು ? ಜಿನೇಂದ್ರರು ಕೊಡುವುದು ಶಾಶ್ವತವಾದದ್ದು. ಜಿನಸ್ತುತಿಯಿಂದ ಇಂದ್ರನಿಂದ ಪೂಜೆ, ಕೀರ್ತಿ ಮತ್ತು ಮುಕ್ತಿ ಏನೆಲ್ಲವೂ ದೊರೆಯುತ್ತದೆ. ೪೦ ವರ್ಷದ ಪಂಪನಿಗೆ ಆಗಲೇ ಮುಕ್ತಿಯ ಚಿಂತನೆ !" ಎಂದು ಲೇಖಕರು ಹೇಳುತ್ತಾರೆ (ಸಾಪೇಕ್ಷ ಪು. 110).

(ಇಲ್ಲಿ ಪದ್ಯದ ಅರ್ಥವನ್ನು ಲೇಖಕರು ಸರಿಯಾಗಿ ಹೇಳಿಲ್ಲ. "ಜಿನಸ್ತುತಿಯಿಂದ ಇಂದ್ರನಿಂದ ಪೂಜೆ" ಎಂಬುದು ಅರ್ಥಕ್ಕೆ ಸರಿಹೊಂದುವುದಿಲ್ಲ. ಇಂದ್ರನು ಜಿನೇಂದ್ರನಿಗೆ ಎಂತಹ ಪೂಜೆ ಮಾಡಿದನೋ ಅಂಥದೇ ಪೂಜೆಯ ರೀತಿ ಜಿನೇಂದ್ರ ಸ್ತುತಿಯಿಂದ ದೊರೆಯುತ್ತದೆಂದು ಅರ್ಥ.)

ಲೇಖಕರು ಹೇಳಿರುವ ಈ ಪದ್ಯಗಳ ಹಿನ್ನೆಲೆಯಲ್ಲಿ ಮತ್ತೊಂದು ಮುಖ್ಯ ಸಂಗತಿಯೊಂದನ್ನು ಗಮನಿಸಬಹುದು. ಒಬ್ಬ ಯತಿಯಾಗಿದ್ದವನು ಒಬ್ಬ ಮನುಷ್ಯನನ್ನು ನಾಯಕನನ್ನಾಗಿ ಮಾಡಿಕೊಂಡು ಅವನ ಮೇಲೆ ಕಾವ್ಯ ಬರೆಯಲಾರ. ಅವನು ಸಾಮಂತ ಚೂಡಾಮಣಿಯೇ ಆಗಿರಲಿ, ಚಕ್ರವರ್ತಿಯೇ ಆಗಿರಲಿ. ಹಾಗೆಯೇ ಧಾರ್ಮಿಕನಾದ ಒಬ್ಬ ರಾಜನು ತನ್ನ ಅರಮನೆಗೋ ಆಸ್ಥಾನಕ್ಕೋ ಕರೆಸಿಕೊಂಡು "ಪಿರಿದನಿತ್ತು ನಿಜಾಭಿಖ್ಯಾತಿಯಂ ಇಳೆಯೊಳ್ ನಿಱಿಸಲ್ಕೀತೆರದಿತಿಹಾಸ

ಕಥೆ"ಯನ್ನು ಬರೆಯಲು ಒಪ್ಪಿಸಿದ್ದ ಎಂದರೆ ಪಂಪ ಮತ್ತು ಅರಿಕೇಸರಿ ಇಬ್ಬರ ವ್ಯಕ್ತಿತ್ವಕ್ಕೂ ಮಸಿ ಬಳಿದಂತೆಯೇ ಸರಿ. "ನೀನು ನನ್ನನ್ನು ಹೊಗಳಿ ಬರೆ" ಎಂದು ಯಾವ ರಾಜನಾದರೂ ಯತಿಯೊಬ್ಬನಿಗೆ ಹೇಳಲಾರ. ಜೈನ ಧರ್ಮದಲ್ಲಿಯಂತೂ ಯಾವ ಚಕ್ರವರ್ತಿಯೂ ಕೂಡ ಯತಿಗಿಂತ, ತೀರ್ಥಂಕರರಿಗಿಂತ ದೊಡ್ಡವನಲ್ಲ. ತಾವು ಸಂನ್ಯಾಸಿಯಾಗುವುದಕ್ಕೆ ಎಲ್ಲ ತೀರ್ಥಂಕರರೂ ತಮ್ಮ ಸಾಮ್ರಾಜ್ಯವನ್ನೇ ತ್ಯಾಗ ಮಾಡಿ ಮುಕ್ತಿಯನ್ನು ಕಂಡುಕೊಂಡ ಮಹಾಮಹಿಮರು. ಅಂಥದರಲ್ಲಿ ಪಂಪ ಖಂಡಿತವಾದ ಮೇಲೆ 'ಒಬ್ಬ ಮನುಷ್ಯನನ್ನು ನಾಯಕನನ್ನಾಗಿ ಮಾಡಿಕೊಂಡು ಒಂದು ಲೌಕಿಕ ಕಾವ್ಯವನ್ನು ಬರೆದ. ಆ ರಾಜನನ್ನು ಇಂದ್ರ ಚಂದ್ರ ಎಂದು ಹೊಗಳಿದ. ಅದಕ್ಕೋಸ್ಕರ ಬಿರುದು ಪಡೆದ. ಅಗ್ರಹಾರವನ್ನು ದಾನಪಡೆದ, ಹಿರಣ್ಯದಾನವನ್ನೂ ಗೋದಾನವನ್ನೂ ಪಡೆದ ಅಂದರೆ ಯತಿಯಾದ ಪಂಪನು ಲೌಕಿಕ ಕಾವ್ಯವನ್ನು ಬರೆದನು (ಬೆಳಗುವೆನಿಲ್ಲಿ ಲೌಕಿಕಮಂ) ಲೌಕಿಕ ಸುಖೋಪಭೋಗಕ್ಕೆ ಬೇಕಾದ ಎಲ್ಲವನ್ನೂ ಪಡೆದ. ಅಷ್ಟೇ ಅಲ್ಲ ಅದನ್ನು ಹೆಮ್ಮೆಯಿಂದ ತನ್ನ ಕಾವ್ಯದಲ್ಲಿಯೂ ಮುಕ್ತಕಂಠದಿಂದ ಹೊಗಳಿದ ಎಂಬುದೆಲ್ಲ ಪಂಪನ 'ಯತಿ'ಯ ವ್ಯಕ್ತಿತ್ವಕ್ಕೆ ಹೊಂದುತ್ತದೆಯೆ?

ಎಷ್ಟು ವಿಚಿತ್ರವೆಂದರೆ, ಪಂಪನು ಆದಿಪುರಾಣವನ್ನು ಮುಗಿಸಿದ ತತ್‌ಕ್ಷಣವೇ ವಿಕ್ರಮಾರ್ಜುನವಿಜಯವನ್ನು ಬರೆಯುವ ಮುಂಚೆಯೇ ರಾಜನಿಂದ—'[illegible]' ಎಂದು ಕವಿಯೇ ಹೇಳುತ್ತಾನೆ—ಚೆನ್ನಾಗಿಯೇ ಲೌಕಿಕ ಲಾಭಗಳನ್ನು ಪಡೆದೇ ಕಾವ್ಯವನ್ನು ಪ್ರಾರಂಭಮಾಡಿ ಮುಗಿಸಿದನು. ... ಮತ್ತೆ ಮುಗಿಸಿದ ತತ್‌ಕ್ಷಣ ಲೇಖಕರೇ ಹೇಳುವಂತೆ, ಎಲ್ಲ ವಿಧದ ಲಾಭಗಳನ್ನು—ಗೋದಾನ, ಭೂದಾನ, ಹಿರಣ್ಯದಾನಗಳನ್ನು—ಪಡೆದನು. ಇಲ್ಲಿ ಲೇಖಕರ ಹೇಳಿಕೆಯ ವಿರೋಧಾಭಾಸ ಕಣ್ಣಿಗೆ ಹೊಡೆಯುವಂತೆ ಕಾಣುತ್ತದೆ. ಇಲ್ಲಿಯೇ ಇನ್ನೊಂದು ಮಾತನ್ನು ಹೇಳುವುದಾದರೆ, ಮೇಲೆ ಹೇಳಿರುವ ಎರಡು ಪದ್ಯಗಳೂ ಜಿನಸೇನಾಚಾರ್ಯರ 'ಆದಿ ಪುರಾಣ'ದ ಅನುವಾದವಾಗದೆ ಲೇಖಕರು ಹೇಳುವ ಯಾವ ಮಾತೂ ಪಂಪನಿಗೆ ಅನ್ವಯವಾಗುವುದೇ ಇಲ್ಲ. ಏಕೆಂದರೆ ಲೇಖಕರೇ ಹೇಳುವಂತೆ ಈ ಎರಡು ಪದ್ಯಗಳೂ ಪಂಪನವು ಅಲ್ಲವೆಂದಾದರೆ ಲೇಖಕರ ವಿಚಾರಗಳು ಪುನರ್ವಿಮರ್ಶೆಗೆ ಒಳಗಾಗಬೇಕೆಂದು ತೋರುತ್ತದೆ. (ಸಾಪೇಕ್ಷ ಪು. 20)

ಒಂದೆಡೆ ಲೇಖಕರು 'ಪಂಪನ ವ್ಯಕ್ತಿತ್ವವನ್ನು [illegible]' ಎನ್ನುತ್ತಾರೆ. ಅಷ್ಟೇ ಅಲ್ಲ "ಸ್ವಯಂ ಯತಿಪತಿಯಾದ ಪಂಪ ಆದಿಪುರಾಣದ [illegible] ಜೀವನದ ಚರಮದಲ್ಲಿ ಕೇವಲಜ್ಞಾನವನ್ನು ಪಡೆದ ವ್ಯಕ್ತಿಗಳ [illegible] '[illegible]', '[illegible]', '[illegible]', 'ಕವಿತಾರ್ಣವ' ...

ತನ್ನ ಬಿರುದುಗಳನ್ನು ಆ ಕೇವಲಜ್ಞಾನಿಗಳಲ್ಲಿ ಆರೋಪಿಸಿ ತನ್ನ ಆಧ್ಯಾತ್ಮಜೀವನದ ಚಿತ್ರವನ್ನು ಬಿಡಿಸಿ ನಮ್ಮ ಮುಂದೆ ಇಟ್ಟಿದ್ದಾನೆ" ಎಂದೂ ಹೇಳುತ್ತಾರೆ. (ಸಾಪೇಕ್ಷ ಪು. 9). ಅಲ್ಲದೆ ಬೇರೊಂದೆಡೆಯಲ್ಲಿ "ಭರತಯತಿಪತಿಯಲ್ಲಿ ತನ್ನನ್ನು ಆರೋಪಿಸಿಕೊಂಡಿರುವ ಅಥವಾ ಭರತಯತಿಪತಿಯ ರೂಪದಲ್ಲಿ ತನ್ನ ರೂಪವನ್ನು ಶ್ಲೇಷೆಯ ಮೂಲಕ ಕಂಡರಿಸಿರುವ ಪಂಪ ತಾನೂ ಯತಿಯಾಗಿದ್ದುದನ್ನು ಸ್ಪಷ್ಟ ಸ್ಪಷ್ಟವಾಗಿ ಟಾಠಥಾಢಣವಾಗಿ ಹೇಳಿದ್ದಾನೆ" ಎಂದು ನಾವೂ ಟಾಠಡಾಢಣವಾಗಿ ನುಡಿದಿದ್ದಾರೆ. (ಸಾಪೇಕ್ಷ ಪು. 95) ಆದರೆ ಇವರು ಇದಕ್ಕಾಗಿ ಉದಾಹರಿಸಿರುವ ಪದ್ಯಗಳಂತೂ ಖಂಡಿತಾ ಈ ಅರ್ಥ ಕೊಡುವುದಿಲ್ಲ. ಅದು ಕೇವಲ ಭರತಚಕ್ರವರ್ತಿ ಯತಿಯಾದ ವಿಷಯವನ್ನು ಹೇಳುತ್ತದೆ."........ಸುರನರಲೋಕಂ ಚರಣಾಬ್ಜಕ್ಕೆರಗೆ ಭರತಯತಿಪತಿ ನೆಗಳ್ದಂ" ಎಂದು ಆ ಪದ್ಯ ಮುಗಿಯುತ್ತದೆ.

ಪಂಪ ತನ್ನನ್ನು ಮೊದಲನೇ ತೀರ್ಥಂಕರನಾದ ಆದಿನಾಥನಿಗೇ ಹೋಲಿಸಿಕೊಂಡಿದ್ದಾನೆ. ಹಾಗೂ ಜೈನಧರ್ಮದವರ ಪೂಜೆಗೆ ಅರ್ಹನಾಗಿರುವ ವ್ಯಕ್ತಿ ಭರತನಿಗೆ ತನ್ನನ್ನು ಸಮೀಕರಿಸಿಕೊಂಡಿದ್ದಾನೆ ಎಂದು ಹೇಳಿ ಲೇಖಕರು ಮಾಡಿರುವ ಕೆಲಸವೇನು? ಹೋಗಲಿ ಹಾಗಾದರೆ ಇಷ್ಟೆಲ್ಲ ಆದಮೇಲೆ ಮನುಷ್ಯನೊಬ್ಬನ ಮೇಲೆ ಕಾವ್ಯ ಬರೆದು ದಾನಗಳನ್ನು ಪಡೆದ ಎಂದರೆ ಇದನ್ನೆಲ್ಲ ಸಮನ್ವಯ ಮಾಡುವುದಾದರೂ ಹೇಗೆ?

'ಪಂಪನ ನುಡಿ ಜಿನೇಂದ್ರರ ಮುಖದಿಂದ ಹುಟ್ಟಿದ ಬೆಳ್ದಿಂಗಳು' ಎನ್ನುತ್ತಾರೆ. ಆದರೆ ಪಂಪನೇ 'ಇದು ದೇವೇಂದ್ರ ಮುನೀಂದ್ರವಂದ್ಯ ಪರಮಜಿನೇಂದ್ರವಾಕ್ಚಂದ್ರಿಕಾ ಪ್ರಸರಪ್ರಸಾದ' ಎಂದು ಆದಿಪುರಾಣದಲ್ಲೂ 'ಇದು ವಿವಿಧ ವಿಬುಧ ಜನವಿನುತ ಜಿನಪದಾಂಭೋಜವರಪ್ರಸಾದ' ಎಂದು ಪಂಪಭಾರತದಲ್ಲೂ ಹೇಳಿದ್ದು ಆ ಎರಡರಲ್ಲಿಯೂ ಪ್ರಸಾದ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಇಲ್ಲಿ ಜಿನಭಕ್ತಿ ಎದ್ದು ಕಾಣುತ್ತದೆಯೇ ಹೊರತು 'ತಾನೇ ಜಿನ, ತನ್ನದು ಜಿನವಾಣಿ' ಎಂದು ಪರಿಭಾವಿಸಿಲ್ಲ. 'ಸುರದುಂದುಭಿ ಪತಿಚರಣಕಮಲ ಭೃಂಗಂ ಪಂಪಂ' ಎಂಬುದೂ ಈ ಮಾತನ್ನು ಸಮರ್ಥಿಸುತ್ತದೆ.

ಪಂಪನು 'ಯತಿ' ಎಂಬುದನ್ನು ಸಮರ್ಥಿಸುವ ಭರದಲ್ಲಿ ಅವರು ಅಪಾರ್ಥ ಮಾಡಿದ್ದ ಒಂದು ಸಂದರ್ಭ ಇಲ್ಲಿದೆ.

ಕವಿತೆ ನೆಗಳ್ತೆಯಂ ನಿಮಿಸೆ ಜೋಳದ ಪಾಟಿ ನಿಜಾಧಿನಾಥನಾ
ಹವದೊಳರಾತಿ ನಾಯಕರ ಪಟ್ಟನೆ ಪಾರಿಸೆ ಸಂದ ಪೆಂಪು ಭೂ
ಭುವನದೊಳಾಗಳುಂ ಬೆಳಗೆ ಮಿಕ್ಕಭಿಮಾನದ ಮಾತು ಕೀರ್ತಿಯಂ
ವಿವಂಸೆ ಸಂದನೇಂ ಕಲಿಯೊ ಸತ್ಯವಿಯೋ ಕವಿತಾಗುಣಾರ್ಣವಂ

ಈ ಪದ್ಯಕ್ಕೆ ಅರ್ಥವನ್ನು ಲೇಖಕರು ಈರೀತಿ ಕೊಡುತ್ತಾರೆ (ಸಾಪೇಕ್ಷ ಪು. 44)

"ಈ ಆದಿನಾಥನ-ಜಿನನ-ಸಮಯವನ್ನು ಎದುರಿಸಿ ಬಂದ ಎದುರಾಳಿಗಳ ಪಟ್ಟನ್ನು ತಳ ಸರಿಸಿ ಹಾರಿ ಹೊಡೆದಿದ್ದಾನೆ ವಾದಿಮದಗಜ ಪಂಪ. ಈ ಜನಸಮುದಾಯಕ್ಕೆ ಕೊಟ್ಟ ಜೋಳದ ಪಾಳಿಯನ್ನು ಉಳಿಸಬೇಕಾದ್ದು ಪಂಪನ ಕರ್ತವ್ಯವೇ ಆಗಿದ್ದಿತು." ಎಂಬ ಅರ್ಥವನ್ನು ಹೇಳುತ್ತಾರೆ. ಪಂಪನು ಪರಸಮಯದೊಡನೆ ವಾದಮಾಡಿ ಗೆದ್ದ ಎಂಬುದಕ್ಕೆ ಆಧಾರವಾದರೂ ಏನಿದೆ? ಪಂಪನು ಯತಿಯೇ ಆಗಿದ್ದರೆ 'ಜೋಳದ ಪಾಳಿ'ಯ ಪ್ರಸಂಗ ಏಕೆ ಬರುತ್ತದೆ? ಋಣವನ್ನು ಕಡಿದುಕೊಳ್ಳುವುದೇ ಯತಿಯ ಮುಖ್ಯ ಲಕ್ಷಣವಲ್ಲವೇ? ಜೋಳದ ಪಾಳಿಯನ್ನು ತೀರಿಸಿ ಬಿಡುವಂತಿದ್ದರೆ ತನ್ನ ಕೃತಿಗೆ ರಾಜನಿಂದ ದಾನಪಡೆದು ಮತ್ತೇಕೆ ಋಣವನ್ನು ಮುಂದುವರಿಸಿದ? ಆ ಪದ್ಯದಲ್ಲಿ ಬರುವ ಪದಗಳಿಗೆ ನೇರವಾಗಿ ಸ್ವಯಂಸ್ಪಷ್ಟವಾಗಿರುವ ಅರ್ಥವನ್ನು ಬಿಟ್ಟು ದೂರಾನ್ವಯವೂ ಆಗದ ಅರ್ಥವನ್ನು ಹೇಳಿ ಇದನ್ನೇ ಒಪ್ಪಿಕೊಳ್ಳಿ ಎಂಬ ಒತ್ತಾಯವೇಕೆ? ಇಲ್ಲಿ ನಿಜಾಧಿನಾಥನ ಎಂದರೆ ತನ್ನ ರಾಜನಾದ ಅರಿಕೇಸರಿಯ, ಆಹವದೊಳ್-ಯುದ್ಧದಲ್ಲಿ, ಅರಾತಿನಾಯಕರ-ಶತ್ರುನಾಯಕರ, ಪಟ್ಟನೆ ಪಾರಿಸೆ-ಪಟ್ಟೆಂದು ಹಾರಿಸಿ, ಸಂದ ಪೆಂಪು ಎಂಬುದು ಸ್ಪಷ್ಟವಾಗಿಯೇ ಇದೆ. (ಇವರು ಹೇಳುವಂತೆ ಅರ್ಥಮಾಡಿದರೆ 'ಪರಸಮಯ ವಾದಿಗಳು' ಪಂಪನ ಶತ್ರುಗಳು ಎಂದಾಗುತ್ತದೆ!) 'ಅರಾತಿನಾಯಕರ ಪಟ್ಟನೆ ಪಾರಿಸೆ' ಎಂಬ ಕವಿಯ ನುಡಿಯು ಯುದ್ಧದಲ್ಲಿ ಶತ್ರುನಾಯಕರನ್ನು ಕೊಲ್ಲುವುದನ್ನೇ ಹೇಳುತ್ತದೆ. ಇದರ ಮುಂದಿನ ಪದ್ಯವೂ ಇದಕ್ಕೆ ಸಂಬಂಧಿಸಿದಂತೆಯೇ ಇದೆ.

ಅತಂಗರಿಕೇಸರಿ ಸಂ । ಪ್ರೀತಿಯೆ ಬೞಿಯಟ್ಟೆ ಪಿರಿದನಿತ್ತು ನಿಜಾಧಿ
ಖ್ಯಾತಿಯನಿಳೆಯೊಳ್ ನಿಱಿಸ । ಲ್ಕೀ ತೆರದಿತಿಹಾಸ ಕಥೆಯನೊಪ್ಪಿಸೆ ಕುಱಿತಂ ।

ಎಂಬುದು. ಅಂದರೆ ಅರಿಕೇಸರಿಯು ತನ್ನನ್ನು ಕರೆದು-ಪಿರಿದನಿತ್ತು-ಕಾವ್ಯ ಬರೆಯಲು ಹೇಳುವ ಪದ್ಯ. ಮೇಲಿನ ಪದ್ಯದಲ್ಲಿ ಬರುವ 'ನಿಜಾಧಿನಾಥ'ನ ಎಂಬುದಕೆ ಅರಿಕೇಸರಿ-ನನ್ನ ರಾಜ-ಎಂಬುದೇ ಸರಿಯಾದ್ದು. ಒಂದು ಪಕ್ಷ ಲೇಖಕರು ಹೇಳುವಂತೆ ನಿಜಾಧಿನಾಥ ಎಂಬುದಕ್ಕೆ ಆದಿತೀರ್ಥಂಕರನೆಂದೇ ಅರ್ಥ ಮಾಡಿದರೆ ಅವನ ಋಣವನ್ನು (ಜೋಳದ ಪಾಳಿಯನ್ನು) ಪಂಪನೇನು ತೀರಿಸುವುದು? ಅಥವಾ ಪದ್ಯದಲ್ಲಿ ಇಲ್ಲದೇ ಇರುವ ಜಿನಸಮುದಾಯದ ಜೋಳದಪಾಳಿಯನ್ನು ಅರಿಕೇಸರಿಗೆ ತೀರಿಸಬೇಕೆ? ಇಲ್ಲ, ಆದಿತೀರ್ಥಂಕರನಿಗೆ ತೀರಿಸಬೇಕೆ? ಒಂದು ಪದ್ಯವನ್ನು ತೆಗೆದುಕೊಂಡು ತಮಗೆ ಬೇಕಾದಷ್ಟು ಭಾಗಕ್ಕೆ ಬೇಕಾದಂಥ ಅರ್ಥ ಕೊಡುವುದು ಸರಿಯಲ್ಲ.

'ಸರಸ್ವತೀ ಮಣಿಹಾರ' ವಿಚಾರ

ಪಂಪನ ಪ್ರೀತಿಯ ಬಿರುದುಗಳಲ್ಲಿ 'ಸರಸ್ವತೀ ಮಣಿಹಾರ'ವೂ ಒಂದು. ಇದನ್ನು ಲೇಖಕರೇ ಗಮನಿಸಿದ್ದಾರೆ (ಸಾಪೇಕ್ಷ ಪು. 112) ಇವರ ಪ್ರಕಾರ

'ಆದಿಪುರಾಣದಲ್ಲಿ ಆದಿನಾಥನಲ್ಲೂ, ಭರತನಲ್ಲೂ ತನ್ನನ್ನೇ ಕಂಡುಕೊಂಡಿರುವ ಪಂಪನು ಅವರ ಹೆಸರುಗಳು ಬರುವ ಕಡೆ ತನ್ನ ಬಿರುದುಗಳನ್ನು ಸೇರಿಸಿ ಬರೆದಿದ್ದಾನೆ' ಎಂದೂ, ಇವುಗಳನ್ನು ಅಂದರೆ 'ತನ್ನ ಬಿರುದುಗಳನ್ನು ಪಂಪ ತನಗೆ ಇಷ್ಟಬಂದಲ್ಲಿ ಕಾವ್ಯದ ಛಂದೋಬಂಧಕ್ಕೆ ಅವಶ್ಯಕವಾದ ರೀತಿಯಲ್ಲಿ ಇಷ್ಟಬಂದಂತೆ ಪ್ರಯೋಗಿಸಿದ್ದಾನೆ' ಎಂದೂ ಹೇಳುತ್ತಾರೆ. ಇದರ ಹಿನ್ನೆಲೆಯಲ್ಲಿ ಅವರೇ ವಿಮರ್ಶಿಸಿರುವ ಈ ಮುಂದಿನ ಭಾಗವನ್ನು ಗಮನಿಸಬಹುದು (ಸಾಪೇಕ್ಷ ಪು. 104–105). ಇಲ್ಲಿ ಆದಿಪುರಾಣದ ಏಳು ಪದ್ಯಗಳನ್ನು ತೆಗೆದುಕೊಂಡು ವಿಮರ್ಶಿಸಿದ್ದಾರೆ. ಅದರಲ್ಲಿಯ ಮೊದಲನೆಯ ಪದ್ಯ ಇಂತಿದೆ.

> ಅತಿಸುಭಗೆಗೆ ಸಂದ ಸರ । ಸ್ವತಿಗೀತನ ಲಲಿತವಾಗ್ವಿಳಾಸಮ ದಲಲಂ
> ಕೃತಿಯವೊಲೆಸೆದಪುದು ಜಗ । ತ್ಪ್ರತೀತನೀತನೆ ಸರಸ್ವತೀಮಣಿಹಾರಂ ॥

ಇದಕ್ಕೆ ಅರ್ಥವೆಂದು ಈ ರೀತಿ ಹೇಳುತ್ತಾರೆ : "ಪಂಪನ ಲಲಿತ ವಾಗ್ವಿಳಾಸವೆ ಒಂದು ಅಲಂಕಾರ. ಈತ ಜಗತ್ಪ್ರಸಿದ್ಧ ; ಸರಸ್ವತೀಮಣಿಹಾರ." ಈ 'ಸರಸ್ವತೀ ಮಣಿಹಾರ' ಒಂದು 'ಅಮೂಲ್ಯವಸ್ತು' : ಆದರೆ ಲೇಖಕರು ಕೊನೆಯ ಸಾಲನ್ನು ಸರಿಯಾಗಿ ವಿಭಾಗಿಸಿ ಅರ್ಥ ಹೇಳಿಲ್ಲ. ಅದು 'ಜಗತ್ಪ್ರತೀತಂ, ಈತನೆ ಸರಸ್ವತೀ ಮಣಿಹಾರಂ' ಎಂದಾಗಬೇಕು. 'ಜಗತ್ಪ್ರಸಿದ್ಧನಾದವನು. ಈತನೆ ಸರಸ್ವತೀ ಮಣಿಹಾರ' ಎಂಬುದೇ ಅದಕ್ಕೆ ಸರಿಯಾದ ಅರ್ಥ. ಮುಂದೆ ಅವರು ಪದ್ಯಗಳಿಗೆ ಕೊಟ್ಟಿರುವ ಅರ್ಥ ಸರಿಯೇ. ಆದರೆ 'ಸರಸ್ವತೀ ಮಣಿಹಾರಂ' ಎಂದರೆ ಸ್ವಯಂ ಪಂಪನೇ. ಅದು ಪದ್ಯದಲ್ಲಿ ಸ್ಪಷ್ಟವಾಗಿಯೇ ಇದೆ. ಇದು ಪಂಪನ ಬಿರುದೇ ಎಂದು ಹೇಳಿರುವ ಲೇಖಕರು (ಸಾಪೇಕ್ಷ ಪು. 104) ಇಲ್ಲಿ ಮಾತ್ರ 'ಸರಸ್ವತೀ ಮಣಿಹಾರ' ಎಂಬುದು ಒಂದು 'ಅಮೂಲ್ಯವಸ್ತು' ಎಂದು ಅರ್ಥೈಸುತ್ತಾರೆ. ಅದಕ್ಕೆ ಮುಂಚೆ ಅವರು ಬೇಕಾದಷ್ಟು ಅರ್ಥಗಳನ್ನು ಹೇಳಿ, ಕೆಲವು ವಾದಗಳನ್ನು ಮಾಡಿದರೂ, ಈ 'ಸರಸ್ವತೀಮಣಿಹಾರ'ಕ್ಕೆ ಅನ್ವಯಾರ್ಥವನ್ನು ಹೇಳುವುದೇ ಇಲ್ಲ.

ಅಂತೂ ಲೇಖಕರು ಕೊಡುವ ಅರ್ಥ ಇಂತಿದೆ :

"ಈ ಸರಸ್ವತೀ ಮಣಿಹಾರ ಒಂದು ಅಮೂಲ್ಯವಸ್ತು. ಅದು ವನಿತಾಕಟಾಕ್ಷವೆನ್ನುವ ಕನ್ನೈದಿಲೆಗೆ ಚಂದ್ರ. ಯುವತಿಯ ಕಾಂಚೀರತ್ನ=ಯುವತಿಯ ಸೊಂಟದಲ್ಲಿ ರಾರಾಜಿಸುತ್ತಿರುವ ಸುವರ್ಣದ ಡಾಬಿನಲ್ಲಿ ಎಂದರೆ ಮೇಖಲೆಯಲ್ಲಿ ಮಿರುಗುವ ರತ್ನ. ಗಣಿಕಾಸ್ತನ ಮಣಿಹಾರ ಸರಸ್ವತೀ ಮಣಿಹಾರ. ಕೇರಳವಿಟೀಕಟೀಸೂತ್ರಾರುಣಮಣಿ=ಕೇರಳವಿಟೀ-ವೇಶ್ಯೆಯ ಡಾಬಿನಲ್ಲಿರುವ ರತ್ನ. ಮಲಯಯುವತೀ ದರ್ಪಣ ; ದರ್ಪಣ–ಇದೂ ಒಂದು ವಸ್ತುವೆ. ಮತ್ತೆ ಆಂಧ್ರೀನೀರಂಧ್ರಬಂಧುರ ಸ್ತನಹಾರ=ಆಂಧ್ರಯುವತಿಯು ಧರಿಸಿದ ಹಾರ."

ಇವಕ್ಕೆಲ್ಲ ಕವಿಯೇ ಉತ್ತರಿಸಿದ್ದಾನೆ. ಇದರ ಅನ್ವಯಾರ್ಥವೆಲ್ಲ 'ಸರಸ್ವತೀ ಮಣಿಹಾರಕ್ಕೇ'. ಲೇಖಕರು ಪದ್ಯವನ್ನು ಸರಿಯಾಗಿ ಬಿಡಿಸಿ ಅರ್ಥಮಾಡಿಲ್ಲ ಎಂಬುದನ್ನು ನೋಡಬಹುದು.

"ಅಂಧ್ರ ಪುರಂಧ್ರ ಬಂಧುರ ಸ್ತನ ಮಣಿಹಾರಂ + ಉದಾರ ಸರಸ್ವತೀಮಣಿಹಾರಂ." "ಜಗತ್ಪ್ರತೀತಂ + ಈತನೆ ಸರಸ್ವತೀ ಮಣಿಹಾರಂ" ಎಂದು ಬಿಡಿಸಬೇಕು.

"ಉದಾರಂ ಸರಸ್ವತೀ ಮಣಿಹಾರಂ" ಎಂಬುದನ್ನೂ, "ಈತನೆ ಸರಸ್ವತೀ ಮಣಿಹಾರಂ" ಎಂಬುದನ್ನೂ ಲೇಖಕರು ಗಮನಿಸಿಯೇ ಇಲ್ಲ. 'ಉದಾರಂ' ಎಂಬ ಪ್ರಯೋಗವಂತೂ ಎಂಥ ಅಮೂಲ್ಯ ವಸ್ತುವಿಗೂ ಯಾರೂ ಹೇಳುವುದಿಲ್ಲ. ತಿಳಿಯಬೇಕಾದ ಮಾತೆಂದರೆ, ಲೇಖಕರು ಉದಾಹರಣೆ ಕೊಟ್ಟಿರುವ ಎಲ್ಲಾ ಪದ್ಯಗಳೂ ಪಂಪನ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದವುಗಳು.

ತಮ್ಮ ವಾದವನ್ನು ಮುಂದುವರಿಸುತ್ತಾ "ಈ ಧಾರ್ಮಿಕ ಕಾವ್ಯದಲ್ಲಿ ಗಣಿಕೆಯರಿಗೆ ಏನು ಕೆಲಸ? ಇವರನ್ನು ಪಂಪ ಹೊಂದಿದ್ದ, ಅನುಭೋಗಿಸುತ್ತಿದ್ದ ಎಂಬುದಕ್ಕೆ ಇಲ್ಲಿ ಆಧಾರವೇ ಇಲ್ಲ" ಎಂದು ಲೇಖಕರು ಹೇಳುತ್ತಾರೆ, ಸರಿಯೇ. ಆದರೆ ಈ ಭಾಗ ಕಾವ್ಯದ ಮುಖ್ಯಕಥೆಯ ಅಂಗವಾಗಿ ಬಂದಿಲ್ಲ. ಪಂಪನ ವೈಯಕ್ತಿಕ ವಿಷಯಗಳನ್ನು ಹೇಳಿಕೊಳ್ಳುವಾಗ ಬಂದಿದೆ. ಅಲ್ಲದೆ ಇಂಥ ಶೃಂಗಾರ ಪದಗಳು ಮುಂದೆಯೂ ಬಂದಿವೆ ಅಂದಾಗ ಮೇಲಿನ ಪದ್ಯಗಳಿಗೆ ಹೇಗೆ ಅರ್ಥ ಕೊಡಬೇಕಾದೀತು? ಮೊದಲನೆಯದಾಗಿ ಹಿಂದಿನ ಕಾಲದಲ್ಲಿ ವೇಶ್ಯೆಯರು ಸಂಗೀತ, ಸಾಹಿತ್ಯದಲ್ಲಿ ಪ್ರವೀಣೆಯರಾಗಿರುತ್ತಿದ್ದರು. ಆದಿಪುರಾಣದ 1-17ನೇ ಪದ್ಯವು ಇದನ್ನೇ ಬಿಂಬಿಸುತ್ತದೆ. ತನ್ನ ಕೃತಿಯನ್ನೇ–ಆದಿಪುರಾಣವನ್ನೇ–ಕವಿಯು 'ಪಣ್ಯವನಿತೆ'ಗೆ ಹೋಲಿಸಿದ್ದಾನೆ. ಮೃದುಪದಗತಿ, ರಸಭಾವ, ಸೌಂದರ್ಯ, ಚಾತುರ್ಯದ ಕಣಿ–ಅಂತಹಳು ಪಣ್ಯವನಿತೆ— ಇದು ಅವಳ ವಿದ್ಯೆ, ಸೌಂದರ್ಯಕ್ಕೆ ಕೊಟ್ಟ ಗೌರವ. ಅಂತಹುದು ತನ್ನ ಕೃತಿ (ಆದಿಪುರಾಣ) ಯಲ್ಲಿ ಇದೆ ಎಂದು ಪಂಪನೇ ಹೇಳಿದ್ದಾನೆ.

ಇಷ್ಟೇ ಅಲ್ಲ, ಆದಿಪುರಾಣದ 1-20 ಪದ್ಯವನ್ನು ಲೇಖಕರು ಗಮನಿಸಿದ್ದಾರೋ ಇಲ್ಲವೋ? ಆ ಪದ್ಯ ಇಂತಿದೆ :—

ಕವಿತಾ ರಹಸ್ಯಮಂ ಸ | ತ್ಕವಿಯಱಿಗುಮನೇಡಮೂಕನೇಡಂ ಜಡನೆಂ
ಬವನಱಿಗುಮೆ ವಿಟನಱಿಗುಂ | ಕುವಿಟಂ ಸ್ತ್ರೀರತರಹಸ್ಯದೊಳಗಱಿದಪನೇ |

ಕವಿತೆಯ ರಹಸ್ಯವನ್ನು ಸತ್ಕವಿಯು ಮಾತ್ರ ಅರಿಯಬಲ್ಲನು. ಕಿವುಡನಾದ ಮೂಕ, ಕಿವುಡ ಮತ್ತು ಜಡರು ಅದನ್ನರಿಯಬಲ್ಲರೇ? ಸ್ತ್ರೀಯ ರತರಹಸ್ಯವನ್ನು ರಸಿಕನಾದ ವಿಟನಲ್ಲದೆ ಕುವಿಟಂ ಅರಿಯಲಾಗುತ್ತದೆಯೇ? ಇಲ್ಲಿ ಪಂಪನು ಕವಿತಾ

ರಹಸ್ಯವನ್ನೇ 'ಸ್ತ್ರೀರತ್ನರಹಸ್ಯ'ಕ್ಕೆ ಹೋಲಿಸಿದ್ದಾನೆ. ಸ್ವತಃ ಪಂಪನೇ ಹೇಳಿರುವ ವೇಶ್ಯಾ ವಿಚಾರದ ಬಗ್ಗೆ ಆಕ್ಷೇಪವೇಕೆ ?*

ಅಂತೂ ಒಂದು ಪದ್ಯದ ಅರ್ಥವನ್ನು ಪಂಪನಿಗೆ ಅನ್ವಯಿಸುವುದೂ ಬೇರೊಂದನ್ನು ಅವನಿಗಲ್ಲ ಎಂದು ಹೇಳಿದಂತಾಗಿದೆ. ಕಾವ್ಯದಲ್ಲಿ ಬರುವುದೆಲ್ಲವನ್ನೂ ಅವನ ವ್ಯಕ್ತಿಗತ ಜೀವನಕ್ಕೆ ಅನ್ವಯಿಸುವುದೂ ಕಣ್ಣಿಗೆ ಢಾಳವಾಗಿ ಕಾಣುವ ಅರ್ಥವನ್ನು ಬಿಟ್ಟು ತಮ್ಮ ಮನಸ್ಸಿನಲ್ಲಿರುವ ದೂರಾನ್ವಯದ-ಅದೇಕೆ ದೂರಾನ್ವಯವೂ ಆಗದ, ಅರ್ಥವನ್ನು ಹೇಳುವುದು ವಿಮರ್ಶೆಯೆನಿಸುವುದಿಲ್ಲ.

ಇತರ ಜಿನರೊಡನೆ ತಗುಲ್ಚಿಕೊಂಡ ಪಂಪ

ಶ್ರೀ ಜಾಗೀರದಾರರ ಇನ್ನೊಂದು ಹೇಳಿಕೆ ವಿಚಾರಣೀಯವಾಗಿದೆ :—

"'ಸಂಸಾರ ಸಾರೋದಯ', 'ಸರಸ್ವತೀಮಣಿಹಾರ', ಸುಜನಕವಿಮನೋಮಾನಸೋತ್ತಂಸಹಂಸ ಇವುಗಳನ್ನು ಕರ್ಮಬಂಧವನ್ನು ಕಳೆದುಕೊಂಡು ಜಿನರಾದ ಆದಿನಾಥ, ಶ್ರೇಯಾಂಸ, ಭರತ ಮೊದಲಾದ ಮಹಾನ್ ವ್ಯಕ್ತಿಗಳಲ್ಲಿ ಅಭೇದವಾಗಿ ಆರೋಪಿಸಿ ಹೇಳಿದ್ದಾನೆ. ಈ ವ್ಯಕ್ತಿಗಳು ನಿರ್ವಾಣ ಹೊಂದಿದ ಪುಣ್ಯಪುರುಷರು. ಇವರಲ್ಲಿ ತನ್ನ ವ್ಯಕ್ತಿತ್ವವನ್ನು ಕಂಡುಕೊಂಡ ಪಂಪ ನಿತ್ಯಜೀವನದಲ್ಲೂ ಹಾಗೆಯೇ ಇದ್ದ. ಅರ್ಥಾತ್ ಪಂಪನಿಗೆ ತನ್ನ ಜನ್ಮದಲ್ಲಿ ಜಿನನಾಗುವುದು ಖಚಿತವಾದ ವಿಷಯವಾಗಿತ್ತು. ತನಗೆ ಕರ್ಮಬಂಧ ಇಲ್ಲವೆಂದು ಸ್ಫಟಿಕದ ಶಲಾಕೆಯ ಹಾಗೆ ನುಡಿದಿದ್ದಾನೆ ಪಂಪ" (ಸಾಪೇಕ್ಷ ಪು. 122).

ಇದಕ್ಕೆ ಲೇಖಕರು ಆದಿಪುರಾಣದಲ್ಲಿ ಬರುವ ಪದ್ಯವೊಂದನ್ನು ಉದಾಹರಿಸಿದ್ದಾರೆ.

ಪೆಸರ್ಗೊಂಡಿಂದ್ರನರೇಂದ್ರವಂದ್ಯನನೊರಲ್ದೆತ್ತಾನುಮೋರೊರ್ಮೆ ಚಿಂ
ತಿಸಿದೊಂಗಂ ಪವಣಲ್ಲ ಪುಣ್ಯಮೆನೆ ಪೂಣ್ದೊಳ್ಪಿಂಡಮೋರಂತೆ ಭಾ
ವಿಸಿ ತಾಂ ತನ್ಮಯನಾಗಿ ತಚ್ಚರಿತಮಂ ಕಾವ್ಯಂಗಳೊಳ್ಕೂಡೆ ಬ
ಣ್ಣಿಸಿ ಪೇಳ್ದಾತನ ಕರ್ಮನಿರ್ಜರೆಯನಂತಿಂತೆಂತೆನಲ್ಬರ್ಕುಮೇ

---

* ಇಲ್ಲಿಯೇ ಇನ್ನೊಂದು ವಿಷಯವನ್ನು ಹೇಳಬಹುದು : ಜಿನವಲ್ಲಭನೂ 'ಸಮ್ಯಕ್ತ್ವರತ್ನಾಕರ'ನಷ್ಟೆ ? ಅವನೂ ತನ್ನ ಬಗ್ಗೆ ಹೇಳಿಕೊಳ್ಳುವಾಗ "... .. ....ಭೋಗಾನ್ವೇಷಿತುಮಂಗನಾರಮಯಿತುಂ" ಎಂದು ಹೇಳಿಕೊಂಡಿದ್ದಾನೆ. ಲೇಖಕರೂ "... .... ಸಾಧುಜನ ಸೇವೆಯಲ್ಲಿ, ಅಂಗನೆಯೊಡನೆ ರಮಿಸುವ ತತ್ವದಲ್ಲಿ, ಜಿನಪೂಜೆಗೆಯ್ಯುವಲ್ಲಿ ...." ಎಂದು ಅರ್ಥವನ್ನು ಹೇಳಿದ್ದಾರೆ. (ಸಾಪೇಕ್ಷ ಪು. 57) 'ಅಂಗನಾರಮಯಿತುಂ' ಎಂಬುದು ವಿವಾಹಬಾಹಿರ ಸಂಬಂಧವನ್ನೇ ನಿರ್ದೇಶಿಸುತ್ತದೆ ಎನ್ನಬಹುದು.

ಈ ಪದ್ಯದ ಅರ್ಥ ಇಂತಿದೆ : ಪ್ರಸಿದ್ಧರಾಗಿರುವ ಇಂದ್ರ ನರೇಂದ್ರರೇ ಮೊದಲಾದವರಿಂದ ನಮಸ್ಕರಿಸಿಕೊಳ್ಳಲ್ಪಡುವ ಆದಿನಾಥನನ್ನು ಒಂದೊಂದು ಸಲ ನೆನಸಿದರೇ ಪುಣ್ಯಕ್ಕೆ ಕೊನೆಯಿಲ್ಲ. ಅಂತಹುದರಲ್ಲಿ ಪ್ರತಿಜ್ಞೆ ಮಾಡಿದಂತೆ, ಯಾವಾಗಲೂ ಒಳ್ಳೆಯದಾಗಿ, ಸದ್ಗುಣದಿಂದ ಅವನನ್ನೇ ಧ್ಯಾನಿಸಿ, ತನ್ಮಯನಾಗಿ ಅವನ ಚರಿತ್ರೆಯನ್ನು ಕಾವ್ಯಗಳಲ್ಲಿ ಬಣ್ಣಿಸಿ ಹೇಳಿದಾತನ ಕರ್ಮನಿರ್ಜರೆ (=ಕರ್ಮ ನಾಶವಾಗುವುದು) ಅಷ್ಟಿಷ್ಟು ಎಂದು ಹೇಳಲು ಸಾಧ್ಯವೇ ? ಎಂದು. ಈ ಪದ್ಯಕ್ಕೂ ಲೇಖಕರು ಕೊಟ್ಟಿರುವ ಮೇಲಿನ ಹೇಳಿಕೆಗೂ ಯಾವ ರೀತಿಯಲ್ಲೂ ಸಂಬಂಧವಿಲ್ಲ. ಅದನ್ನು ಲೇಖಕರೇ ಇನ್ನೊಂದು ರೀತಿಯಲ್ಲಿ ತಾವೇ ಹೇಳಿದ್ದಾರೆ. "ತನ್ನ ಕರ್ಮಗಳು ಕಳಚಿ ಬೀಳದೆ ಇರುತ್ತವೆಯೆ ? ಕರ್ಮ ಕಳಚಿ ಬಿದ್ದೇ ಬೀಳುತ್ತದೆ ಎಂದು ಭಾವ" ಎಂದು ಹೇಳಿ ಅಲ್ಲಿಯೇ ಸ್ವಲ್ಪ ಮುಂದೆ "ಪಂಪನ ನುಡಿಯಲ್ಲಿ ತನ್ನ ಪಾಪಕ್ಷಯವಾಗಿದೆ ಎಂಬ ಜ್ಞಾನದ ಸ್ಪಷ್ಟ ನಿಲುವಿದೆ" ಎನ್ನುತ್ತಾರೆ. ಇದಕ್ಕೆ ವ್ಯಾಖ್ಯಾನವೇನೂ ಬೇಡ ಅಲ್ಲವೇ ? ಈ ಪದ್ಯದಿಂದ ಅವನು ಜಿನನಾಗಿದ್ದ ಅಥವಾ ಲೇಖಕರೇ ಹೇಳುವಂತೆ ಮುಂದೆ ಜಿನನಾಗುತ್ತೇನೆ ಎಂಬುದನ್ನು–ಅಂದರೆ ಆದಿಪುರಾಣ ಬರೆದಾಕ್ಷಣ—ಮುಂಚೆಯೇ ತಿಳಿದುಕೊಂಡುಬಿಟ್ಟಿದ್ದ ಎಂಬ ವಿಮರ್ಶೆಯನ್ನು ನಾವು ಒಪ್ಪಬೇಕೆ ?

ಸಾಪೇಕ್ಷ ಪು. 95ರಲ್ಲಿ ಕೊಟ್ಟಿರುವ ಎರಡು ಪದ್ಯಗಳಂತೂ ಭರತ ಪಂಪನೇ ಎಂದು ಯಾವ ರೀತಿಯಲ್ಲೂ ಅನ್ನಿಸುವುದಿಲ್ಲ. ಅಲ್ಲಿ ಚಿತ್ರಿತವಾಗಿರುವುದು ಭರತ 'ಯತಿಪತಿ'ಯಾದ ಸಂದರ್ಭ. ಲೇಖಕರು "ಭರತಯತಿಪತಿಯಲ್ಲಿ ತನ್ನನ್ನು ಆರೋಪಿಸಿಕೊಂಡಿರುವ ಅಥವಾ ಭರತಯತಿಪತಿಯ ರೂಪದಲ್ಲಿ ಶ್ಲೇಷೆಯ ಮೂಲಕ ಕಂಡರಿಸಿಕೊಂಡಿರುವ ಪಂಪ ತಾನೂ ಯತಿಯಾಗಿದ್ದುದನ್ನು ಸ್ಪಷ್ಟಸ್ಪಷ್ಟವಾಗಿ 'ಟಾಠಡಾಢಣ'ವಾಗಿ ಹೇಳಿದ್ದಾನೆ" ಎನ್ನುತ್ತಾರೆ. ಮತ್ತೊಂದು ಕಡೆ "ಆದಿನಾಥ, ಶ್ರೇಯಾಂಸ, ಭರತ ಮೊದಲಾದ ಮಹಾನ್ ವ್ಯಕ್ತಿಗಳಲ್ಲಿ ಅಭೇದ ಕಲ್ಪಿಸಿಕೊಂಡಿದ್ದಾನೆ" ಎನ್ನುತ್ತಾರೆ. ಇಂಥ ವಿಮರ್ಶನ ವೈರುಧ್ಯಕ್ಕೆ ಏನೆನ್ನಬೇಕು ?

ಈಗ ಇನ್ನೊಂದು ಪದ್ಯವನ್ನೂ, ಅದಕ್ಕೆ ಲೇಖಕರ ಅಭಿಪ್ರಾಯವನ್ನೂ ನೋಡೋಣ :

> ಪಂಪಂ ಧಾತ್ರೀವಳಯ ನಿ । ಳಿಂಪಂ ಚತುರಂಗಬಲಳಭಯಂಕರಣಂ ನಿ
> ಷ್ಕಂಪಂ ಲಲಿತಾಲಂಕರ । ಣಾಂ ಪನ್ನಿಪ [ನ್ನೈ] ಕರೂಪನಪಗತಪಾಪಂ

ಈ ಪದ್ಯದ ಅರ್ಥವನ್ನು ಈ ರೀತಿ ಹೇಳುತ್ತಾರೆ. "ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ್ಯ, ಸಮ್ಯಕ್ ತಪಸ್ಸು ಎಂಬ ಚತುರಂಗ ಬಲ

ದಿಂದ ಭಯಂಕರನು. ನಿಷ್ಕಂಪ ಎಂದರೆ ಈ ಸಾಧನ ಹೊಂದಿದವನು. ವಾದ ಮಾಡಲು ಹೊರಟ ಅಲಂಕೃತ ಆನೆಯಂತಿದ್ದನು. ಅಪಗತಪಾಪಂ ಎಂದರೆ ಈ ಚತುರ್ವಿಧ ಆರಾಧನೆಯಿಂದ ಪುಣ್ಯಶಾಲಿಯಾಗಿದ್ದನು." ಎನ್ನುತ್ತಾರೆ. ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ್ಯ ಇವು ಮೂರೂ ರತ್ನತ್ರಯಗಳು. ಇವರು ಸಮ್ಯಕ್ ತಪಸ್ಸು ಎಂಬುದನ್ನೂ ಸೇರಿಸಿದ್ದಾರೆ. ನಿಷ್ಕಂಪಂ ಎಂದರೆ ನಿರ್ಭಯನಾದವನು. ಅಪಗತಪಾಪಂ ಎಂದರೆ ಪಾಪವನ್ನು ತೊಲಗಿಸಿದವನು ಎಂದರ್ಥ.

ಒಮ್ಮೆ "ಜಿನರೂಪವೇ (ದಿಗಂಬರತ್ವವೇ) ಲಲಿತ ಮಧುರ ಸುಂದರ ರೂಪ" ಎಂದು ಹೇಳಿ ಇದಕ್ಕೆ ಅಂದರೆ ಮೇಲಿನ ಪದ್ಯಕ್ಕೆ "ವಾದ ಮಾಡಲು ಹೊರಟ ಅಲಂಕೃತ ಆನೆಯಂತಿದ್ದನು." ಎನ್ನುತ್ತಾರೆ. 'ಅಲಂಕೃತ ಆನೆ'ಯನ್ನು ಪಂಪನಿಗೆ ಅಂದರೆ ದಿಗಂಬರತ್ವಕ್ಕೆ) ಹೇಗೆ ಅನ್ವಯಿಸುವುದು ? 'ಅಪಗತಪಾಪಂ' ಎಂಬುದಕ್ಕೆ ನೇರವಾದ ಅರ್ಥ ತೆಗೆದುಕೊಂಡರೆ ಪಂಪನು ಪುಣ್ಯಶಾಲಿಯಾಗಲು ಸಾಧ್ಯವಿಲ್ಲವೇ ? ಏಕೆಂದರೆ "ಒಬ್ಬ ವ್ಯಕ್ತಿ ಕೇವಲ ಹಸ್ತಿ, ರಥ, ಕುದುರೆ ಮತ್ತು ಕಾಲಾಳು ಎಂಬ ಚತುರಂಗ ಬಲದಿಂದ ಪುಣ್ಯಶಾಲಿಯಾಗುವುದಾದರೂ ಹೇಗೆ ?" ಎನ್ನುತ್ತಾರೆ.

ಈ ಪದ್ಯದ ಕೊನೆಯ ಪಾದವನ್ನು ವಿಭಾಗಿಸುವುದು ಹೇಗೆ ?

ಲಲಿತಾಲಂಕರಣಾಂ + ಪದ್ವಿಪಂ + ಏಕರೂಪಂ + ಅಪಗತಪಾಪಂ ಎಂದಾಗುತ್ತದೆ. 'ದ್ವಿಪ' ಎಂದರೆ ಆನೆ, ಸರಿ. ಪದ್ವಿಪ ಎಂದರೇನು ?

ಮತ್ತೊಂದು ವಿಷಯವೇನೆಂದರೆ ಈ ಪದ್ಯದಲ್ಲಿ 'ಚತುರಂಗಬಳಭಯಂಕರಣಂ' ಎಂಬುದು ಬಂದಿರುವಂತೆಯೇ ಇದರ ಮುಂದಿನ ಪದ್ಯದಲ್ಲೇ ಯಾವ ಸೂಚನೆಯಿದೆ ?—

> ಕವಿತೆ ನೆಗಟ್ತೆಯಂ ನಿಜಿಗೆ ಜೋಳದ ಪಾಳಿ ನಿಜಾಧಿನಾಥನಾ
> ಹವದೊಳರಾತಿನಾಯಕರ ಪಟ್ಟನೆ ಪಾರಿಸೆ ಸಂದ ಪೆಂಪು ಭೂ
> ಭುವನದೊಳಂಗಳುಂ ಬೆಳಗೆ ಮಿಕ್ಕ ಭಿಮಾನದ ಮಾತು ಕೀರ್ತಿಯಂ
> ವಿವರಿಸೆ ಸಂದನೇಂ ಕಲಿಯೊ ಸತ್ಕವಿಯೋ ಕವಿತಾ ಗುಣಾರ್ಣವಂ !

"ಚತುರಂಗಬಳಭಯಂಕರಣಂ, ಜೋಳದ ಪಾಳಿ, ಆಹವ, ಅರಾತಿನಾಯಕರು, ಪಟ್ಟನೆ ಪಾರಿಸೆ, ಕಲಿ" ಈ ಪ್ರಯೋಗಗಳೆಲ್ಲ ಏನನ್ನು ಸೂಚಿಸುತ್ತವೆ ?

ಈ ಎರಡು ಪದ್ಯಗಳೂ ಮೂಲ ಪೂರ್ವಪುರಾಣದ ಅನುವಾದವಲ್ಲ. ಅದೂ ಅಲ್ಲದೆ ಈ ಪದ್ಯಗಳು ಆದಿಪುರಾಣದ ಮೂಲಕಥೆಗೆ ಸೇರಿಲ್ಲ. ಪೂರ್ವಪುರಾಣದ ತೌಲನಿಕ ಅಧ್ಯಯನ ಈ ಪದ್ಯಗಳ ಮಟ್ಟಿಗಂತೂ ಖಂಡಿತಾ ಅಗತ್ಯವಿಲ್ಲ. ಪೂರ್ವ

ಪುರಾಣದಿಂದ ಅವರು ಕೊಟ್ಟಿರುವ ಉದಾಹರಣೆಯಲ್ಲಿ "ಚತುರ್ವಿಧಾರಾಧನೆಗಳೆಂಬ ಸಾಧನವುಳ್ಳವನಾಗಿ" ಎಂಬುದಕ್ಕೆ 'ಚತುರಂಗಬಲ'ವೆಂಬ ಅಂದರೆ, ಮೂಲದಲ್ಲಿಲ್ಲದ ಅರ್ಥ ಹೇಳಿದ್ದಾರೆ. ಪದ್ಯದಲ್ಲಿ 'ಚತುಸ್ಸಾಧನ' ಎಂಬ ಪ್ರಯೋಗವಿದೆ. (ಪೂರ್ವ ಪುರಾಣ ೪೭–೪೦೦)

ಲೇಖಕರು "ಪಂಪನು ದಂಡನಾಯಕನಾಗಿದ್ದರೆ ಒಂದೇ ಒಂದಾದರೂ ಆಧಾರ ತೋರಿಸಿ ಎಂದು ಸವಾಲು ಹಾಕುತ್ತಾರೆ. ಆದರೆ ಪಂಪನು ಪರಸಮಯಗಳೊಡನೆ ವಾದಮಾಡಿ ಗೆಲ್ಲುತ್ತಿದ್ದ ಎಂದು ತಾವು ಹೇಳಿದ್ದಕ್ಕೆ ಒಂದೇ ಒಂದು ಆಧಾರವನ್ನಾದರೂ ತೋರಿಸಿದ್ದಾರೆಯೇ ? ಇವರು ಕೊಡುವ ಉದಾಹರಣೆಗೆಲ್ಲ ನೇರವಾದ ಅರ್ಥವನ್ನು ಬಿಟ್ಟು, ಪಂಪನು 'ಯತಿ' ಎಂದು ಮೊದಲೇ ಮನಸ್ಸಿನಲ್ಲಿ ಗಟ್ಟಿಮಾಡಿಕೊಂಡು ಅದಕ್ಕೆ ಸರಿಯಾದ ಅನ್ವಯಾರ್ಥವನ್ನು (–ಪದ್ಯಕ್ಕೆ ಹೊಂದಲಿ ಬಿಡಲಿ) ಕೊಡುತ್ತಾ ಹೋಗುತ್ತಾರೆ !

ಜಿನವಲ್ಲಭನ ಶಾಸನದ ಮರುವಿಚಾರ

ಲೇಖಕರು "ಜಿನವಲ್ಲಭನ ಶಾಸನದಲ್ಲಿ ಪಂಪನಿಗೆ ದೊರೆತದ್ದು ಧರ್ಮಶಾಸನವೆಂದೇ ಮತ್ತು 'ಜೈನಶಾಸನ' ಇದರ ನೆಗಟ್ಟಿಯನ್ನು ನಿರಿಸುವುದಕ್ಕೆಂದೇ ಕೊಟ್ಟಿದ್ದು ಎಂದು ಬರೆದಿದೆ" ಎನ್ನುತ್ತಾರೆ.

> ವಿನುತ ಚಳುಕ್ಯ ವಂಶಪತಿ ಮಿಕ್ಕರಿಕೇಸರಿ ಸನ್ನ ವಿಕ್ರಮಾ
> ರ್ಜುನನ ವಿಜಯಕ್ಕೆ ಧರ್ಮ್ಮವು [ರಮೆನ್ದು] ಮುದೇಯುವದೆನ್ದು ಕೀರ್ತಿಶಾ
> ಸನಮೆನೆ ಕೊಟ್ಟ ಶಾಸನದ ಪಂಪನ ನಂಬಿದೊನ್ದು ಜೈನಶಾ
> ಸನದ ನೆಗಟ್ಟಿಯುಂ ವೃಷಭಪರ್ವತಮುನ್ನದು ತಾನೆ ಪೇಳದೇ

ಈ ಪದ್ಯವನ್ನು ಲೇಖಕರು ಸರಿಯಾಗಿ ಅರ್ಥೈಸಿಲ್ಲವೆಂದೇ ಹೇಳಬೇಕಾಗುತ್ತದೆ. ಅದರ ಅರ್ಥ ಸ್ಪಷ್ಟವಾಗಿಯೇ ಇದೆ. ಅರಿಕೇಸರಿಯು ಕೊಟ್ಟದ್ದು "ತನ್ನ ಕೀರ್ತಿ ಶಾಸನದ ಧರ್ಮವುರವೆಂಬ ಅದೇಯು, ಪಂಪ ನಂಬಿದ್ದು ಜೈನಶಾಸನ". ಮುಂದಿನ ಪದ್ಯದಲ್ಲಿ "........ಹರಿಗಂ ಪಂಪಗೆ ಕೊಟ್ಟ ದ್ವಿಜಾವಸಥಗ್ರಾಮ" ಎಂಬುದು ಸ್ಪಷ್ಟ. ಅಂದರೆ ಅರಿಕೇಸರಿಯು ಕೊಟ್ಟಿದ್ದು ತನ್ನ ಧರ್ಮ, ತನ್ನ ಕೀರ್ತಿ ಸಿಲ್ಲಲೆಂದು. ಇದನ್ನು ಜಿನವಲ್ಲಭನು ಸ್ಪಷ್ಟವಾಗಿ ಹೇಳಿದ್ದಾನೆ. ಇದನ್ನೇ ಪಂಪ ಕೂಡ ಹೇಳಿರುವುದು. ಅಲ್ಲಿ "........ದೆಸೆ ಮುಖಧೂಮ, ದ್ವಿಜರ ಹೋಮ..........."ದಿಂದ ಒಳಗೊಂಡ ಅಗ್ರಹಾರ. ಅರಿಕೇಸರಿ ಕೊಟ್ಟುದು ಖಂಡಿತವಾಗಿ ಜೈನಶಾಸನದ ನೆಗಟ್ಟಿಯನ್ನು ನಿರಿಸುವುದಕ್ಕಲ್ಲ. ಪಂಪನ ಆ ಪದ್ಯವಂತೂ (ದೆಸೆ ಮುಖ ಧೂಮದಿಂ........) ಪೂರಾ ವೈದಿಕಧರ್ಮವನ್ನೇ ಕೀರ್ತಿಸುತ್ತದೆ. "..ನಿಜದ್ವಿಜಾವಸಥ ಪರ್ವತಮುಂ

ಜಿನಚೈತ್ಯವಾಗೆ ಮಾಡಿದ ಜಿನವಲ್ಲಭ" ಎಂದು ಶಾಸನದಲ್ಲಿ ಸ್ಪಷ್ಟವಾಗಿ ಹೇಳಿದೆ. (ಸಾಪೇಕ್ಷ ಪು. 58)

ಲೇಖಕರು "ಈಗ ನಾಮಾವಶೇಷವಾಗಿರುವ—ಪ್ರಾಚೀನಕಾಲದ ಜೈನಬಸದಿಗಳನ್ನು—ಕನಿಷ್ಠ ಏನಿಲ್ಲವೆಂದರೂ ವೃಷಭತೀರ್ಥಂಕರನ ಒಂದಾದರೂ ಪ್ರಸಿದ್ಧ ಬಸದಿಯನ್ನು ಹೊಂದಿದ್ದ ವೃಷಭಪರ್ವತದ ಬಳಿಯಲ್ಲಾದರೂ ವಾಸಿಸಲು ಪಂಪನ-ಜಿನವಲ್ಲಭನ ಹಿರಿಯರಲ್ಲಿ ಶ್ರೇಷ್ಠನಾದ ಅಭಿಮಾನಚಂದ್ರನ ಕಾಲದಲ್ಲಿ ಸಿಡಂಗೊಣ್ಣೆಯಿಂದ ಅತ್ತ ವಲಸೆ ಬಂದಿದ್ದಾನೆ" ಎಂದು ಹೇಳುತ್ತಾರೆ. (ನಾವು ಈಗಾಗಲೇ ಅಭಿಮಾನಚಂದ್ರನು ಜೈನಧರ್ಮಕ್ಕೆ ಮತಾಂತರ ಹೊಂದಿರಲಿಲ್ಲವೆಂದೂ, ಪಂಪ-ಜಿನವಲ್ಲಭರ ತಂದೆ ಭೀಮಪಯ್ಯನೆ ಮತಾಂತರ ಹೊಂದಿದನೆಂದೂ ನೋಡಿದ್ದೇವೆ). ಆದರೆ ಈ ಶಾಸನಪದ್ಯವನ್ನು ಅವರು ಸರಿಯಾಗಿ ಅರ್ಥಮಾಡಿಕೊಂಡೇ ಇಲ್ಲ. ಅವರೇ ಕೊಟ್ಟಿರುವಂತೆ ಶಾಸನದ ಪಾಠ ಹೀಗಿದೆ. (ಸಾಪೇಕ್ಷ. ಪು. 52).

" . . . ಅಬ್ಬಣಬ್ಬೆಯ ಮಗಂ ಕೊಣ್ಡಕುನ್ದೆಯ ದೇಸಿಗಗಣದ ಪೊತ್ತಗೆಯ ಬಳಿಯ ಪಣ್ಡರಂಗವಲ್ಲಿಯ ಜಯಣನ್ದಿಸಿದ್ಧಾಂತ ಭಟಾರರ ಗುಡ್ಡಂ ಜಿನವಲ್ಲಭಂ ಸಬ್ಬಿನಾಡ ನಟ್ಟನಡುವಣ ಧರ್ಮಪುರದುತ್ತರದಿಗ್ಭಾಗದ ವೃಷಭಗಿರಿಯೆಂಬನಾದಿ ಸಂಸಿದ್ಧ ತೀರ್ಥದ ದಕ್ಷಿಣ ದಿಶಾಭಾಗದೀ ಸಿದ್ಧಶಿಲೆಯೊಳ್ತಮ್ಮ ಕುಲದೈವಮಾದ್ಯನ್ತ ಜಿನಬಿಂಬಗಳುಮಂ ಚಕ್ರೇಶ್ವರಿಯುಮಂ ಪೆಱವುಂ ಜಿನಪ್ರತಿಮೆಗಳುಮಂ ತ್ರಿಭುವನತಿಲಕಮೆಂಬ ಬಸದಿಯುಮಂ ಕವಿತಾಗುಣಾರ್ಣವಮೆಂಬ ಕೆಱೆಯುಮಂ ಮದನವಿಳಾಸಮೆಂಬ ಬನಮುಮಂ ಮಾಡಿಸಿದಂ".

ಶಾಸನಪಾಠದ ಈ ವಿವರಗಳಲ್ಲಿ ವೃಷಭಗಿರಿಯ ದಕ್ಷಿಣ ದಿಶಾಭಾಗದ ಸಿದ್ಧಶಿಲೆಯಲ್ಲಿ ಯಾವ ಜಿನಬಿಂಬಗಳೂ ಚೈತ್ಯಗಳೂ ಇರಲಿಲ್ಲವೆಂದು ತಿಳಿಯುತ್ತದೆ. "ಜಿನವಲ್ಲಭ ತನ್ನ ಗುರುಪರಂಪರೆಯಲ್ಲಿ ಕೇವಲ ಒಬ್ಬ ಗುರುವಿನ ಬಗ್ಗೆ ಅಭಿಮಾನದಿಂದ ಹೇಳಿದ್ದಾನೆ. ಅವರೆಂದರೆ ಕೊಣ್ಡಕುನ್ದೆಯ ದೇಸಿಗಗಣದ ಪೊತ್ತಗೆಯ ಬಳಿಯ ಪಂಡರಂಗವಲ್ಲಿಯ ಆಚಾರ್ಯರು" ಎಂದು ಲೇಖಕರು ಹೇಳುತ್ತಾರೆ. ಆದರೆ ಜಿನವಲ್ಲಭನ ಉದ್ದೇಶ ಅವನ ಗುರುಗಳನ್ನು ಸ್ಮರಿಸುವುದಾಗಿರಲಿಲ್ಲ. ಆ ಜಾಗದ ವಿವರವನ್ನು ಕೊಡುವುದು ಮಾತ್ರ. "ಜಯಣಂದಿಸಿದ್ಧಾಂತ ಭಟಾರರ ಗುಡ್ಡಂ" ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಅಷ್ಟೇ ಅಲ್ಲ. ಪಂಪನಿಗೆ 'ಧರ್ಮಪುರ' ದಾನವಾಗಿ ಬಂದಾಗ ಆ ವೃಷಭಾಚಲದಲ್ಲಿ ಯಾವ ದೇವದೇವತೆಗಳೂ ಇರಲಿಲ್ಲವೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. 'ಸಿದ್ಧಶಿಲೆಯೊಳ್ ತಮ್ಮ ಕುಲದೈವಮಾದ್ಯನ್ತ ಜಿನಬಿಂಬಗಳುಮಂ' ಅಂದರೆ ಇಪ್ಪತ್ತನಾಲ್ಕು ಜಿನಬಿಂಬಗಳನ್ನೂ (ಆದ್ಯನ್ತ), ಚಕ್ರೇಶ್ವರಿಯನ್ನೂ, ಮತ್ತೆ ಬೇರೆ ಅಷ್ಟು ಜಿನಪ್ರತಿಮೆಗಳನ್ನೂ, ಅದಲ್ಲದೆ ಬಸದಿ, ಕೆರೆ, ಉದ್ಯಾನವನ್ನೂ ಪಂಪನ ಹೆಸರಿನಲ್ಲಿ ಮಾಡಿಸಿದನು. ಅಂದರೆ ಜಿನವಲ್ಲಭನು ಇವುಗಳನ್ನು ಮಾಡಿಸುವ ಮೊದಲು ಪಂಪನಿಗೆ ದಾನಬಂದ ಕಾಲಕ್ಕೆ ಏನೂ ಇರಲಿಲ್ಲ

ವೆನ್ನುವುದು ಸ್ಪಷ್ಟವಾಗಿದೆ. (ಬಹುಶಃ ಜಯಣನ್ದಿ ಸಿದ್ಧಾಂತಭಟಾರರ ಗುಡ್ಡವೇ ಈ ವೃಷಭಗಿರಿಯಿರಬಹುದು.) ತಮ್ಮನಾದ ಜಿನವಲ್ಲಭನೇ ಪಂಪನ ಕೀರ್ತಿಯನ್ನು ಹೆಚ್ಚಿಸಲು ಮೇಲೆ ಹೇಳಿದ ಎಲ್ಲ ಕೆಲಸಗಳನ್ನೂ ಮಾಡಿದ್ದಾನೆ. ಅಲ್ಲಿ ಒಂದೇ ಒಂದಾದರೂ ಬಸದಿಯಾಗಲೀ ಜಿನಬಿಂಬವಾಗಲೀ ಇರಲಿಲ್ಲವೆಂಬುದು ಸುಸ್ಪಷ್ಟವಾಗಿರುವುದರಿಂದ ಅಭಿಮಾನಚಂದ್ರನೇ ಈ ಕಾರಣಕ್ಕೆ ವಲಸೆಬಂದಿದ್ದಾನೆ ಎಂಬುದು ಸರಿಯಲ್ಲ.

"ಇದು ಕವಿತಾಗುಣಾರ್ಣವನ ಕೀರ್ತಿಯ ಮೂರ್ತಿವೊಲಾಗಿ ದಕ್ಷಿಣಾರ್ಧದ ವೃಷಭಾದ್ರಿಯ[ಕ್ಕೆ] ವೃಷಭೇಶ್ವರ ಬಿಂಬ ಸನಾಥಮೆಂಬಲಂಪೊದವೆ ನಿಜದ್ವಿಜಾವಸಥ ಪರ್ವ್ವತಮಂ ಜಿನಚೈತ್ಯಮಾಗೆ ಮಾಡಿದ ಜಿನವಲ್ಲಭಂಗೆ ಜಿನವಲ್ಲಭನಪ್ಪುದುಮೊನ್ದು ಚೋದ್ಯಮೋ''.

ಶಾಸನದ ಈ ಭಾಗದಿಂದಲೂ 'ನಿಜದ್ವಿಜಾವಸಥ ಪರ್ವ್ವತಮಂ ಜಿನಚೈತ್ಯಮಾಗೆ ಮಾಡಿದ ಜಿನವಲ್ಲಭ' ಅಂದರೆ ಜಿನವಲ್ಲಭನು ಈ ಎಲ್ಲವನ್ನೂ ಮಾಡಿಸುವ ಮೊದಲು ಅದು ಕೇವಲ ಅಗ್ರಹಾರ ಮಾತ್ರ ಆಗಿತ್ತು ಎಂಬುದು ತಿಳಿಯುತ್ತದೆ. ಪಂಪನ "ದೆಸೆ ಮುಖಧೂಮದಿಂ...." ಎಂಬ ಪದ್ಯದಿಂದಲೂ, ಈ ಶಾಸನದಿಂದಲೂ ತಿಳಿಯುತ್ತದೆ. ಪಂಪನ 'ಜೈನಶಾಸನದ ನೆಗಟ್ತೆ'ಯನ್ನು ಜಿನವಲ್ಲಭನು ಎತ್ತಿಹಿಡಿದಿದ್ದಾನೆ.

ಲೇಖಕರು, "ಪಂಪನ ಮನೆತನಕ್ಕೆ ದಂಡನಾಯಕ ಪದವಿ ಸಂದಿದ್ದರೆ ಅದನ್ನು ನಾವು ಖಂಡಿತವಾಗಿಯೂ ಅವನ ತಮ್ಮನ ವೃಷಭಾದ್ರಿಯ ಶಾಸನದಲ್ಲಿ ಕಾಣುತ್ತಿದ್ದೆವು" (ಸಾಪೇಕ್ಷ ಪು. 41) ಎನ್ನುತ್ತಾರೆ. 'ದಂಡನಾಯಕ' ಎಂಬುದೇ ಅಲ್ಲದಿದ್ದರೂ ತಾನು 'ಕಲಿ' ಎಂದು ಹೇಳಿಕೊಂಡಿರುವುದನ್ನು ಲೇಖಕರು ಒಪ್ಪುವುದೇ ಇಲ್ಲವಲ್ಲ! ಇನ್ನು ಜಿನವಲ್ಲಭನಿಗೆ ತನ್ನ ಶಾಸನದಲ್ಲಿ ಪಂಪನ ವಿಷಯವನ್ನು ಹೇಳುವ ಉದ್ದೇಶವೇ ಇಲ್ಲ. ಪಂಪನಿಗೆ ದಾನವಾಗಿ ಬಂದ 'ಧರ್ಮಪುರ' ಅಗ್ರಹಾರದ ತಾಮ್ರಶಾಸನವನ್ನು ಕಲ್ಲಿನ ಮೇಲೆ ಕೆತ್ತಿಸಿ, ತನ್ನ ವಿಷಯವನ್ನು ಹೇಳಿಕೊಳ್ಳುವುದು, ತಾನೇನು ಮಾಡಿದೆ ಎಂದು ಹೇಳಿಕೊಳ್ಳುವುದೇ ಅವನಿಗೆ ಮುಖ್ಯವಾಗಿತ್ತು. "ಶಾಸನವನ್ನು ಜಿನವಲ್ಲಭನ ಗುಣಾವಳಿಯನ್ನು ತಿಳಿಸುವುದಕ್ಕೆಂದೇ ಹಾಕಲಾಗಿದೆ" ಎಂದು ಲೇಖಕರು ಸರಿಯಾಗಿಯೇ ಗುರುತಿಸಿದ್ದಾರೆ. "ಈ ಶಾಸನವನ್ನು ಕೆತ್ತಿಸುವ ಹೊತ್ತಿಗೆ ಪಂಪನೂ ಇದ್ದಿಲ್ಲ, ಮತ್ತೆ ಅಗ್ರಹಾರವನ್ನು ಹಾಕಿಕೊಟ್ಟ ಅರಿಕೇಸರಿಯೂ ಇದ್ದಿಲ್ಲ" ಎನ್ನುತ್ತಾರೆ, (ಸಾಪೇಕ್ಷ ಪು. 69) ಹಾಗಿದ್ದ ಮೇಲೆ ಪಂಪ 'ದಂಡನಾಯಕ' ಆಗಿದ್ದನೋ ಇಲ್ಲವೋ ಎಂಬುದು ಈ ಶಾಸನದ ಮಟ್ಟಿಗೆ ಅಪ್ರಸ್ತುತ.

"ಆದಿಪುರಾಣದ ಒಂದು ಪದ್ಯ ಹಾಗೂ ಪಂಪನ ಜೀವನ ದೃಷ್ಟಿ"ಯಲ್ಲಿ ಅವರು ಉಲ್ಲೇಖಿಸುವ ಪದ್ಯ "ಧರ್ಮಾರ್ಥ . . . ರಸಮದು ಕಾಮಂ" ಎಂಬ ಪದ್ಯ ಮೂಲದಿಂದ ಅನುವಾದಿಸಲ್ಪಟ್ಟಿರುವುದರಿಂದ ಅದು ಪಂಪನ ಜೀವನದೃಷ್ಟಿಯನ್ನು ತೋರಿಸುವುದಿಲ್ಲ" ಎನ್ನುತ್ತಾರೆ. ಹಾಗೆ ನೋಡಿದರೆ ಇಡೀ ಆದಿಪುರಾಣವೇ

ಜಿನಸೇನಾಚಾರ್ಯರ ಪೂರ್ವಪುರಾಣದ ಆಧಾರದಿಂದ ರಚಿತವಾದದ್ದು. ಪಂಪನು ಮೂಲವನ್ನು ಸ್ವಲ್ಪಮಟ್ಟಿಗೆ ಕಟ್ಟುನಿಟ್ಟಾಗಿಯೇ ಅನುಸರಿಸಿದ್ದಾನೆ. ಹಾಗೆಂದ ಮೇಲೆ ಪಂಪನ ಆದಿಪುರಾಣದಲ್ಲಿ ತೋರುವ ಜೀವನದೃಷ್ಟಿ, ಜೀವನದರ್ಶನ ಎಷ್ಟು ಭಾಗ ಮೂಲದ್ದು ? ಎಷ್ಟು ಭಾಗ ಪಂಪನದು ? ವಸ್ತುಸ್ಥಿತಿಯೆಂದರೆ—ಕಾವ್ಯದಲ್ಲಿ ಬರುವ ಎಲ್ಲವನ್ನೂ ಕವಿಯ ವ್ಯಕ್ತಿತ್ವಕ್ಕೆ ಹೋಲಿಸುತ್ತಾ ಹೋದಿರೆಂದರೆ ಇಂತಹ ಪ್ರಶ್ನೆಗಳೇಳುತ್ತವೆ. "ಜಿನಸೇನಾಚರ್ಯರು ಯತಿಯಾಗಿದ್ದರು. ಆದುದರಿಂದ ಅವರ ಹಜ್ಜೆಯಲ್ಲಿ ಹಜ್ಜೆಯಿಟ್ಟು ಪಂಪ ಅವರ ಹಾಗೆಯೇ ಯತಿಯಾಗಿದ್ದ", "ಆದಿಪುರಾಣ ಪಂಪನ ಆತ್ಮವೃತ್ತ. ಅದರಲ್ಲಿ ಅವನ ಬಿರುದುಗಳನ್ನು ಆದಿನಾಥನಿಗೆ, ಭರತನಿಗೆ ಶ್ರೇಯಾಂಸನಿಗೆ ಸೇರಿಸಿ ಬರೆದಿದ್ದಾನೆ" ಎನ್ನುತ್ತಾರೆ. ಅಂದರೆ ಪಂಪನೇ ಆದಿನಾಥ, ಪಂಪನೇ ಭರತ-ಎನ್ನುತಾರೆ. (ಸಾಪೇಕ್ಷ ಪು. 94).

> ಭೂಪಾಲೇಂದ್ರ ಮಹಾಮಹೈರಹರಹಸ್ಸಂಪಾದ್ಯಮಾನೈರ್ನವೈಃ
> ಭ್ರಾಜಂತೇ ಜಿನರಾಜಕೃತ್ರಿಮ ಗೃಹಾಸ್ತೇಭ್ಯೋನಸ್ಸುಮರ್ಹಹೇ
> ಅಸ್ಮಾಕಂ ಕವಿತಾಗುಣಾರ್ಣವನುತಾಃ ಕುರ್ವಂತು ಚೈತ್ಯಾಲಯಃ
> ತೇ ಲೋಕತ್ರಯ ತುಂಗಮಂಗಳ ಮಹಾಶ್ರೀ ಭಾಗ್ಯಯೋಗ್ಯಂ ಪದಂ|| (73).

ಈ ಪದ್ಯಕ್ಕೆ "ಕವಿತಾಗುಣಾರ್ಣವನೆನಿಸಿದ ನನ್ನಿಂದ (—ಪಂಪನಿಂದ) ಸ್ತುತಿಸಲ್ಪಟ್ಟ ಚೈತ್ಯಾಲಯಗಳು ತ್ರಿಭುವನಕ್ಕೂ ಶ್ರೇಷ್ಠವಾದ ಮೋಕ್ಷಪದವಿಯನ್ನು ಉಂಟುಮಾಡಲಿ ಎಂದಿದ್ದಾನೆ. ಮತ್ತೆ ಭರತ (ಪಂಪ) ಸಿದ್ಧಭಕ್ತಿಪೂರ್ವಕ ಮೋಕ್ಷಮಾರ್ಗದ ದೀಕ್ಷೆಯನ್ನು ತೆಗೆದುಕೊಳ್ಳುತ್ತಾನೆ" ಎನ್ನುತ್ತಾರೆ. ಲೇಖಕರೇ ಹೇಳುವಂತೆ ಮೂಲ ಪೂರ್ವಪುರಾಣದ ಅನುವಾದವಾದರೆ ಮಧ್ಯೆ ಪಂಪ ಎಲ್ಲಿಂದ ಬಂದ ? ಈ ಪದ್ಯದ ಅನ್ವಯಾರ್ಥ ಮಾಡುವುದಾದರೆ, ಪಂಪ ಕಟ್ಟಿಸಿದ ಜಿನಚೈತ್ಯಗಳು—ಅಂದರೆ ಭರತ ಕಟ್ಟಿಸಿದ ಜಿನಚೈತ್ಯಗಳು ಎಂಬುದು ಮೂಲದ ಸರಿಯಾದ ಅರ್ಥ—ಮೋಕ್ಷಶ್ರೀಪದವಿಗಳ ಉಂಟುಮಾಡಲಿ ಎಂದು ಭರತ ಕೇಳಿ ಕೊಳ್ಳುತ್ತಾನೆ ಎಂದು ಅರ್ಥ ಮಾಡಬೇಕೆ ? ತನ್ನ ಬಿರುದುಗಳನ್ನು ಭರತನಿಗೆ ಆರೋಪಿಸಿದ್ದರೆ, ಪದ್ಯದಲ್ಲಿ 'ಭರತ' ಎಂದು ಅರ್ಥ ಮಾಡಬೇಕೇ ಹೊರತು 'ಪಂಪ' ಎಂದು ಅರ್ಥ ಮಾಡುವುದಾದರೂ ಹೇಗೆ ?

"ನಾಗಚಂದ್ರನು ತನ್ನ ಮಲ್ಲಿನಾಥಪುರಾಣದಲ್ಲಿ ತನ್ನ ಗುರುವಾದ ಯತಿಪತಿ 'ಬಾಳಚಂದ್ರ'ನನ್ನೂ ಪೊನ್ನನು ಶಾಂತಿಪುರಾಣದಲ್ಲಿ ತನ್ನ ಗುರುವಾದ 'ಜಿನಚಂದ್ರ' ಯತಿಯನ್ನೂ, ನಾಗವರ್ಮನು ತನ್ನ ವರ್ಧಮಾನಪುರಾಣದಲ್ಲಿ ತನ್ನ ಗುರುವಾದ 'ವೀರಣಂದಿ'ಯನ್ನೂ ಕಾವ್ಯದ ನಾಯಕರನ್ನಾಗಿ—ಅಂದರೆ ಆಯಾ ಜಿನರಲ್ಲಿ ತಮ್ಮ ಗುರುಗಳನ್ನು ತಗುಳ್ಚಿ—ಕಾವ್ಯ ಬರೆದರೆ, ಪಂಪನು ತನ್ನ ಆದಿಪುರಾಣ ಕಾವ್ಯಕ್ಕೆ ತಾನೇ ನಾಯಕನೆಂದು—ಅಂದರೆ ಆದಿನಾಥನಲ್ಲಿ ತನ್ನನ್ನು ತಗುಳ್ಚಿ—ಬರೆದಿದ್ದಾನೆ"

ಎಂದು ಹೇಳುತ್ತಾರೆ. ಆ ವಿಷಯದಲ್ಲೂ ಸಮನ್ವಯತವಿಲ್ಲ. ಈ ಮೂರೂ ಕವಿಗಳೂ ಪಂಪನ ಅನಂತರದವರು. ಪೊನ್ನನ ನಾಗೂ ನಾಗಚಂದ್ರನ ಒಂದೊಂದು ಪದ್ಯವನ್ನೇನೋ ಉದಾಹರಣೆಯಾಗಿ ಕೊಟ್ಟಿದ್ದಾರೆ. ಈ ಕೆಳಗಿನ ಪದ್ಯವನ್ನು ನೋಡಿ, ಎಂದು ಹೇಳಿದ್ದಾರೆ. ಆದರೆ ಆ ಪದ್ಯಗಳಿಗೆ ಯಾವ ರೀತಿಯೂ ಅರ್ಥವನ್ನು ಹೇಳಿಲ್ಲ. ನಾವು ಆ ಪದ್ಯವನ್ನು 'ನೋಡಿ'ದರೆ ಅವರು ಆರೋಪಿಸುವ ಅರ್ಥವು ನಮಗೆ ಖಂಡಿತವಾಗಿಯೂ ಕಾಣುವುದಿಲ್ಲ. ಅಥವಾ ತೀರ್ಥಂಕರರಲ್ಲಿ ಅವರ ಗುರುಗಳನ್ನು 'ತಗುಲಿಸಿ' ಬರೆದಿದ್ದಾರೆ ಎನ್ನಿಸುವುದಿಲ್ಲ. (ಸಾಪೇಕ್ಷ ಪು. 8-9) ಅಲ್ಲದೇ ಮುಂದೆ ಆದಿಪುರಾಣದ 16-73 ರಿಂದ 16-75 ರ ಪದ್ಯದ ವರೆಗಿನ ಭಾಗವನ್ನು ಕೊಟ್ಟು "ಈ ಇಡೀ ಭಾಗವನ್ನು ಅಧ್ಯಯನಶೀಲರು ಇನಿತು ಪುನಃ ಪರೀಕ್ಷಿಸಬೇಕು. ಇಲ್ಲಿ ಭರತ ಯತಿಪತಿಯಾಗಿರುವುದು ಸ್ಫಟಿಕ ಶಲಾಕೆಯಷ್ಟು ಸ್ಪಷ್ಟವಿದೆ. ಇನ್ನು ಯಾವನೇ ಒಬ್ಬ ವ್ಯಕ್ತಿ ತಾನು 'ಯತಿ' ಆಗಲಾರದೆ ತನ್ನ ಹೆಸರನ್ನಾಗಲೀ, ಬಿರುದನ್ನಾಗಲೀ, 'ಯತಿ'ಯ ವ್ಯಕ್ತಿತ್ವದಲ್ಲಿ ಆರೋಪಿಸಿ ಹೇಳುವುದು ಲೋಕ ವಿರೋಧವಾದ ಸಂಗತಿ" ಎನ್ನುತ್ತಾರೆ. ಅಲ್ಲಿಂದ ಮುಂದೆ ಮತ್ತೆ ಮೂರು ಪದ್ಯಗಳನ್ನು ಉಲ್ಲೇಖಿಸಿ, "ಈ ಮೂರು ಪದ್ಯಗಳನ್ನೂ ಸಂಬಂಧಿಸಿಕೊಂಡು ಓದಬೇಕು. ಆಗ ಅವನ ಹುಟ್ಟುಗಟ್ಟಿಕೊಂಡ ಜೀವನ ಶೈಲಿ ಅರ್ಥವಾಗುತ್ತದೆ" ಎನ್ನುತ್ತಾರೆ. ಈ ಪದ್ಯಗಳಿಗೆ ಅರ್ಥ ಹೇಳದೆ, ಅದಕ್ಕೆ ಯಾವ ರೀತಿಯ ವ್ಯಾಖ್ಯಾನವನ್ನೂ ಮಾಡದೆ, ಇಂತಹ ಟೀಕೆಗಳನ್ನು ಕೊಟ್ಟರೆ, ಇವರು ಗುರುತಿಸಿರುವ ಪಂಪನ 'ಜೀವನದ ಶೈಲಿ' ನಮಗೆ ಹೇಗೆ ಅರ್ಥವಾಗುತ್ತದೆ? ಅಲ್ಲದೆ ಈ ಹಿಂದಿನ ವಿದ್ವಾಂಸರಾರಿಗೂ ಹಾಗೆ ಹೇಳಿಸುದಿಲ್ಲ.

"ಬಾರಾದವರೂ ಶ್ರೀ ಹಾಸನ್ನ, ಚಕ್ರವರ್ತಿಯ ವ್ಯಕ್ತಿ ಹಿರಿಯರು; ಕಿರಿಯರು ಎನ್ನದೆ ಭವ್ಯರು 'ಅನಂತಸುಖಾಭಿಲಾಷಿಗಳ್ ಭಾವಿಸುಗೆ' ಎಂದು ಅಪ್ಪಣೆ ಕೊಡಿಸಬಹುದೇ? [illegible] ಹೀಗೆ ಮಾಡುವುದು ಲೋಕಬಾಧೆ" ಎನ್ನುತ್ತಾರೆ. ಆ ಪದ್ಯ ಇಂತಿದೆ.

> ಭಾಸುರದೇವಕೋಟಿಭುವನಪ್ಪ ಪುರುಷಾರ್ಥಿತನಪ್ಪ ಶಾಸನಂ
> ಗಾಸನಕಂಪಮುಂ ಮಾಡಿ ತೀರ್ಥಕರತ್ವಮನಿತ್ತನಪ್ಪರಾ
> ಪಾಸನೆಯಿಲ್ಲ ಕಲ್ಪದುಮದ ಹೋಡೆ ಭಾವನೆಯಿಂದೆ ಪೋಕರಾ
> ಶ್ರೀಸಮನೆಯ್ದೆ ಭಾವಿಸುಗೆ ಭವ್ಯರನಂತಸುಖಾಭಿಲಾಷಿಗಳ್

[illegible] ತೀರ್ಥಂಕರರಿಗೆ [illegible] ಮಹಾಬುದ್ಧಿಗಳಿಂದ [illegible] ಮಾಡಿ, ಆದಿರಾಜನಿಗೆ ತೀರ್ಥಕರತ್ವವನ್ನು [illegible] ದೊರಕಿಸಲು ನೋಡಿದ

ಭಾವನೆಗಳೇ ಸಮರ್ಥವಾದುವು. ಅಂತೆಯೇ ಈ ಷೋಡಶಭಾವನೆಗಳನ್ನು ಅನಂತ ಸುಖಾಭಿಲಾಷಿಗಳಾದವರು 'ಷೋಡಶ ಭಾವನೆಗಳೆಂದೇ ತಿಳಿದು ಪರಿಶೀಲಿಸಲಿ' ಎಂಬುದು, ಅರ್ಥ. (ಭಾವಿಸುಗೆ = ಯೋಚಿಸಲಿ) ಇದರಲ್ಲಿ ಅಪ್ಪಣೆ ಕೊಡಿಸುವಂಥ ಜ್ಞಾನವೇನಿದೆ?

ಲೇಖಕರು "ವಿಕ್ರಮಾರ್ಜುನವಿಜಯ ಕಾವ್ಯವನ್ನು ಬರೆಯಲು ಅರಿಕೇಸರಿ ಆತನನ್ನು ಆಸ್ಥಾನಕ್ಕೆ ಕರೆಸಿದ್ದಾನೆ. ಇದರಿಂದ ಪಂಪನು ಬೇರೆ ಸ್ಥಳದಿಂದ ರಾಜನ ಆಸ್ಥಾನಕ್ಕೆ ಬಂದನೆಂದು ತಿಳಿದುಬರುತ್ತದೆ. ಅರಿಕೇಸರಿಯು ಈ ಸೇವಕ 'ಕಲಿ' ಎಂಬುದೇ ಆಗಿದ್ದರೆ ಖಡ್ಗವನ್ನು ಹಿಡಿದು ಬಡಿದಾಡುವ ವ್ಯಕ್ತಿಯೇ ಆಗಿದ್ದರೆ ಅವನು ಸದಾ ಅರಿಕೇಸರಿಯ ಬಳಿಯಲ್ಲೇ ಇರುತ್ತಿದ್ದ." (ಸಾಪೇಕ್ಷ ಪು. 110) ಎನ್ನುತ್ತಾರೆ.

'ಗುಣಾರ್ಣವ' ಬಿರುದಿನ ಅರಿಕೇಸರಿ ತನ್ನ ಚರಿತೆಯನ್ನು ಪಡೆದಿರುವ ಪಂಪನಿಗೆ, ಆ ಚರಿತೆ ಬರೆಯುವುದಕ್ಕಿಂತ ಮುಂಚೆಯೆ ಖ್ಯಾತನಾಮನಾದವನಿಗೆ 'ಕವಿತಾಗುಣಾರ್ಣವ' ಎಂಬ ಬಿರುದನ್ನಿತ್ತು ಮನ್ನಿಸಿದ್ದಾನೆ. ಆದಿಪುರಾಣ ಬರೆಯುವ ಕಾಲಕ್ಕೆ ಈ ಬಿರುದು ಸಂದಿತ್ತು ಎಂಬ ತೀ.ನಂ.ಶ್ರೀ. ಅವರ ಅಭಿಪ್ರಾಯವನ್ನು ಲೇಖಕರು ಒಪ್ಪಿದ್ದಾರೆ (ಸಾಪೇಕ್ಷ ಪು. 78). 'ಆದಿಪುರಾಣ' ಬರೆಯುವುದಕ್ಕೂ ಮೊದಲು ಪಂಪನಿಗೆ ಅರಿಕೇಸರಿಯ ಸಂಪರ್ಕವಿದ್ದಿತು ಎಂಬುದು ಲೇಖಕರಿಗೂ ಒಪ್ಪಿಗೆಯಾಗಿದೆ. ಅಂದಮೇಲೆ ಲೇಖಕರ ಮೇಲಿನ ಹೇಳಿಕೆಯನ್ನು ಯಾವ ಅರ್ಥದಲ್ಲಿ ತೆಗೆದುಕೊಳ್ಳಬೇಕು? ಪಂಪನು ಅರಿಕೇಸರಿಯ ಬೋಧನದಲ್ಲೇ ಇದ್ದನು ಎಂದರೆ 'ಪಂಪನನ್ನು ಬೇರೆ ಸ್ಥಳದಿಂದ ಕರೆಸಿದ' ಎಂಬುದು ಸರಿಹೋಗುವುದಿಲ್ಲ ಅಲ್ಲವೇ? (ಬೇರೆ ಸ್ಥಳದಿಂದ ಎಂದರೆ ಬೇರೆ ಊರಿನಿಂದ ಎಂದು ಲೇಖಕರ ಅರ್ಥವಿದ್ದಂತಿದೆ).

"ಸಾಪೇಕ್ಷ' ಗ್ರಂಥವನ್ನು ಓದಿದಾಗ ಪಂಪನ ವಿಷಯವಾಗಿ ಇರುವ ವಿಫುಲ ವಿವರಗಳು, ಮಾಹಿತಿಗಳ ಸಂಗ್ರಹಣೆ ಆಲೋಚನೆಗೆ ಹಚ್ಚುತ್ತವೆ. ಆದರೆ ಒಂದು ಕ್ರಮವಿಲ್ಲದ ಬರವಣಿಗೆ ದಿಕ್ಕುಗೆಡಿಸುತ್ತದೆ. ಸಾಹಿತ್ಯದ ವಿದ್ಯಾರ್ಥಿಗಳು, ಪಂಪನನ್ನು ಕುರಿತು ತಿಳಿದುಕೊಳ್ಳಬಯಸುವ ಜನರಿಗೆ ಇದರಿಂದ, ತಪ್ಪು ವ್ಯಾಖ್ಯಾನದಿಂದ ತುಂಬ ನಷ್ಟವಾಗುತ್ತದೆ. ಇವರ ಈ ಲೇಖನದಲ್ಲಿರುವ ದೋಷಗಳನ್ನು, ವಿರೋಧಾಭಾಸಗಳನ್ನೂ, ತಪ್ಪು ವ್ಯಾಖ್ಯಾನಗಳನ್ನೂ, ಅರ್ಥಸಮನ್ವಯವಿಲ್ಲದ ಪದ್ಯಗಳನ್ನೂ ಈ ಲೇಖನದಲ್ಲಿ ಗುರುತಿಸಲಾಗಿದೆ. ಲೇಖಕರೇ ಗ್ರಂಥ ಪ್ರಕಟನೆಗೆ ಮೊದಲು ತಮ್ಮ ಲೇಖನಗಳನ್ನು ಪರಿಶೀಲಿಸಿದ್ದರೆ, ಎಷ್ಟೋ ವಿರೋಧಾಭಾಸದ ಅಭಿಪ್ರಾಯಗಳನ್ನು ತಿದ್ದಬಹುದಾಗಿತ್ತು. [illegible] ಸ್ವಾತಂತ್ರ್ಯ [illegible] ಹೇಳಬೇಕಾಗುವುದಿಲ್ಲ [illegible] ಕೃತಿಗಳನ್ನು [illegible] ದಾಗದಂತೆ ಹೊಸಹೊಸ ಅರ್ಥಗಳ [illegible]

ಮನಸ್ಸಿನಲ್ಲಿ ನಿಲುವೊಂದನ್ನು ತಳೆದು ಅದಕ್ಕೆ ಆಧಾರಗಳನ್ನು ಎಳೆದುತಂದು ಅನ್ವಯಿಸುತ್ತಾ ಹೋದರೆ, ಅದು ಯಾವ ರೀತಿಯಲ್ಲೂ ಸರಿಯಾಗುವುದಿಲ್ಲ ಎಂಬುದಕ್ಕೆ ಈ ಗ್ರಂಥವೇ ಸಾಕ್ಷಿ.

ಇನ್ನು ಮುಂದೆ ನಾನು ಹೇಳಲಿರುವ ಮಾತುಗಳು 'ಸಾಪೇಕ್ಷ'ಕ್ಕೆ ನೇರವಾಗಿ ಸಂಬಂಧಿಸಿದವುಗಳಲ್ಲ ; ಅದರ ನಿಮಿತ್ತ ಮಾಡಿಕೊಂಡು ಹೇಳಿದಂಥವು :

ಯಾವುದೊಂದು ಮಾರ್ಗಕೃತಿಯ ಪುನರ್ವಿಮರ್ಶೆಯು ಕೆಲಕಾಲ ಗತಿಸಿದ ಮೇಲೆ ನಡೆಯಬೇಕಾದದ್ದು ಸಾಹಿತ್ಯ ಪರಂಪರೆಯ ಆರೋಗ್ಯಕರವಾದ ಬೆಳವಣಿಗೆಯ ದ್ಯೋತಕವೇ ಆಗಿದೆ. ಹಾಗೆ ಮಾಡುವ ಭರದಲ್ಲಿ ಹಿಂದಿನವರ ವಿಮರ್ಶನ ವಿಚಾರಗಳನ್ನು ಏನಾದರೊಂದು ಕಾರಣಕೊಟ್ಟು ಖಂಡಿಸಬೇಕೆನ್ನುವ ಮನೋಭಾವ ಈಗೀಗ ಕೆಲವೆಡೆ ಕಂಡುಬರುತ್ತದೆ. ನಮ್ಮ ಹಿಂದಿನ ಅನೇಕ ಹಿರಿಯ ವಿಮರ್ಶಕರು ಸಾಹಿತ್ಯವನ್ನು ನಿಷ್ಠೆಯಿಂದ ಅಭ್ಯಸಿಸಿದವರಾಗಿದ್ದರು. ವಿಶೇಷ ಜಾಗರೂಕತೆಯಿಂದ ಅವರು ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ಹಾಗೆಂದು ಅವರ ಅಭಿಪ್ರಾಯಗಳೆಲ್ಲವೂ ಸರಿ ಇರಲಿಕ್ಕಿಲ್ಲ. ಆದರೆ ಅವರ ಅಭಿಪ್ರಾಯಗಳನ್ನು ಅಲ್ಲಗಳೆಯುವಾಗ ಯಾವ ಪೂರ್ವಗ್ರಹವನ್ನೂ ಇಟ್ಟುಕೊಳ್ಳದೆ ಚೆನ್ನಾಗಿ ಯೋಚಿಸಿಯೆ ನಮ್ಮ ಮರುವಿಚಾರವನ್ನು ಮಂಡಿಸಬೇಕು. ಮತ್ತೊಂದು ೩೦–೪೦ ವರ್ಷಗಳು ಕಳೆದ ಮೇಲೆ ನಮ್ಮದೇ ವಿಮರ್ಶನ ವಿಚಾರವನ್ನು ಮುಂದಿನವರು ಅದೇ ರೀತಿಯಲ್ಲಿ ಅವಸರದ ಅಹಂಕಾರದಿಂದ ತೆಗಳುವಂತಾಗಬಾರದು. ಅಲ್ಲವೆ ?*

——

* ಈ ಲೇಖನವನ್ನು ಬರೆಯಲು ನನಗೆ ಪ್ರೇರಣೆ, ಪ್ರೋತ್ಸಾಹನೆಗಳನ್ನಿತ್ತ ನನ್ನ ಗುರುಗಳಾದ ಪ್ರೊ. ಜಿ. ವೆಂಕಟಸುಬ್ಬಯ್ಯ ಹಾಗೂ ಡಾ. ಶ್ರೀನಿವಾಸ ಹಾವನೂರರಿಗೆ ನಾನು ಕೃತಜ್ಞನಾಗಿದ್ದೇನೆ.

ಇದೊಂದು ದಾಖಲೆ

ಗೌ. ಮ. ಉಮಾಪತಿ ಶಾಸ್ತ್ರಿ

ಗೋಣೀಬೀಡು ಭದ್ರಾವತಿ ತಾಲೂಕಿನ ಭದ್ರಾನದೀತೀರದ ಹಸಿರು ಗದ್ದೆಗಳ ಬಯಲಿನ ಮಧ್ಯೆ ಎದ್ದು ಕಾಣುವ ದೊಡ್ಡಹಳ್ಳಿ. ಅಲ್ಲಿಯ ನೆರೆಯ ನದೀತಟದ ಪ್ರಶಾಂತ ಪರಿಸರದಲ್ಲಿ ಒಂದು ವಿರಕ್ತಮಠ. ಅಲ್ಲಿ ನನ್ನ ವಿದ್ಯಾರ್ಥಿಯಾಗಿದ್ದ ಸಾಧಕರೊಬ್ಬರು ಅಧಿಪತಿಗಳು. ಅವರು ಕಟ್ಟಿಸಿದ ಹೊಸಮಠದ ಪ್ರವೇಶೋತ್ಸವದಲ್ಲಿ ಮುಖ್ಯ ಅತಿಥಿಯಾಗಿದ್ದೆ. ಒಂದು ದಿನ ಅಲ್ಲಿಯೇ ಉಳಿದೆ. 'ಶೀಲ ಸಂಪಾದನ' ಎಂಬ ಅನುಭಾವದ ಹಿರಿಯ ಹೆಸರು ಹೊತ್ತ ಮಠದ ಹಿಂದಿನ ಐತಿಹ್ಯವೇನಾದರೂ ಸಿಕ್ಕೀತೆ ಎಂದು ಹಳೆಯ ಮಠದ ಮೂಲೆ ಮೂಲೆ ತಡಕಾಡಿದೆ. ಒಂದೆಡೆ ಮೂಲೆಗುಂಪಾದ ಮುರಿದ ಓಲೆಗರಿ ಹಾಗೂ ದಪ್ಪಕಾಗದದ ಚಿಂದಿಗಳ ಅವಶೇಷ ಸಮೃದ್ಧವಾದ ಪ್ರಾಚೀನ ಹಸ್ತಪ್ರತಿ ಭಂಡಾರವೊಂದು ಇಲಿ—ಗೆದ್ದಲುಗಳ ಆಹಾರವಾದುದನ್ನು ಕೂಗಿ ಹೇಳುವಂತಿತ್ತು. ಅಲ್ಲಿಯೆ ಒಂದೆಡೆ ಪುಸ್ತಕಗಳ ರಾಶಿಯೊಂದು ನನ್ನನ್ನು ಆಕರ್ಷಿಸಿತು. ನೂರಾರು ವರ್ಷ ಹಿಂದೆ ಅಚ್ಚಾದ ಪುಸ್ತಕಗಳು; ಸಟೀಕಾ ಅಮರಕೋಶ, ರಾಜಶೇಖರ ವಿಳಾಸ, ಶರಣ ಲೀಲಾಮೃತ ಮೊದಲಾದವು ಮುಟ್ಟಿದರೆ ಪಾನು ಮುರಿಯುವಂತಿದ್ದವು. ಬಹಳ ಎಚ್ಚರದಿಂದ ರಾಜಶೇಖರ ವಿಳಾಸದ ದಪ್ಪದ ಪುಸ್ತಕ ತೆರೆದೆ. ಅದರಲ್ಲಿ ಮೈಸೂರು ಸರಕಾರದ ದರ್ಖಾಸ್ತಿನ ನೋಟೀಸು ಸಿಕ್ಕಿತು. ಸು. 60 ವರ್ಷಗಳ ಹಿಂದೆ ಅಚ್ಚಾದ, ಮುಟ್ಟಿದರೆ ಮುರಿಯುವಂತಿದ್ದ, ಜೀರ್ಣ—ಶೀರ್ಣ ಈ ದಾಖಲೆಯ ಕಾಗದ ಅಪೂರ್ವವೆನಿಸಿತು. ಮೆಲ್ಲಗೆ ಎತ್ತಿ ಬೆಳಕಿಗೆ ಬಂದು ಓದಿದೆ.

02506—GPB—2, 360—5—9—19

1901ನೆ ಇಸವಿ VII ನೆ
ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್
ಬಗ್ಗೆ ದರಖಾಸ್ತಿನ ನೋಟೀಸ್
ನಮೂನೆ ನಂಬರ್ 80, ಸಿವಿಲ್

.... ಕೋರ್ಟಿನಲ್ಲಿ
ಸನ್ ನೆಯ ಇಸವಿ ಅರ್ಜೀ ನಂಬರ್....
ವ್ಯಕಪಟ್ಟಿ.... .... ರ

ಆಸ್ತಿ ವಿಷಯುದಲ್ಲಿ.... ....
.... ಅರ್ಜೀದಾರರು ....
ಮೃತಪಟ್ಟ ಸದರಿ.... .... ರಿಗೆ
.... ಆಗಬೇಕೆಂಬ ಹಕ್ಕುದಾರಿ ಮೇಲೆ
ಸ್ಥಳದ.... .... ರು
ವಾಸಸ್ಥರಾಗಿ ಮೃತಪಟ್ಟ .... ರ
ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್
ಮಾಡುವದಕ್ಕೆ ೧೯೦೧ನೆ ಇಸವಿ ೭ನೆ ರೆಗ್ಯುಲೇಷನ್
ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ
ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ.... .... ರ
ಅರ್ಜೀಯನ್ನು ಸನ್ ೧೯೧ ....ನೆ ಇಸವಿ .... ತಿಂಗಳು
ತಾರೀಖು.... .... ಲ್ಲು ಕೇಳಿ ಸರ್ಟಿಫಿಕೇಟ್ ಪಡೆಯುತಕ್ಕ
ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ
ಸದರೀ ಮೃತಪಟ್ಟ.... ....
.... ರ ಆಸ್ತಿಗೆ ಹಕ್ಕುದಾರರಾದ
ವಿಶಿಷ್ಟರೂ ಈ ಕೋರ್ಟಿನಲ್ಲಿ ಇರಬೇಕೆಂದು
ಇದರಿಂದ ತಿಳಿಯಪಡಿಸಿ ಇದೆ.

ಸನ್ ೧೯೧ .... ನೆ ಇಸವಿ .... ತಿಂಗಳು
.... ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ
ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಜಡ್ಜ

ಗೋಣೀಬೀಡಿನ ಹತ್ತಿರದ ನೆಲ್ಲಿಸರ ಗ್ರಾಮದ ರೈತನೊಬ್ಬ 1932ನೆಯ ಇಸ್ವಿ, ಆಗಸ್ಟ್ ತಿಂಗಳ 23ನೆಯ ತಾರೀಖಿನಲ್ಲಿ ಮಾಡಿಕೊಂಡ ಅರ್ಜಿ ಇದು. ಈ ದಾಖಲೆ ಸು. 90 ವರ್ಷಗಳ ಹಿಂದೆ ಹಳೆಯ ಮೈಸೂರು ಸಂಸ್ಥಾನದಲ್ಲಿ ಕನ್ನಡ ರಾಜ್ಯಭಾಷೆಯಾಗಿ ಎಲ್ಲ ಹಂತಗಳಲ್ಲಿಯೂ ವಿಜೃಂಭಿಸಿತ್ತು ಎನ್ನುವುದಕ್ಕೆ ಸಾಕ್ಷಿಯಾಗಿದೆ. ಅಂದಿನ ಬಳಕೆಯ ನಾಡು ನುಡಿಯ ಮೇಲೆ, ಅದರಲ್ಲಿಯೂ ಸರಕಾರಿ ಕಾಗದ ಪತ್ರಗಳ ಕನ್ನಡದ ಮೇಲೆ ಅರಬ್ಬಿ, ಫಾರ್ಸಿ ಮತ್ತು ಇಂಗ್ಲೀಷ್ ಭಾಷೆಗಳ ಶಬ್ದಗಳು ಹೇಗೆ ಪ್ರಭಾವ ಬೀರಿದ್ದವೆನ್ನುವುದಕ್ಕೆ ಈ ದಾಖಲೆಯು ನಮೂನೆ ನಿದರ್ಶನ

ವಾಗಿದೆ; ರಾಜ್ಯಭಾಷೆ ಕನ್ನಡ ಬೆಳೆದು ಬಂದ ಬಗೆ ಭಾಷಾ ಶಾಸ್ತ್ರೀಯ ಅಧ್ಯಯನದ ದೃಷ್ಟಿಯಿಂದ ಬಹಳ ಮಹತ್ವಪೂರ್ಣವಾಗಿದೆ.

ಈ ದಾಖಲೆಯ ಪತ್ರದಲ್ಲಿ ಬಳಕೆಯಾಗಿರುವ ಅರಬ್ಬಿ ಮತ್ತು ಫಾರ್ಸಿ ಶಬ್ದಗಳ ಅರ್ಥ ವಿವರಣೆಯಿಲ್ಲಿ ಪ್ರಸ್ತುತ:

1) ಅರ್ಜಿ—(ಅರಬ್ಬಿ): ನಿವೇದನ ಇಲ್ಲವೆ, ಪ್ರಾರ್ಥನಾಪತ್ರ, ವಿನಂತಿ, ನಿವೇದನೆ, ಪ್ರಾರ್ಥನೆಯ ಅರ್ಥದಲ್ಲಿರುವ 'ಅರ್ಜ್' ಎಂಬ ಅರಬ್ಬಿ ಶಬ್ದ ಇದಕ್ಕೆ ಮೂಲ.

2) ಅರ್ಜೀದಾರ: ಅರ್ಜಿ ಸಲ್ಲಿಸುವವ. ಇಲ್ಲಿ ಅರ್ಜಿ ಅರಬ್ಬಿಯಾದರೆ, 'ದಾರ' ಸಂಸ್ಕೃತದಲ್ಲಿಯಂತೆ 'ಮತುಪ್' ಪ್ರತ್ಯಯ—ಉಳ್ಳ ಅರ್ಥದ ಉಪಪದ ಅವ್ಯಯ ಫಾರ್ಸಿಯದು. ಫಾರ್ಸಿ—ಅರಬ್ಬಿ—ಹಿಂದಿ ಭಾಷೆಗಳ ತ್ರಿವೇಣಿ ಸಂಗಮ ವಾಗಿರುವ ಉರ್ದು ಹೈದರ—ಟೀಪು ಸುಲ್ತಾನರ ಆಳಿಕೆಯಲ್ಲಿ ಮೈಸೂರು ಸಂಸ್ಥಾನದ ಸರಕಾರಿ ಭಾಷೆಯಾಗಿ ಬಳಕೆಗೊಂಡಿತು.

3) ಇಸ್ವಿ: ಅರಬ್ಬಿ ಮೂಲದ 'ಈಸವೀ'ಯ ತದ್ಭವ. 'ಈಸಾ' ಕ್ರಿಸ್ತ (Christ) ದ ತದ್ಭವ. ಕ್ರೈಸ್ತನಿಗೆ ಸಂಬಂಧಪಟ್ಟ ಶತಕವರ್ಷ ಕ್ರಿಸ್ತಶಕ, ಅದೇ ಈಸವಿ—ಇಸ್ವಿ. ಅದಕ್ಕೆ ಸನ್ ಪದ ಜೋಡಿಸುವುದು ರೂಢಿ. ಅದು ವರ್ಷ—ಸಂವತ್ಸರದ ಅರ್ಥದ ಅರಬ್ಬಿ ಶಬ್ದ. ಇಸ್ವಿಸನ್ ಎಂದರೆ ಕ್ರಿಸ್ತಶಕ.

4) ಖಾಯಿಷ್: ಇದರ ಅರಬ್ಬಿ ಮೂಲ 'ಖ್ವಾಹಿಷ್'; ಇದರಿಂದ 'ಖ್ವಾಹಿಷ್ ಮಂದ್' ಎಂಬ ವಿಶೇಷಣ ರೂಪುಗೊಳ್ಳುತ್ತದೆ. 'ಮಂದ್' ಸಂಸ್ಕೃತದ 'ಮತುಪ್' (ಉಳ್ಳ ಅರ್ಥದ) ಉಪಪದ. ಅದರಿಂದ ಮಾತ್, ಮಂತ, ವತ್, ವಾನ್ ರೂಪಗಳು ಬೆಳೆದು ಬಂದಿವೆ. ಉದಾಹರಣೆಗೆ: ಇನ್ನೊಂದು ಬಹಳ ಬಳಕೆಯಾಗಿರುವ ಶಬ್ದ 'ಅಕ್ಲ್‌ಮಂದ್'; 'ಅಕ್ಲ್' ಬುದ್ಧಿಯ ಅರ್ಥದಲ್ಲಿಯ ಅರಬ್ಬಿ ಶಬ್ದ. ಅಕ್ಲ್‌ಮಂದ್—ಬುದ್ಧಿವಂತ.

5) ಜಿಂದಗಿ: ಫಾರ್ಸಿಯ ಈ ಶಬ್ದ ಜೀವನ ಮತ್ತು ಜೀವಿತಕಾಲ (ವಯಸ್ಸು) ಅರ್ಥಗಳಲ್ಲಿದೆ. ಇಲ್ಲಿ ಜೀವನೋಪಾಯ, ಆಸ್ತಿಯ ಅರ್ಥವೇ ಪ್ರಸ್ತುತ. ಫಾರ್ಸಿಯಲ್ಲಿ ಇದೇ ಅರ್ಥಕೊಡುವ ಇನ್ನೊಂದು 'ಜಿಂದಗಾನೀ' ಶಬ್ದವೂ ಇದೆ.

6) ತಾರೀಖ್: ಅರಬ್ಬಿ ಮೂಲದ 'ತವಾರೀಖ್'ದ ಅಪಭ್ರಂಶ. ತೇದಿ ದಿನಾಂಕದ ಅರ್ಥದಲ್ಲಿದೆ. 'ತಾರೀಕು' ಇದರ ಇನ್ನೊಂದು ಕನ್ನಡದಲ್ಲಿಯ ತದ್ಭವ

ರೂಪ.

7) ದರಖಾಸ್ತು (ದರ್ಖಾಸ್ತು) : ಫಾರ್ಸಿಯ ಈ ಶಬ್ದದ ಅರ್ಥ ಅರ್ಜಿ—ಪ್ರಾರ್ಥನೆ. ಇಲ್ಲಿ ಎರಡು ಪದಗಳು—ದರ್ + ಖಾಸ್ತ್. ದರ್ ಎಂದರೆ ಒಳಗೆ. ಫಾರ್ಸಿಯ ಈ ಪದ ಸಂಸ್ಕೃತದ ಅಂತರ್ (ಅಂತಸ್) ಎಂಬ ಅವ್ಯಯವನ್ನು ಹೋಲುತ್ತದೆ. ಹಿಂದಿಯ 'ಅಂದರ್' ಸಂಸ್ಕೃತದ 'ಅಂತರ'ದ ತದ್ಭವ. ಅದೇ ಫಾರ್ಸಿಯಲ್ಲಿ ಅ ಲೋಪವಾಗಿ, ತಕಾರಕ್ಕೆ ದಕಾರದ ಆದೇಶವಾಗಿದೆ. 'ಕಚಟತಪ'ಗಳಿಗೆ ಪ್ರಾಕೃತದಲ್ಲಿ ಅನುಕ್ರಮವಾಗಿ ವರ್ಗೀಯ 'ಗಜಡದಬ'ಗಳ ಆದೇಶದ ನಿಯಮ ಸಹಜ. 'ಖಾಸ್ತ್' ಇಚ್ಛೆ—ಕಾಮನೆ ಅರ್ಥಗಳ 'ಖ್ವಾಸ್ತ್' ಎಂಬ ಫಾರ್ಸಿ ಶಬ್ದದ ಅಪಭ್ರಂಶ. 'ದರ್ಖಾಸ್ತ್' ಅಂತರ್ನಿವೇದನೆಯ ಅರ್ಥದ ಸೂಚಕ.

8) ದಸ್ತುಖತ್ : ಫಾರ್ಸಿಯ 'ದಸ್ತ್' ಹಸ್ತದ ಅರ್ಥದಲ್ಲಿದೆ; 'ಖತ್' ಅರಬ್ಬಿಯ ಶಬ್ದ ಅಕ್ಷರ—ಬರವಣಿಗೆಯ ಅರ್ಥ ಕೊಡುತ್ತದೆ. ಇದು 'ಹಸ್ತಾಕ್ಷರ' (Signature) ಅರ್ಥದಲ್ಲಿಯೇ ರೂಢ. ಇದೇ ಅರ್ಥ ಕೊಡುವ 'ಸಹಿ' ಅರಬ್ಬಿಯ 'ಸಹೀಹ್' ಶಬ್ದದ ತದ್ಭವ.

9) ನಮೂನಾ : ಫಾರ್ಸಿ 'ನಮೂನಹ್'—ನಮೂನ : 'ದ' ತದ್ಭವ. ಇದು ಇಂಗ್ಲಿಷ್‌ನ (Sample)ಗೆ ಸಮಾನ. ಇದರ ಇನ್ನೊಂದು ರೂಪ ನಮೂನೆ. ಆಕಾರಾಂತ ವಿದೇಶಿ ಶಬ್ದಗಳು ಕನ್ನಡದಲ್ಲಿ ಸಾಮಾನ್ಯವಾಗಿ ಏಕಾರಾಂತವಾಗುತ್ತವೆ. (ಉದಾ : ಸಂಸ್ಕೃತದ ಶಾಲಾ—ಶಾಲೆ).

10) ಮೊಹರ್‌ನಿಸಿ : ಫಾರ್ಸಿಯ 'ಮುಹ್ರ್'ದ ತದ್ಭವ. ಮೊಹರ್—ರಾಜಾಂಕಿತದ ಮುದ್ರೆ Stamp; ಅದು ಸ್ವರ್ಣಮುದ್ರೆ ಅಶ್ರಫಿ (ಫಾ) ಅರ್ಥದಲ್ಲಿಯೂ ಪ್ರಯುಕ್ತ. 'ನಿಸಿ' ಗುರುತಿನ ಅರ್ಥದ ಫಾರ್ಸಿ ನಿಶಾನ್ ಅಥವಾ ನಿಶಾನಿಯ ತದ್ಭವ. ಮೊಹರಿನ ನಿಶಾನಿಯ ಅರ್ಥದ ಸಮಸ್ತಪದವಿದು.

11) ವಸೂಲ್ : ಅರಬ್ಬಿಯ ಈ ಶಬ್ದದ ಅರ್ಥ—ಪ್ರಾಪ್ತಿ : ಸಾಲದ ಬರತಕ್ಕ ಹಣ ಪಡೆಯುವಿಕೆ ಅರ್ಥದಲ್ಲಿಯ ವಸೂಲೀ—ಬಾಕೀ, ಬಾಕೀ—ವಸೂಲೀ ಶಬ್ದಗಳು ಪ್ರಯೋಗದಲ್ಲಿವೆ.

12) ಸದರಿ : ಅರಬ್ಬಿಯ 'ಸದ್ರ್' ಶಬ್ದದಿಂದ ರೂಪುಗೊಂಡಿದೆ. ಸದರ್ (1) ಎದೆ, ಹೃದಯ; (2) ಸಮ್ಮುಖ, ಮುಂಭಾಗ; (3) ಮನೆಯ ಮುಂದಿನ ಪ್ರಾಂಗಣ, ಅಂಗಳ; (4) ಪ್ರಧಾನ, ಮುಖ್ಯ, ಅಧ್ಯಕ್ಷ; (6) ಸಭೆಯಲ್ಲಿ—ದರ್ಬಾರಿನಲ್ಲಿ ಅಧ್ಯಕ್ಷ ಇಲ್ಲವೆ ಬಾದಶಾಹ (ಮಹಾರಾಜ) ಕುಳಿತುಕೊಳ್ಳುವ ಎತ್ತರದ ಸಿಂಹಾಸನ; ಸೇನೆಯ ಬೀಡು, ಪಾಳೆಯ (ಪಾಳ್ಯ), Cantonment ಛಾವಣಿ; (7) ವಿಶೇಷವಾದ (ವಿಶಿಷ್ಟ) ಖಾಸ್; (8) ಶ್ರೇಷ್ಠ, ದೊಡ್ಡ, ಸದರಿ ಸದರ್

ಪದನಿಷ್ಪನ್ನ ವಿಶೇಷಣ. ಇದು ವಿಶಿಷ್ಟ, ಎದುರಿಗಿರುವ, ಪ್ರಸ್ತುತ ಎಂಬರ್ಥದಲ್ಲಿದೆ. ಇಂಗ್ಲಿಷಿನ Particular ಶಬ್ದಕ್ಕೆ ಸಮಾನವಾಚಿ. 'ಇ' ಸಂಬಂಧಿತ, ಉಳ್ಳ ಅರ್ಥದ ಪ್ರತ್ಯಯ.

13) ಹಕ್ಕುದಾರ : ಹಕ್ಕು ಹೊಂದಿದವ, ಅಧಿಕಾರಸ್ಥ, ಆಸ್ತಿ ಮೊದಲಾದವುಗಳ ಒಡೆತನಕ್ಕೆ ಇಲ್ಲವೆ ಉತ್ತರಾಧಿಕಾರಕ್ಕೆ ಸಂಬಂಧಪಟ್ಟ ವ್ಯಕ್ತಿ. ಇದರಲ್ಲಿ ಹಕ್—ದಾರ್ ಎಂಬ ಎರಡಂಶಗಳಿವೆ. ಹಕ್ ಅರಬ್ಬಿಯ ಬಹಳ ವಿಶಿಷ್ಟವಾದ ನಾನಾರ್ಥ ಶಬ್ದ. ಅದು (1) ಸತ್ಯ, (2) ಸ್ವತ್ವ, ಅಧಿಕಾರ ಮತ್ತು (3) ವಸ್ತುಸ್ಥಿತಿ ಮೊದಲಾದ ಅರ್ಥಗಳನ್ನು ಒಳಗೊಂಡಿದೆ. ಪ್ರಸ್ತುತದಲ್ಲಿ ಸ್ವತ್ವ—ಅಧಿಕಾರದ ಅರ್ಥ ಮುಖ್ಯ. ಇದರ ಫಾರ್ಸಿ ಉಪಪದ ದಾರ್ ಉಳ್ಳವ ಅರ್ಥದಲ್ಲಿದೆ.

ಮೇಲಿನದು ಹಕ್ ಎಂಬ ಶಬ್ದದ ಲೌಕಿಕ—ವ್ಯಾವಹಾರಿಕ ಅರ್ಥ. ಅದಕ್ಕೆ ಆಧ್ಯಾತ್ಮಿಕ ಅನುಭಾವದ ರಹಸ್ಯಮಯ ಒಳ ಅರ್ಥ ಸೂಫಿ ಸಾಧನೆಯಲ್ಲಿ ಬಹಳ ವಿಶಿಷ್ಟವಾಗಿದೆ. ಸೂಫಿಸಂತರು ಪ್ರೇಮಮಯ ಪರಮಾತ್ಮನನ್ನು ಕಾಣಲು ಏಳು ಸ್ಥಳಗಳ ಸಾಧನೆಯಲ್ಲಿ ಹಂತ ಹಂತವಾಗಿ ಮೇಲೇರಬೇಕಾಗುತ್ತದೆ. (1) ಉಬೂದಿಯತ್—ಸಂತರ ಸೇವೆಯಿಂದ ಪಡೆಯುವ ಹೃದಯ ಪಾವಿತ್ರ್ಯ. (2) ಇಶ್ಕ್ (ಅರಬ್ಬಿ)—ಪರಮಾತ್ಮನನ್ನು ಕಾಣುವ ಪ್ರೇಮಾಸಕ್ತಿ; (3) ಜುಹದ್ (ಅ)—ಸಂಸಾರ ನಿರಸನ, ವಿರಕ್ತಿ; (4) ಮಾರ್ಫತ್ (ಅ) ಸರ್ವಶಕ್ತ ಪ್ರಭು ಪರಮಾತ್ಮನ ಧ್ಯಾನ; (5) ವಜ್ದ್ (ಅ)—ಪರಮನ ಧ್ಯಾನದಲ್ಲಿ ಪರವಶವಾಗುವ ಸ್ಥಿತಿ; (6) ಹಕೀಕತ್ (ಅ) ಪರಮನಿಜದರಿವು; ಸ್ವಸ್ವರೂಪ ಜ್ಞಾನ; (7) ವಸ್ಲ್ (ಅ)—ಪರಮನ ಸಾಕ್ಷಾತ್ಕಾರ, ಜೀವ - ಪರಮರ ಯೋಗ—ಸಾಮರಸ್ಯ; ಐಕ್ಯದ ಈ ಸ್ಥಿತಿಯಲ್ಲಿಯೂ ಫನಾ ಮತ್ತು ಬಕಾ ಎಂಬ ಹಂತಗಳಿವೆ. 'ಫನಾ—ಫೀ—ಅಲ್ಲಾಹ' ಎಂಬ ಧ್ಯಾನಸ್ಥಿತಿಯಲ್ಲಿ ಸಾಧಕ—ಫಕೀರ ಬಾಹ್ಯದ ಪರಿವೆಯಿಲ್ಲದೆ ಅಂತರದಲ್ಲಿ ಪರಮದ ನೆನಹಿನಲ್ಲಿ ತನ್ಮಯನಾಗುತ್ತಾನೆ; ಇದಕ್ಕೂ ಮುಂದಿನ ತುರೀಯ ಪರಮೈಕ್ಯದ ಅಂತಿಮ ಸ್ಥಿತಿ 'ಬಕಾ' (ಅ) ಎನಿಸಿದೆ. ಅಲ್ಲಿ ಪರಮನೊಡನೆ ಅತ್ಯಂತ ಸಂಯೋಗದ; ಅದು ಹುಟ್ಟು—ಸಾವುಗಳನ್ನು ಮೀರಿದ ಅಮರ ಪದ. ಪರಮಾನಂದವನ್ನು ಅನುಭವಿಸುವ ಪರಮ ಮುಕ್ತಿಯ ಸಮಾಧಿಯ ಸ್ಥಿತಿ; ಪಾರಮಾರ್ಥಿಕವಾಗಿ 'ಹಕ್' ಎಂದರೆ ಪ್ರೇಮಮಯ ಸತ್ಯದ ಅರಿವಿನ ಸ್ಥಿತಿ. ಸತ್ಯಸ್ವರೂಪ ನಿತ್ಯ ಪರವಸ್ತು. ಅದನ್ನು ಸಾಧನೆಯ ಹಂತಗಳಲ್ಲಿ ಅನುಭವಿಸುವ ಬಗೆಯೇ 'ಹಕೀ ಕತ್' ಎನಿಸಿದೆ.

14) ಹಾಜರ್ : ಇದು ಅರಬ್ಬಿಯ 'ಹಾಜಿರ್'ದ ತದ್ಭವ; ಸಮ್ಮುಖ

ಎದುರಿಗಿರುವ, ಉಪಸ್ಥಿತ, ವಿದ್ಯಮಾನ ಮುಂತಾದ ಅರ್ಥಗಳಲ್ಲಿದೆ. ಇಂಗ್ಲಿಷಿನ Present ಇದಕ್ಕೆ ಸರಿಯಾದ ಪರ್ಯಾಯ.

ಇಲ್ಲಿ ಕನ್ನಡದ ಅನ್ನು, ಇಂದ, ಕ್ಕೆ–ಗೆ, ಅಲ್ಲಿ, ಒಡನೆ, ಮೇಲೆ ಎಂಬ ಕಾರಕ ವಿಭಕ್ತಿ, ಪ್ರತ್ಯಯ ಮತ್ತು ಆಗು, ಇರು, ಕೊಡು, ಕೇಳು. ತಿಳಿ, ಪಡಿಸು, ಪಡೆ, ಬರು ಎಂಬ ಧಾತುಗಳ ಕ್ರಿಯಾರೂಪಗಳನ್ನು ಬಿಟ್ಟರೆ ಉಳಿದೆಲ್ಲ ಪದಗಳು ಸಂಸ್ಕೃತ, ಅರಬ್ಬಿ, ಫಾರ್ಸಿ ಮತ್ತು ಇಂಗ್ಲಿಷ್ ಭಾಷೆಯವು. ಆಸ್ತಿ, ತಿಂಗಳು, ಸಾಲ ಎಂಬ ಕೆಲವೇ ನಾಮಪದ ಮತ್ತು ಇದು, ನಾವು ಎಂಬ ಸರ್ವನಾಮಗಳ ರೂಪಗಳು ಕನ್ನಡದವು. ಅಂಕೆಗಳೆಲ್ಲ ಕನ್ನಡದವಾಗಿರುವುದು ಗಮನಿಸಬೇಕಾದ ವಿಷಯ.

ಮೃತ, ಸ್ಥಳ, ವಾಸಸ್ಥ, ಬಾಧ್ಯತೆ, ವಿಮರ್ಶೆ, ಕಾಲ, ವಿಶಿಷ್ಟ, ಪ್ರಕಾರ ಇವು ಎಂಟು ಸಂಸ್ಕೃತ ತತ್ಸಮ ಶಬ್ದಗಳು.

ರೆಗ್ಯುಲೇಷನ್, ಸರ್ಟಿಫಿಕೇಟ್, ನೋಟಿಸ್, ಸಿವಿಲ್, ನಂಬರ್, ಕೋರ್ಟು, ಜಡ್ಜ್ ಎಂಬ ಇಂಗ್ಲಿಷ್ ಪದಗಳ ಹೊರತಾಗಿ ಉಳಿದವೆಲ್ಲ ಅರಬ್ಬಿ ಮತ್ತು ಫಾರ್ಸಿಯವು.

ಹದಿನಾರನೆಯ ಶತಮಾನದಿಂದ ಹತ್ತೊಂಬತ್ತನೆಯ ಶತಮಾನದ ವರೆಗೂ ದಿಲ್ಲಿಯ ಮೊಗಲ ಬಾದಶಾಹರ ಭಾಷೆಯಾಗಿದ್ದ ಫಾರ್ಸಿಯ ಪ್ರಭಾವ, ಸಾಮಾನ್ಯವಾಗಿ ಮೊದಲು ಮೊಗಲರ ಸಾಮಂತರಾಗಿದ್ದು ಕ್ರಮೇಣ ಸ್ವತಂತ್ರರಾದ ಸುಲ್ತಾನರ ಆಳಿಕೆಯ ದಖನ್—ದಕ್ಷಿಣ ಭಾರತದ ರಾಜ್ಯಗಳ ಭಾಷೆಗಳ ಮೇಲೆ ಸಹಜವಾಗಿತ್ತು; 18ನೆಯ ಶತಕದಲ್ಲಿ (1761–1782) ಮೈಸೂರು ರಾಜ್ಯದಲ್ಲಿ ಅಧಿಕಾರ ನಡೆಸಿದ ಹೈದರಾಲಿಗಿಂತಲೂ ಮೊದಲು ಕೆಲವು ಕಾಲ ಚನ್ನಗಿರಿ—ಬೆಂಗಳೂರು ಪ್ರಾಂತಗಳು ವಿಜಾಪುರದ ಆದಿಲಶಾಹಿ ಸುಲ್ತಾನರ ಆಳಿಕೆಯಲ್ಲಿದ್ದವು. ಅವರ ಪ್ರತಿನಿಧಿಯಾಗಿ ಬಂದ ಶಾಹಜಿಯ ಶಾಸನಕಾಲದಲ್ಲಿಯೇ (1632–1644) ವಿಜಾಪುರದ ಆಡಳಿತ ಭಾಷೆಯಾದ ದಖಿನಿ (ದಕ್ಷಿಣದ ಭಾಷೆ)—ಉರ್ದು ಬಳಕೆಗೊಂಡಿತು. ಅದನ್ನು ವಿಜಾಪುರ–ಗುಲಬರ್ಗ ರಾಜ್ಯಗಳ ಬಂದೆ ನವಾಜ್ ಮೊದಲಾದ ಸೂಫಿ ಸಂತಕವಿಗಳು 'ಹಿಂದವಿ' ಎಂದು ಕರೆದರು. ಜನಪದ ನುಡಿಯಾದ ಉರ್ದುವಿನ ಜನನಿ 'ಹಿಂದವಿ' ಮೊದಲು ಕನ್ನಡನಾಡಿನಲ್ಲಿಯೇ ಕಾವ್ಯಭಾಷೆಯಾಗಿ ವಿಕಾಸಗೊಂಡುದು ವಿಶೇಷ. ದೇಸಿಯ ಶಬ್ದಗಳೊಡನೆ ಅರಬ್ಬಿ–ಫಾರ್ಸಿ ಶಬ್ದಗಳ ಜೋಡಣೆಯಾಗಿ, ಅದೇ ಸಂಕರ ಲಿಪಿಯನ್ನು ಹೊಂದಿ ಬೆಳೆಯಿತು.

ಹೈದರನ ತರುವಾಯ ಟಿಪ್ಪು ಸುಲ್ತಾನನು (1782–1799) ಉರ್ದುವನ್ನೇ ತನ್ನ ಆಡಳಿತ ಭಾಷೆಯನ್ನಾಗಿ ಚಲಾವಣೆಗೆ ತಂದನು. 'ಉರ್ದು' ದಿಂದ ಹುಟ್ಟಿ

ದುದು ಉರ್ದು. 'ಉರ್ದು' ತುರ್ಕಿಭಾಷೆಯ ಶಬ್ದ. ಅದು ಸೇನೆಯು (ಫೌಜ್) ಬೀಡುಬಿಟ್ಟ—ಪಾಳೆಯದ (Cantonmnet) ಅರ್ಥದಲ್ಲಿದೆ. ದಿಲ್ಲಿಯ ದಂಡಿನ ಪ್ರದೇಶದ ಬಜಾರದಲ್ಲಿ ಸಾಮಾನ್ಯವಾಗಿ ಹಿಂದು-ಮುಸಲಮಾನ-ಫಾರ್ಸಿಗಳು ವಾಸವಾಗಿರುತ್ತಿದ್ದರು. ಅವರೆಲ್ಲ ಬಳಸಿದ ಒಂದು ತೆರನಾದ ಮಿಶ್ರಿತ-ಮಿಸಾಳ ಆಡುನುಡಿಯೇ 'ಉರ್ದುವಾಗಿ[1] ರೂಪುಗೊಂಡಿತು.

ಟಿಪ್ಪುವನ್ನು ಆಂಗ್ಲರು ಸೋಲಿಸಿ ಮೈಸೂರು ಸಂಸ್ಥಾನದ ಆಡಳಿತ ವಹಿಸಿಕೊಂಡ ಮೇಲೆ 18ನೆಯ ಶತಕದಲ್ಲಿ ಇಂಗ್ಲಿಷಿನ ಪ್ರಭಾವ ಕನ್ನಡದ ಮೇಲಾಯಿತು. ಇಂಗ್ಲಿಷರು ತಮ್ಮ ಭಾಷೆಯನ್ನು ಆಡಳಿತದಲ್ಲಿ ಒತ್ತಾಯಿಸಿ ಜನರ ಮೇಲೆ ಹೇರಲಿಲ್ಲ. ಅವರು ಬಹಳ ಚಾಣಾಕ್ಷ ಹಾಗೂ ದಕ್ಷ ಆಡಳಿತಗಾರರು. ಜನರಿಗೆ ಬೇಡವಾದುದನ್ನು ಅವರೆಂದೂ ದಬ್ಬಾಳಿಕೆಯಿಂದ ಒತ್ತಾಯಿಸಲಿಲ್ಲ. ಭಾಷೆ ರಾಜ್ಯವ್ಯವಹಾರದ —ಶಾಸನಾಂಗದ ಬಹು ಮುಖ್ಯವಾದ ಮಾಧ್ಯಮ ಆ ಬಗ್ಗೆ ಅವರು ಬಹಳ ವಿಶಾಲ ಮನೋಭಾವ ತಾಳಿದ್ದರು. ಕೋರ್ಟು—ಕಚೇರಿಗಳ ವ್ಯವಹಾರಗಳನ್ನು ಜನರು ತಿಳಿಯುವ ಭಾಷೆಯಲ್ಲಿ ನಡೆಸಿದರು. ತಾವು ಅಧಿಕಾರಕ್ಕೆ ಬರುವ ಪೂರ್ವದಲ್ಲಿ ದಿಲ್ಲಿಯ ಬಾದಶಾಹರ ಫಾರ್ಸಿಯಿಂದ ಪ್ರಭಾವಿತವಾದ ಉರ್ದು ಉತ್ತರದ ಲಖನೌ ಮತ್ತು ದಕ್ಷಿಣದ ಭಾಗ್ಯನಗರೀ (ಹೈದರಾಬಾದ್) ಗುಲಬರ್ಗ—ವಿಜಾಪುರಗಳಲ್ಲಿಯೂ ಜನಪದ ಭಾಷೆಯೊಂದಿಗೆ ಲೋಕಪ್ರಿಯವಾಗಿತ್ತು. ಅದರೊಂದಿಗೆ ಇಂಗ್ಲಿಷ್ ಭಾಷೆಯ ಶಬ್ದಗಳೂ ಕೂಡಿದವು. ಹೀಗೆ ಈ ಆಡಳಿತ ಭಾಷೆಯಲ್ಲಿ ನುಡಿಗಳ ತ್ರಿವೇಣಿ ಸಂಗಮ[2] ಅಪೂರ್ವವೆನಿಸಿತು. ಆಂಗ್ಲರು ಅದನ್ನೇ ಉಳಿಸಿ ಬೆಳೆಸಿದರು. ಪ್ರಾದೇಶಿಕ ಲಿಪಿ ಕನ್ನಡಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದರು.

ಧಾರವಾಡದಿಂದ ಮುಂಬಯಿಯ ವರೆಗೂ ಒಂದು ಕಾಲದಲ್ಲಿ ಕನ್ನಡವೇ ಆಡಳಿತದ ಸಂಪರ್ಕ ಭಾಷೆಯಾಗಿದ್ದಿತೆಂದರೆ ಆಚ್ಚರಿಯಲ್ಲವೆ ?

ಕರ್ನಾಟಕ ನಮ್ಮ ರಾಜ್ಯ. ಕನ್ನಡ ನಮ್ಮ ತಾಯಿ ನುಡಿ ಅದು ದ್ರಾವಿಡ

---

1 ಪಾಣಿನಿಯ ಕಾಲದಿಂದ ದೇಶೀಯ (ಸಿಂಧು-ಪಂಚನದ ದೇಶಗಳ 'ಭಾಷೆ'ಯಾಗಿ ಬೆಳೆದು ಬಂದ ಪ್ರಾಕೃತ (ಪ್ರಕೃತಿ-ಪ್ರಜೆ) ಜನವಾಣಿ ಅಪಭ್ರಂಶವೂ ಎನಿಸಿದೆ. ಅದೇ ಹಿಂದಿಗೆ ಮೂಲ. 'ಉರ್ದು'ವಿಗೆ ಹಿಂದಿಯದೇ ವ್ಯಾಕರಣ-ನುಡಿಕಟ್ಟು. ಅರಬ್ಬಿ-ಫಾರ್ಸಿ ಶಬ್ದ ಬಹುಲವಾದ ಹಿಂದಿಯನ್ನೇ ಫಾರ್ಸಿಯ ಸಂಕರ ಲಿಪಿಯಲ್ಲಿ ಬರೆದರೆ ಅದೇ ಉರ್ದುವೆನಿಸುತ್ತದೆ.

2 ಹದಿನೇಳನೆಯ ಶತಕದಲ್ಲಿ ಉತ್ತರ ಕರ್ನಾಟಕದಲ್ಲಿ ಮರಾಠರ ಶಾಸನವೂ ಕೆಲಕಾಲವಿತ್ತು. ಅದರಿಂದಾಗಿ ಮೋಡಿ ಲಿಪಿಯೂ ವ್ಯವಹಾರದಲ್ಲಿತ್ತು. ಮರಾಠಿ ಶಬ್ದಗಳೂ ಕನ್ನಡದಲ್ಲಿ ನುಸುಳಿ ಬಂದವು.

ಕುಲದ ಪ್ರಬುದ್ಧ ಭಾರತಿ. ಅದು ನಮ್ಮ ರಾಜ್ಯ ಸರಕಾರದ ಆಡಳಿತ ಭಾಷೆಯಾಗಿ ಎಲ್ಲ ಹಂತಗಳಲ್ಲಿಯೂ ವಿಜೃಂಭಿಸಬೇಕು. ಆ ಬಗ್ಗೆ ನಮ್ಮ ಮಂತ್ರಿಗಳು, ಶಾಸಕರು ಬಹಳ ಅಸಡ್ಡೆಯಿಂದ ವರ್ತಿಸುತ್ತಿರುವುದು ನಾಚಿಕೆಗೇಡು. ಉಳಿದ ಯಾವ ರಾಜ್ಯದಲ್ಲಿಯೂ ನಾಡುನುಡಿಯ ಬಗ್ಗೆ ಈ ತೆರನಾದ ಅನಾದರಗಳನ್ನು ನಾವು ಕಾಣೆವು. ನಮ್ಮ ರಾಜ್ಯದ ಹಿರಿಯ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಕನ್ನಡದ ಏಳ್ಗೆಗಾಗಿ ಶ್ರೀ ಕೆ. ಹನುಮಂತಯ್ಯನವರ ಕಾಲದಿಂದ ಮಾಡಿದ ಯೋಜನೆಗಳು ಸಮರ್ಪಕವಾಗಿ ಕಾರ್ಯಗತವಾಗುತ್ತಿಲ್ಲ. ಇದನ್ನೆಲ್ಲ ಸರಿಪಡಿಸುವ ಹೊಣೆ ಎಚ್ಚತ್ತ ಕನ್ನಡಿಗರದು. ಕನ್ನಡದ ಬಗ್ಗೆ ಅನಾದರ ಹೊಂದಿದವರನ್ನು, ಅವರು ಯಾರೇ ಇರಲಿ, ಅವರ ಮೇಲೆ ಕೂಡಲೇ ಕ್ರಮ ತೆಗೆದುಕೊಂಡು, ಉಳಿದವರೂ ಎಚ್ಚರದಿಂದ ಇರುವಂತೆ ಮಾಡಬೇಕು. ಕನ್ನಡದ ಹಿತರಕ್ಷಣೆಗಾಗಿ ಅಭಿಮಾನಿ, ಪ್ರಾಮಾಣಿಕ ಹಾಗೂ ತಜ್ಞರ ಕಾವಲು ಸಮಿತಿಯೊಂದನ್ನು ಸುವ್ಯವಸ್ಥಿತವಾಗಿ ಸಂಘಟಿಸಬೇಕು. ಆಡಳಿತ ವಿಭಾಗದಲ್ಲಿ ತೆರೆಯ ಮರೆಯಲ್ಲಿರುವ ಕನ್ನಡದ ಶತ್ರುಗಳನ್ನು ಗುರುತಿಸಿ ಅವರನ್ನು ನಿರ್ಭಯವಾಗಿ ಶಿಕ್ಷೆಗೆ ಒಳಪಡಿಸುವ ಏನೆಲ್ಲ ವಿಧಾನಗಳನ್ನು ಕೂಡಲೇ ಕೈಗೊಳ್ಳಬೇಕು.

ಕನ್ನಡವನ್ನು ಜನಪ್ರಿಯಗೊಳಿಸಬೇಕು. ಆಡಳಿತ ಶಬ್ದಕೋಶವನ್ನು, ಕೇಂದ್ರ ಸರಕಾರದ ಹಿಂದಿಯಲ್ಲಿಯ ನಿಘಂಟುವಿನ ಅಂಧಾನುಕರಣೆಯಲ್ಲಿ ಅಲ್ಲ, ಪ್ರಾಮಾಣಿಕ ಹಾಗೂ ವೈಜ್ಞಾನಿಕ ಪದ್ಧತಿಯಲ್ಲಿ ಸಮರ್ಥ ಭಾಷಾವಿದರಿಂದ ಬರೆಯಿಸಿ ಪ್ರಕಟಿಸಬೇಕು. ಅದು ಶ್ರೀಸಾಮಾನ್ಯನ ಕೈಗೂ ಎಟುಕುವ ಸುಲಭ ಬೆಲೆಯಲ್ಲಿರಬೇಕು.

ಆಡಳಿತ ಭಾಷೆಯ ಶಬ್ದಗಳು ಯಾರಿಗೂ ತಿಳಿಯದ ಸುಖೋಚ್ಚಾರಣೆಯಿಲ್ಲದ ಸಂಸ್ಕೃತಮೂಲದವು ಆಗಿರಬಾರದು. ಅವು ಬಳಕೆಯ ಶಬ್ದಗಳಾಗಿರಬೇಕು. ಶಬ್ದಗಳು ಉರ್ದು, ಹಿಂದಿ, ಮರಾಠಿ, ಇಂಗ್ಲಿಷ್ ಯಾವುದೇ ಮೂಲವಾಗಿರಲಿ, ಚಲಾವಣೆಯಲ್ಲಿರುವ ಜನರು ಬಳಸುವ ಅವನ್ನು ಕನ್ನಡದ ಭಂಡಾರಕ್ಕೆ ತುಂಬಿಕೊಂಡು ಮುನ್ನಡೆಯಬೇಕು. ಭಾಷಾಶಾಸ್ತ್ರದಲ್ಲಿ ಅಸ್ಪೃಶ್ಯತೆಗೆ ಅವಕಾಶವೇ ಇಲ್ಲ. ಜೀವಂತ ಭಾಷೆ ನಿರಂತರ ಹರಿಯುವ ನೀರಿನಂತೆ ತಿಳಿಯಾಗಿರುತ್ತದೆ. ನೂರಾರು ವರ್ಷ ಹಿಂದಿನ ಮುಂಬಯಿ ಮತ್ತು ಮೈಸೂರು ಸಂಸ್ಥಾನದ ಕಡತಗಳ ಅಚ್ಚಾದ ದಾಖಲೆಗಳು ಆಡಳಿತ ಭಾಷೆಯ ಬಳಕೆಯ ಶಬ್ದಗಳ ಆಯ್ಕೆಗೆ ಒಳ್ಳೆಯ ಆಕರವೆನಿಸಿವೆ. ಈ ದಿಶೆಯಲ್ಲಿ ಅವು ನಮಗೆ ಮಾರ್ಗಸೂಚಿಯಾಗಿವೆ.

ಶ್ರೀಕ್ಷೇತ್ರ ಧರ್ಮಸ್ಥಳದ ಆಡಳಿತ ಕಛೇರಿಯಲ್ಲಿ ಇಂಥ ಸಾವಿರಾರು ದಾಖಲೆಗಳು ಅಪೂರ್ವವೆನಿಸಿವೆ. ಅವನ್ನು ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು

ರದ್ದಿಯೆಂದು ತಿಪ್ಪೆಗೆಸೆಯದೆ ಸಂಶೋಧನೆಯೊಂದಿಗೆ ಸಂಗ್ರಹಿಸಿ ಪ್ರಕಟಿಸುವ ಯೋಜನೆ ಮಾಡಿರುವುದು ನಾಡಿನ ಉಳಿದ ಮಠ-ಮಂದಿರಗಳ ಒಡೆಯರಿಗೆ ಆದರ್ಶಪ್ರಾಯವೆನಿಸಿದೆ.

ಜೀವಂತ ಭಾಷೆಗೆ ಮಡಿವಂತಿಕೆ ಸಲ್ಲದು. ನಮ್ಮ ನುಡಿಯಲ್ಲಿ ಇಲ್ಲದ ಶಬ್ದಗಳನ್ನು ಬೇರೆ ಬೇರೆ ಭಾಷೆಗಳಿಂದ ಪಡೆದು, ಅವನ್ನು ನಮ್ಮ ಉಚ್ಚಾರಕ್ಕೆ ಸರಿಗೂಡುವಂತೆ ಸಂಸ್ಕರಿಸಿ ಪರಿಷ್ಕರಿಸಿ ಸ್ವೀಕರಿಸುವಾ. ಅಂದಾಗಲೇ ಕನ್ನಡ ಬೆಳೆದೀತು, ಉಳಿದೀತು.

(ಆಕರ : ಉರ್ದೂ—ಹಿಂದೀ ಕೋಶ: ಸಂಪಾದಕ—ರಾಮಚಂದ್ರವರ್ಮಾ, ಕಾಶಿ, 1940)

ರತ್ನನ ಪದಗಳಲ್ಲಿ ಪುಟ್ನಂಜಿ
ಓದುಗನ ಗ್ರಹಿಕೆಯ ನೆಲೆ

—ಬಿ. ಆರ್. ನರಸಿಂಹಮೂರ್ತಿ

ಕೃತಿಯೊಂದನ್ನು ಓದುಗ ಹೇಗೆ ಮತ್ತು ಯಾವ ಆಧಾರದ ಮೇಲೆ ಗ್ರಹಿಸುತ್ತಾನೆ? ಎಂಬ ಜಿಜ್ಞಾಸೆ ಸಾಹಿತ್ಯ ವಿಮರ್ಶೆಯ ಒಂದು ಚರ್ಚಾವೇದಿಕೆಯಾಗಿದೆ. ಕೃತಿಯ ಸಾಧ್ಯತೆಗಳನ್ನು ವಾಸ್ತವವಾಗಿ ಸಾಧಿಸುವವನು ಓದುಗ. ಆದ್ದರಿಂದ ಆ ಓದುಗನನ್ನು ಕುರಿತು ಸಾಮಾನ್ಯೀಕೃತ ಅಂಶಗಳನ್ನು ಮಂಡಿಸಲು ಸಾಧ್ಯವಿದೆ. ಹಾಗಾಗಿ ಪ್ರತಿಯೊಂದು ಕೃತಿಯೂ ಭಿನ್ನಭಿನ್ನ ಓದುಗರನ್ನು ಅಪೇಕ್ಷಿಸುತ್ತದೆ. ಹಾಗೆಯೇ ಕೃತಿ ಮತ್ತು ಓದುಗರ ನಡುವಿನ ಸಂಬಂಧ ಸಂಕೀರ್ಣವಾದದ್ದು. ಕೃತಿ ಓದುಗನನ್ನು ನಿಯಂತ್ರಿಸುತ್ತದೆಯೇ? ಅಥವಾ ಓದುಗ ಕೃತಿಯನ್ನು ನಿಯಂತ್ರಿಸುತ್ತಾನೆಯೇ? ಈ ಪ್ರಶ್ನೆಗಳು ನಮ್ಮ ಗಮನಕ್ಕೆ ಬರುವುದು ಸಹಜ. ಓದುಗನ ದೃಷ್ಟಿಯಿಂದ ಕೃತಿಯ ಓದುವಿಕೆಯ ಅನುಭವದಲ್ಲಿ 'ಗ್ರಹಿಕೆ' ಮುಖ್ಯಪಾತ್ರ ವಹಿಸುತ್ತದೆ. ಆದ್ದರಿಂದ ಒಂದು ಕೃತಿಯನ್ನು ವಿವಿಧ ರೀತಿಯಲ್ಲಿ ಓದುಗರು ಗ್ರಹಿಸಲು ಸಾಧ್ಯವಿದೆ. ಇದರಿಂದಾಗಿ ಕೃತಿಯ ವೈವಿಧ್ಯ, ಅದು ಓದುಗರಲ್ಲಿ ಉಂಟುಮಾಡಿದ ಪರಿಣಾಮ, ಓದುಗರ ಪ್ರತಿಕ್ರಿಯೆ–ಈ ಮುಂತಾದ ಅಂಶಗಳು ಹೊರಬೀಳಲು ಕಾರಣವಾಗಿರುತ್ತದೆ.

ಓದುಗನೊಬ್ಬ ಒಂದು ಕೃತಿಯನ್ನು ಗ್ರಹಿಸುವ ಹಿನ್ನೆಲೆಯ ಸಂದರ್ಭದ ಚರ್ಚೆಯಲ್ಲಿ ಬಂದ ಪಾರಿಭಾಷಿಕ ಪದವೇ 'ಸಾಹಿತ್ಯಕ ಸಾಮರ್ಥ್ಯ' (Literary Competence). ಇದು 'ಓದುಗಾರಿಕೆಯ ಸಾಮರ್ಥ್ಯ' (ರೀಡಬಿಲಿಟಿ) ಕ್ಕೂ ಅನ್ವಯಿಸುವ ಮಾತು. ಕೃತಿಯ ಅಥವಾ ಓದುಗಾರಿಕಾ ಸಾಮರ್ಥ್ಯವು ಓದುಗನ ಮತ್ತು ಕೃತಿಯ ಗ್ರಹಿಕೆಯ ನೆಲೆಯನ್ನು ಖಚಿತಪಡಿಸುತ್ತದೆ. ಆದರೆ ಓದುಗ ಸಾಮರ್ಥ್ಯ, ಕೃತಿಯ ಓದುಗಾರಿಕಾ ಸಾಮರ್ಥ್ಯ ಇವುಗಳ ನಡುವಿನ ಸಂಬಂಧ ಸಂಕೀರ್ಣವಾದದ್ದು[1]. ಈ ದೃಷ್ಟಿಯಿಂದ ಒಂದೇ ಕೃತಿ ವಿಭಿನ್ನ ಓದುಗ ಸಾಮರ್ಥ್ಯದಿಂದ ಬೇರೆ ಬೇರೆ ರೀತಿಯಲ್ಲಿ ಗ್ರಹಿತವಾಗಬಹುದು. ಈ ಹಿನ್ನೆಲೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಜಿ.ಪಿ. ರಾಜರತ್ನಂ ಅವರ 'ರತ್ನನ ಪದಗಳು' ಕೃತಿಯಲ್ಲಿ ಓದುಗ

1 ಇದೇ ಲೇಖನಕಾರರು ಬರೆದಿರುವ 'ಓದುಗಾರಿಕಾ ಸಾಮರ್ಥ್ಯ' ಪರಿಕಲ್ಪನೆಯ ವಿಚಾರದ ಚರ್ಚೆಗೆ ನೋಡಿ: 'ಓದುಗಾರಿಕಾ ಸಾಮರ್ಥ್ಯ' ಪರಿಕಲ್ಪನೆ: ಮತ್ತು ಪರಿಚಯ, ಸಾಧನೆ. ಸಂಪುಟ 18 ಸಂಚಿಕೆ 1-4. ಜುಲೈ-ಡಿಸೆಂಬರ್ 1989. ಪುಟ 112 ರಿಂದ 118.

ನೊಬ್ಬ ತಾನು ಗ್ರಹಿಸಿದ ಒಂದು ಮುಖ್ಯ ಅಂಶವನ್ನು ಹೇಳುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ—

'ರತ್ನನ ಪದಗಳು' ಎಂಬ ಕೃತಿ ಮೊತ್ತಮೊದಲು ಪ್ರಕಟವಾದದ್ದು 1932 ರಲ್ಲಿ ಅದೂ—'ಯೆಂಡ್ಕುಡ್ಕ ರತ್ನ' ಎಂಬ ಶೀರ್ಷಿಕೆಯಲ್ಲಿ. ಬಳಿಕ ಎರಡು ವರ್ಷಗಳಲ್ಲಿ ಈ ಕೃತಿ 77 ಪದ್ಯಗಳ ಸಂಕಲನವಾಗಿ ಬೆಳೆದು, ಇಂದಿಗೂ ಅದೇ ರೂಪದಲ್ಲಿ ಪ್ರಚಲಿತ ವಿದೆ. (8ನೇ ಮುದ್ರಣ 1990 ರಲ್ಲಿ). ರಾಜರತ್ನಂ ಅವರೇ ಈ 77 ಪದ್ಯಗಳನ್ನು ಆಶಯ ಮತ್ತು ವಸ್ತುಗಳ ಐಕ್ಯತೆ ದೃಷ್ಟಿಯಿಂದ ಐದು ಗುಂಪುಗಳಾಗಿ ವಿಂಗಡಿಸಿ ದ್ದಾರೆ. ಹೀಗಾಗಿ ಇಲ್ಲಿ ಕ್ರಮವಾಗಿ ರತ್ನನ ಮೊಕಾಬಿಲೆ, ಬುಂಡೇಬಕ್ತರತ್ನ, ಮುನಿಯುನ್ ಗಿರಾಕಿರತ್ನ, ಪುಟ್ನಂಜಿ ರತ್ನ ಹಾಗೂ ರಸ್ತುಂ ರತ್ನ ಎಂಬ ಐದು ವಿಭಾಗ ಗಳಿವೆ[2]. ಈ ಐದು ವಿಭಾಗಗಳು ತಮ್ಮ ವ್ಯಾಪ್ತಿಯನ್ನು 6, 12, 18, 16 ಪದ್ಯ ಗಳಲ್ಲಿ ವಿಸ್ತರಿಸಿಕೊಂಡಿವೆ. ಇಲ್ಲಿ ಪ್ರತಿಯೊಂದು ವಿಭಾಗದ ಪದ್ಯಗಳು ಓದುಗನ ಗಮನವನ್ನು ಸೆಳೆದರೂ, ಜೀವನದ ಬಗೆಗಿನ ತಾತ್ತ್ವಿಕ ಸ್ವರೂಪವನ್ನು 'ಪುಟ್ನಂಜಿ ರತ್ನ' ಎಂಬ ಭಾಗದಲ್ಲಿ ವ್ಯಕ್ತಗೊಳಿಸಿರುವುದನ್ನು ಓದುಗನಾಗಿ ನಾನು ಗ್ರಹಿಸಿದ್ದೇನೆ. ಈ ವಿಭಾಗದಲ್ಲಿ ದಾಂಪತ್ಯ ಜೀವನದ ಸೊಗಸು, ಹೆಣ್ಣಿನ ವ್ಯಕ್ತಿತ್ವ, ಆಕೆಯ ರೂಪ, ಆಕೆಯ ನಡೆನುಡಿಗಳು, ಅವಳೊಡನೆ ರತ್ನನ ಒಡನಾಟ, ಆಕೆಯೊಂದಿಗಿನ ಬಾಲ್ಯ ಚಿತ್ರಣ ಮುಂತಾದ ಜೀವನದ ವಿವಿಧ ಹಂತಗಳಲ್ಲಿ ಕಾಣಿಸಿಕೊಳ್ಳಬಹುದಾದ ವಿವಿಧ ಅಂಶಗಳು ಇಲ್ಲಿ ವರ್ಣಮಯವಾಗಿ ಹಾಗೂ ವಾಸ್ತವಿಕವೆಂಬಂತೆ ಕವನಿತವಾಗಿವೆ. ಪುಟ್ನಂಜಿಯ ಸಾವಿನಿಂದ ಕೊರಗುವ ರತ್ನನ ಚಿತ್ರದಿಂದ ಈ ಭಾಗ ಅಂತ್ಯ ಕಂಡಿದೆ.

ಗಂಡ–ಹೆಂಡಿರ ನಡುವಣ ವಿವಿಧ ಸಂಬಂಧದ ವಸ್ತುವೊಂದನ್ನು ಇರಿಸಿಕೊಂಡು ರಾಜರತ್ನಂ ತಮ್ಮ ಅನುಭವದ ಪಕ್ವತೆಯಲ್ಲಿ ಸೆರೆಹಿಡಿದಿರುವುದು ಇಲ್ಲಿ ಅತ್ಯಂತ ಮನನೀಯವಾಗಿದೆ. ಸಂಸಾರದಲ್ಲಿ ಹೆಣ್ಣು ತನ್ನ ವ್ಯಕ್ತಿತ್ವದ ನೆಲೆಯಲ್ಲಿ ಬಹುರೂಪ ವನ್ನು ಪಡೆಯುವಹಾಗೆ ಇಲ್ಲಿ, ರತ್ನನ ಸಾಂಸಾರಿಕ ಬದುಕಿನಲ್ಲಿ ಪುಟ್ನಂಜಿ 'ಒಳತಿನ' ಪ್ರತೀಕವಾಗಿ ಕಾಣಿಸಿಕೊಳ್ಳುತ್ತಾಳೆ. ರತ್ನ ತನ್ನ ಪದಗಳಿಗೆ ಹೆಂಡತಿಯೇ ಪ್ರೇರಕ ಶಕ್ತಿ ಎಂಬುದನ್ನು ಒತ್ತಿ ಹೇಳುತ್ತಾನೆ. ಮತ್ತು ಅವಳು ನಂದಾದೀಪ. ಆದ್ದ ರಿಂದಲೇ ರತ್ನ

'ಜೀವಾನ್ ಬೆಳಸೋಕ್ ತಾಕತ್ ಅಂದ್ರೆ
ನಂಜೀ ನಾಮ ಸ್ಮರಣೆ !
ಜೀವದ ಗಂಗೆ ಕೆಡದಂಗ್ ಇಡೋಕ್
ನಂಜೀನ್ ಎಸರೇ ಬರಣೆ ! —(ನಂಜೀ ಹೆಸರು)

ಎಂದು ಹೇಳಿರುವುದು ಎಷ್ಟು ಅರ್ಥಪೂರ್ಣ !

---

[2] ರಾಜರತ್ನಂ ಜಿ. ಪಿ. 'ರತ್ನನ ಪದಗಳು', 1990, ಪುಟ . ಬುಕ್ಕಿನ ಜೀವಾಳ ಎಂಬಲ್ಲಿ.

ಬೇಂದ್ರೆ ಮತ್ತು ನರಸಿಂಹ ಸ್ವಾಮಿಗಳ ಕಾವ್ಯಗಳಲ್ಲಿ ಕಾಣಸಿಗುವಂತೆ ಇಲ್ಲಿಯೂ ಸಹ ದಾಂಪತ್ಯದ ಸರಸ, ಜೀವನದ ನೋವು ನಲಿವು, ತಮ್ಮ ಜೀವನದ ನೆನಪಿನ ಸುಳಿಯಲ್ಲಿ ಸೋಕಿದ ಮರೆಯಡೆ ಉಳಿದ ಘಟನೆಗಳಲ್ಲಿ ಪುಟ್ನಂಜಿಯ ಸ್ವರೂಪ ಎದ್ದು ಕಾಣುತ್ತದೆ. ಪುಟ್ನಂಜಿಯ ರೂಪವೇ ರತ್ನನ ಕಷ್ಟಗಳನ್ನು ದೂರ ಮಾಡುತ್ತದೆ ಎಂಬ ಮಾತು ಎಷ್ಟೊಂದು ಮಾರ್ಮಿಕವಾಗಿದೆ ನೋಡಿ !

ಸಿಡಿಯೋ ಮದ್ದಿನ್ ಸುಟ್ಟಾಕ್ದಂಗೆ
ಮಡಗಿದ್ದೇನೆ ಕೋಪ–
ನನ್ ತಾಪತ್ರೇನ್ ಉಡಾಯ್ಸ್ಬೈತೆ
ನನ್ ಪುಟ್ನಂಜೀ ರೂಪ ! (ನನ್ನ ಪುಟ್ನಂಜೀ ರೂಪ)
'ಬದಕೋದ್ ತಿಪ್ಸ್ಕಾರ್ ಅಲ್ಲಾಂತ ಅಂದದ್
ನಿಂಗ್ ನೆಪ್ಪೈತ ನಂಜಿ ! ಪುಟ 61

ಎಂದು ಹೇಳುವಾಗ ಜೀವನದ ಅಂತರಾರ್ಥವನ್ನೆ ಬಿಡಿಸಿ ಹೇಳಿದ್ದಾನೆ ರತ್ನ.

ತನ್ನ ಬಾಳಿಗೆ ದಾರಿಯಾದ ಪುಟ್ನಂಜಿ ತೀರಿಕೊಂಡ ಮೇಲೆ ಅವಳಿಗೇ ಬಿಟ್ಟ ಹೆಂಡವನ್ನು ಮತ್ತೆ ಕುಡಿಯಬೇಕೆಂದೂ, ಆಕೆಯ ಒಡನಾಟದ ನೆನಪು ಅಳಿಸಲೆಂದು ಆತ ಹೆಂಡಕ್ಕೆ ಮೊರೆ ಹೋಗುವುದನ್ನು ಕಾಣಬಹುದು. ಪುಟ್ನಂಜೀ ಅಮಾವಾಸ್ಯೆಯಲ್ಲಿ ಹತ್ತಿಸಿದ ನೂರು ಮತಾಪಿನ ಬೆಳಕು, ಆಕೆಯ ನಗುಮುಖ ಕವಿ ಕೊಟ್ಟ ಕಲ್ಪನಾ ಮೆರಗು ! ಇಂತಹಳನ್ನು ಕಳೆದುಕೊಂಡ ರತ್ನ ಇನ್ನೇನು ತಾನೆ ಮಾಡಬಲ್ಲ ?

"ರತ್ನ–ನಂಜಿಯರ ದಾಂಪತ್ಯ ಜೀವನದ ಚಿತ್ರಗಳಾದರೂ ಸ್ಫುಟವಾಗಿ ರೇಖಿತವಾಗಿಲ್ಲ. ಆ ಭಾಗದಿಂದ ರತ್ನ–ನಂಜಿಯರ ನಡುವಣ ಗಾಢ ಪ್ರೇಮ, ನಂಜಿಯ ಅಪರೂಪದ ಲಾವಣ್ಯ ಮನವರಿಕೆಯಾಗುತ್ತದೆ. ಆದರೆ ರತ್ನ–ನಂಜಿಯರ ಬಾಲ್ಯ ಚಿತ್ರ, ನಂಜಿ ರತ್ನನನ್ನು ಅಸಾರ್ಥ ಮಾಡಿಕೊಳ್ಳುವುದು, ನಂಜಿಯ ಸಾವು ಇವುಗಳು ಅಸ್ಪಷ್ಟ ಹಿನ್ನೆಲೆಯನ್ನು ಅಸಮಗ್ರ ಅಭಿವ್ಯಕ್ತಿಯನ್ನು ಪಡೆದಿವೆ. ಇವೆಲ್ಲ ಇನ್ನೂ ಹೆಚ್ಚಿನ ಪರಿಪೂರ್ಣತೆ ಮತ್ತು ವಿಶದತೆಗಳು ಅಗತ್ಯವಿತ್ತೆನಿಸುತ್ತವೆ."[3] ಎಂಬ ಮಾತುಗಳು ಕೇವಲ ಪದ್ಯಗಳ ಸಂಖ್ಯೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಹೇಳಿದಂತಿದೆ. ಎಷ್ಟೋ ಪದ್ಯಗಳಲ್ಲಿ ಹೇಳುವುದನ್ನು ಕೇವಲ ಕೆಲವೇ ಪದ್ಯಗಳಲ್ಲಿ ಸಾರಿ ಹೇಳುವುದು ಕವಿಯ ಪ್ರತಿಭೆಯ ದ್ಯೋತಕ. ಹಾಗಾಗಿ ಪುಟ್ನಂಜಿಯನ್ನು ಕುರಿತು ಬರೆದಿ

[3] ತಾರಾನಾಥ ಎನ್. ಎಸ್. ಸ್ಮೃತಿ (ತ. ಸು. ಶಾಮರಾಯರ ಅಭಿನಂದನ ಗ್ರಂಥ), 1983, ಪುಟ. 586.

ವುದು ಕಡಿಮೆಯಾದರೂ ಸಹ ಅವುಗಳಲ್ಲಿ ನಿಖರವಾದ ವಾಸ್ತವಿಕ ಘಟನೆಗಳನ್ನು ಸೆರೆ ಹಿಡಿಯಲಾಗಿದೆ, ಎಂಬುದನ್ನು ಓದುಗನಾಗಿ ನಾನು ದೃಢೀಕರಿಸುತ್ತೇನೆ.

ಒಟ್ಟಿನಲ್ಲಿ ರತ್ನನ ಪುಟ್ನಂಜಿಯ ಸಂಬಂಧ ಅಪೂರ್ವವಾದದ್ದು. 'ಮಾಗಿಯ ಹುಲ್ಲಿನ ಮೇಲಣ ಮಂಜು' ಎಂಬುದು ನಮ್ಮನ್ನು ಒಂದು ವಿಸ್ಮಯ ಲೋಕದ ಬಳಿಗೆ ಸೇರಿಸುತ್ತದೆ. ಅಂತೆಯೇ 'ನಿಂಗ್ ನೆಪ್ಪೈತ ನಂಜಿ', 'ಕಣ್ಣು', 'ನನ್ ಪುಟ್ನಂಜೀ ನಕ್ರೆ', 'ನಂಜೀ ಗುಮಾನಿ' ಈ ಮುಂತಾದ ಪದ್ಯಗಳಲ್ಲಿ ಸಂಸಾರದಲ್ಲಿ ಪತಿ-ಪತ್ನಿಯ ನಡುವಿನ ಅನೇಕ ಸಂಬಂಧಗಳನ್ನು ಕುರಿತು ಹೇಳುವ ಮಾತುಗಳು ಮನೋಹರವಾಗಿವೆ. ಆದ್ದರಿಂದಲೇ ಕುರ್ತಕೋಟಿಯವರು, "ಪುಟ್ನಂಜಿಯ ಮೇಲಿನ ಕವಿತೆಗಳಂತೂ ಕನ್ನಡದಲ್ಲಿಯೇ ಅತ್ಯುತ್ತಮ ಪ್ರಣಯ ಗೀತಗಳಿಗೆ ಉದಾಹರಣೆಗಳಾಗಿವೆ" ಎಂದಿರುವುದು ಸಮರ್ಪಕವಾಗಿದೆ. ಓದುಗನ ದೃಷ್ಟಿಯಲ್ಲಿ ಪುಟ್ನಂಜಿಯ ಮೇಲಣ ಕವನಗಳು ನಿಜಕ್ಕೂ ಜೀವನದ ಅನೇಕ ಘಟನೆಗಳ ನಿರೂಪಣೆಯೇ ಆಗಿದೆ.

ಶಾಸನ ಮತ್ತು ಕ್ಷೇತ್ರಕಾರ್ಯ

—ಡಿ. ವಿ. ಪರಮಶಿವಮೂರ್ತಿ

ಸಂಶೋಧನೆಯಲ್ಲಿ ಕ್ಷೇತ್ರಕಾರ್ಯ ಬಹಳ ಪ್ರಮುಖವಾದ ಕಾರ್ಯವಾಗಿದೆ. ಒಂದು ನಾಡಿನ ಸಂಸ್ಕೃತಿ, ಇತಿಹಾಸ, ಕಲೆ, ಜನಜೀವನಗಳ ಬಗ್ಗೆ ಸಂಶೋಧನೆ ಮಾಡುವವರಿಗೆ ಕ್ಷೇತ್ರಕಾರ್ಯ ಅನಿವಾರ್ಯವಾದ ಕಾರ್ಯವಾಗುತ್ತದೆ. ಮೂಲ ಆಕರಗಳಿಂದ ಸಾಮಗ್ರಿಯನ್ನು ಸಂಗ್ರಹಿಸಲು ಇದು ಸುಲಭವಾದ ಮಾರ್ಗ. ಈ ಕ್ಷೇತ್ರಕಾರ್ಯವನ್ನು ಯಾವ ರೀತಿ ಕೈಗೊಳ್ಳಬೇಕು ಎಂಬುದು ಸಂಶೋಧನೆಗೆ ಆಯ್ದುಕೊಂಡ ವಿಷಯವನ್ನವಲಂಬಿಸಿರುತ್ತದೆ.

ಶಾಸನಗಳ ಕ್ಷೇತ್ರಕಾರ್ಯದ ಬಗೆಗೆ ಇದುವರೆಗೂ ಎಲ್ಲೂ ಹೆಚ್ಚು ಪ್ರಸ್ತಾಪವಾಗಿಲ್ಲ. ಶ್ರೀ ಆಲೂರ ವೆಂಕಟರಾಯರು ತಮ್ಮ 'ಕರ್ನಾಟಕ ಗತ ವೈಭವ' ಎಂಬ ಕೃತಿಯಲ್ಲಿ ಶಾಸನಗಳ ಪ್ರತಿಯನ್ನು ಹೇಗೆ ತೆಗೆಯಬೇಕೆಂದು ವಿವರವಾಗಿ ತಿಳಿಸಿದ್ದಾರೆ.[1] ಇವರ ಅನಂತರ ಡಾ|| ಎಂ. ಎಂ. ಕಲಬುರ್ಗಿಯವರು ತಮ್ಮ 'ಸಾಹಿತ್ಯ ಸಂಪಾದನೆ' ಕೃತಿಯಲ್ಲಿ ಶಾಸನಗಳ ಪಾಠ ನಿರ್ಧಾರದ ಬಗ್ಗೆ ವಿವರವಾಗಿ ತಿಳಿಸಿ ಕೊಟ್ಟಿದ್ದಾರೆ.[2] ಅನಂತರ ಡಾ|| ಆರ್. ಶೇಷಶಾಸ್ತ್ರಿಯವರು 'ಶಾಸನ ಪರಿಚಯ' ಕೃತಿಯಲ್ಲಿ ಶಾಸನಗಳನ್ನು ಪ್ರಕಟಿತ-ಅಪ್ರಕಟಿತ ಎಂದು ಗುರುತಿಸುವ ಹಾಗೂ ಶಾಸನ ಲಿಪಿಯ ಪ್ರತಿ ತೆಗೆಯುವ ವಿಧಾನವನ್ನು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ.[3] ಇನ್ನೂ ಕೆಲವು ವಿದ್ವಾಂಸರು ತಮ್ಮ ಕೃತಿ-ಲೇಖನಗಳಲ್ಲಿ ಪ್ರಾಸಂಗಿಕವಾಗಿ ಕೆಲವು ವಿಧಾನಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ 'ಶಾಸನ ಕ್ಷೇತ್ರಕಾರ್ಯ'ದಲ್ಲಿ ಆರಂಭದ ಹಂತದಿಂದ ಹಿಡಿದು—ಕೊನೆಯ ಹಂತದವರೆಗೂ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಎಲ್ಲೂ ನಮಗೆ ವಿವರವಾದ ಮಾಹಿತಿ ದೊರೆಯುವುದಿಲ್ಲ.* ಪ್ರಸ್ತುತ ಈ

[1] ಶ್ರೀ ಆಲೂರ ವೆಂಕಟರಾಯರು, 'ಕರ್ನಾಟಕ ಗತ ವೈಭವ' ಪುಟ 167, ಪ್ರ. ವರ್ಷ 1917 (ಧಾರವಾಡ).

[2] ಡಾ|| ಎಂ. ಎಂ. ಕಲಬುರ್ಗಿ, 'ಸಾಹಿತ್ಯ ಸಂಪಾದನೆ' ಪುಟ 22-38, ಪ್ರ. ವರ್ಷ 1977 (ಮದ್ರಾಸ್ ವಿ. ವಿ.)

[3] ಡಾ|| ಆರ್. ಶೇಷಶಾಸ್ತ್ರಿ, 'ಶಾಸನ ಪರಿಚಯ' ಪುಟ 113, ಪ್ರ. ವರ್ಷ 1982, (ಬೆಂ. ವಿ. ವಿ.)

* ಕನ್ನಡ ಸಾಹಿತ್ಯ ಪರಿಷತ್ತಿನ 'ಶಾಸನಶಾಸ್ತ್ರ' ತರಗತಿಯಲ್ಲಿ ಹಾಗೂ ವಿಶ್ವವಿದ್ಯಾಲಯಗಳ ಶಾಸನವಿಭಾಗಗಳಲ್ಲಿ ಇವುಗಳ ಬಗೆಗೆ ತಿಳಿಸಿಕೊಡುತ್ತಾರೆ.

ಲೇಖನದಲ್ಲಿ ಶಾಸನ ಕ್ಷೇತ್ರಕಾರ್ಯದಲ್ಲಿ ಅನುಸರಿಸಬೇಕಾದ ಕೆಲವು ಸಾಮಾನ್ಯ ವಿಧಾನಗಳನ್ನು ಕುರಿತು ಹೇಳಲಾಗಿದೆ.

ಶಾಸನಗಳ ಕ್ಷೇತ್ರಕಾರ್ಯದ ಮೂಲ ಉದ್ದೇಶ ಶಾಸನಗಳಲ್ಲಿ ದೊರೆಯುವ ಮಾಹಿತಿಯನ್ನು ಪಡೆಯುವುದು. ಕೆಲವೊಮ್ಮೆ ದೊರೆತಿರುವ ಮಾಹಿತಿಯನ್ನು ವಿಶ್ಲೇಷಿಸಲು ಹಾಗೂ ವಿಮರ್ಶಿಸಲು ಕೂಡ ಕ್ಷೇತ್ರಕಾರ್ಯ ಕೈಗೊಳ್ಳಬೇಕಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ 'ವೈಜ್ಞಾನಿಕ ಕ್ಷೇತ್ರಕಾರ್ಯ'ವು ಹೆಚ್ಚು ಚಾಲ್ತಿಯಲ್ಲಿದೆ. ವ್ಯವಸ್ಥಿತವಾದ ಪೂರ್ವಸಿದ್ಧತೆಯೊಡನೆ ಕ್ರಮಬದ್ಧವಾಗಿ ಮಾಹಿತಿಗಳನ್ನು ಸಂಗ್ರಹಿಸುವುದೇ 'ವೈಜ್ಞಾನಿಕ ಕ್ಷೇತ್ರಕಾರ್ಯ' ಎನ್ನಿಸಿಕೊಳ್ಳುತ್ತದೆ.

ಶಾಸನಗಳಿಗೆ ಸಂಬಂಧಿಸಿದ ಕ್ಷೇತ್ರಕಾರ್ಯವನ್ನು 'ಪ್ರಾಸಂಗಿಕ ಕ್ಷೇತ್ರಕಾರ್ಯ' ಮತ್ತು 'ಸಮಗ್ರ ಕ್ಷೇತ್ರಕಾರ್ಯ' ಎಂದು ಎರಡು ರೀತಿ ವಿಂಗಡಿಸಬಹುದು. 'ಪ್ರಾಸಂಗಿಕ ಕ್ಷೇತ್ರಕಾರ್ಯ'ದಲ್ಲಿ ಹೆಚ್ಚು ಮಿತಿಗಳಿರುತ್ತವೆ. ಶ್ರಮವೂ ಸ್ವಲ್ಪ ಕಡಮೆ. ಒಂದು ನಿರ್ದಿಷ್ಟ ಪ್ರದೇಶದ ಇತಿಹಾಸವನ್ನು ಅರಿಯಲು, ಕವಿ-ಕಾಲ-ದೇಶದ ಬಗ್ಗೆ ತಿಳಿಯಲು ಕೆಲವು ಶಾಸನಗಳನ್ನು ನೋಡಬೇಕಾಗುತ್ತದೆ. ಇಲ್ಲಿ ನಮಗೆ ಬೇಕಾದ ಶಾಸನಗಳಿಗೆ ಮಾತ್ರ ಪ್ರಾಶಸ್ತ್ಯ ನೀಡುತ್ತೇವೆ. ಕೆಲವು ಅನುಮಾನಗಳನ್ನು ಪರಿಹರಿಸಿಕೊಳ್ಳಲು ಸಹ ಶಾಸನಗಳ ಆಧಾರ ಪಡೆಯುತ್ತೇವೆ. ಇಂತಹ ವೇಳೆಗಳಲ್ಲಿ ನಮಗೆ ಶಾಸನಗಳು ಕೇವಲ ಒಂದು ಸಾಕ್ಷಿಯಾಗಿ ನಿಲ್ಲುತ್ತವೆ. ಬೇರೆ ಬೇರೆ ಸ್ಥಳದ ಗ್ರಂಥಾಲಯ ಹಾಗೂ ವಸ್ತು ಸಂಗ್ರಹಾಲಯಗಳಿಗೆ ಭೇಟಿ ನೀಡುವುದೂ ಈ ರೀತಿಯ ಕ್ಷೇತ್ರಕಾರ್ಯವೆನ್ನಿಸಿಕೊಳ್ಳುತ್ತದೆ.

ಸಮಗ್ರ ಕ್ಷೇತ್ರಕಾರ್ಯದಲ್ಲಿ ಶ್ರಮ ಹೆಚ್ಚು. ಶ್ರಮವೆಂದರೆ, ದೈಹಿಕ ಹಾಗೂ ಮಾನಸಿಕ ಶ್ರಮವೂ ಆಗುತ್ತದೆ. ಇಲ್ಲಿ ಶಾಸನಗಳನ್ನು ನೋಡಿದಷ್ಟೂ ಸಂಗ್ರಹಿಸಿದಷ್ಟೂ ಲಾಭ ಹೆಚ್ಚು. ಒಂದು ನಾಡಿನ ರಾಜಕೀಯ ಇತಿಹಾಸ ಹಾಗೂ ಸಾಂಸ್ಕೃತಿಕ ಇತಿಹಾಸ ರಚನೆಗೆ ಈ ರೀತಿಯ ಕ್ಷೇತ್ರಕಾರ್ಯ ಹೆಚ್ಚು ಉಪಯುಕ್ತವಾಗುತ್ತದೆ. ಶಾಸನಗಳ ಸಮಗ್ರ ಸೂಚಿ ತಯಾರಿಸುವವರಿಗೆ, ಅಪ್ರಕಟಿತ ಶಾಸನಗಳ ಪಾಠ ಪ್ರಕಟಿಸುವವರಿಗೆ, ಶಾಸನಗಳ ಬಗ್ಗೆ ಅಂಕಿ, ಅಂಶ ಸಂಗ್ರಹಿಸುವವರಿಗೆ ಈ ರೀತಿಯ ಕ್ಷೇತ್ರಕಾರ್ಯ ಅನಿವಾರ್ಯ. ವೀರಗಲ್ಲುಗಳು, ಮಾಸ್ತಿಕಲ್ಲುಗಳು, ದಾನ ಶಾಸನಗಳು, ನಿಸಿಧಿ ಶಾಸನಗಳು ಮುಂತಾದುವುಗಳ ಅಧ್ಯಯನ ನಡೆಸುವವರಿಗೂ ಈ ರೀತಿಯ ಕ್ಷೇತ್ರಕಾರ್ಯ ಅವಶ್ಯವಾಗುತ್ತದೆ. ಇಲ್ಲಿ ಶ್ರಮ, ಸಮಯ, ಹಣ ಹೆಚ್ಚು ಬೇಕಾಗುತ್ತದೆ. ಇವುಗಳ ಜೊತೆ ಮುಂಜಾಗ್ರತಾ ಕ್ರಮಗಳನ್ನು ಹೆಚ್ಚು ಹೆಚ್ಚು ರೀತಿಯಲ್ಲಿ ಕೈಗೊಳ್ಳಬೇಕಾಗುತ್ತದೆ.

ಮೇಲಿನ ಎರಡೂ ರೀತಿಯ ಕ್ಷೇತ್ರಕಾರ್ಯವನ್ನು ಗಮನದಲ್ಲಿಟ್ಟುಕೊಂಡು ಕೆಲವೊಂದು ವಿಧಾನಗಳನ್ನು ಈ ಕೆಳಗಿನಂತೆ ವಿವೇಚಿಸಲಾಗಿದೆ.

ಪೂರ್ವ ತಯಾರಿ : ಕ್ಷೇತ್ರಕಾರ್ಯಕ್ಕೆ ಹೊರಡುವ ಮುಂಚೆ ತಿಳಿದು ಕೊಳ್ಳಬಹುದಾದ ಎಲ್ಲಾ ರೀತಿಯ ಕ್ರಮಗಳನ್ನು 'ಪೂರ್ವ ತಯಾರಿ' ಎಂದು ಹೇಳಬಹುದು. ಇದನ್ನು ನಾವು 'ಆಂತರಿಕ ತಯಾರಿ' ಮತ್ತು 'ಬಾಹ್ಯ ತಯಾರಿ' ಎಂದು ವಿಂಗಡಿಸಿಕೊಳ್ಳಬಹುದು. ಆಂತರಿಕ ತಯಾರಿಯೆಂದರೆ ನಾವು ನೋಡಬೇಕಾದ ಶಾಸನಗಳು, ಊರುಗಳು, ಭೇಟಿಯಾಗಬೇಕಾದ ವ್ಯಕ್ತಿಗಳು ಮೊದಲಾದ ವಿವರಗಳನ್ನು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬೇಕು. ಎಲ್ಲೆಲ್ಲಿ ನಮಗೆ ಬೇಕಾದ ಶಾಸನಗಳು ದೊರೆಯುತ್ತವೆ ಎಂದು ಪಟ್ಟಿಕೆಗಳಲ್ಲಿ ಬರೆದಿಟ್ಟು ಕೊಳ್ಳಬೇಕು. ಅವುಗಳ ಕಾಲ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಮಹತ್ವಗಳನ್ನು ಆ ಪಟ್ಟಿಕೆಗಳಲ್ಲಿ ಸಂಕ್ಷಿಪ್ತವಾಗಿ ನಮೂದಿಸಿಕೊಳ್ಳಬೇಕು. ಅಲ್ಲದೆ ನಾವು ಸುತ್ತಾಡುವ ಸ್ಥಳಗಳ ಬಗ್ಗೆ ಈಗಾಗಲೇ ಪ್ರಕಟವಾಗಿರುವ ಐತಿಹಾಸಿಕ, ಸಾಂಸ್ಕೃತಿಕ ವಿವರಗಳನ್ನು ಅಭ್ಯಸಿಸಿ, ಅಗತ್ಯವಿರುವ ಅಂಶಗಳನ್ನು ಗುರುತಿಸಿಕೊಳ್ಳಬೇಕು. ಈ ರೀತಿಯ ತಯಾರಿಗೆ ಎಂ. ಎ. ಆರ್., ಇ. ಸಿ., ಇ. ಐ., ಕೆ. ಐ., ಎಸ್.ಐ.ಐ. ಗೆಜೆಟಿಯರ್‌ಗಳು, ವಿಷಯ ವಿಶ್ವಕೋಶಗಳು ಮೊದಲಾದ ಸಂಪುಟಗಳ ನೆರವನ್ನು ಪಡೆಯಬೇಕು. ಮತ್ತೊಂದು ತಿಳಿದಿರಲೇಬೇಕಾದ ವಿಷಯವೆಂದರೆ 'ಲಿಪಿಶಾಸ್ತ್ರ'. ಕನ್ನಡ ಲಿಪಿ ಅಶೋಕನಿಂದ ಇಲ್ಲಿಯ ವರೆಗೆ ಬೆಳೆದುಬಂದ ರೀತಿಯ ಸೂಕ್ಷ್ಮ ಪರಿಜ್ಞಾನವಿರಬೇಕು. ಅಥವಾ ಸ್ವಲ್ಪವಾದರೂ ಜ್ಞಾನವಿರಬೇಕು. ಇದರಿಂದ ಒಂದು ಶಾಸನದ ಮಹತ್ವವನ್ನು ಸ್ಥಳದಲ್ಲೇ ನಿರ್ಧರಿಸಲು ಅನುಕೂಲವಾಗುತ್ತದೆ. ಲಿಪಿಯ ಪರಿಚಯವೇ ಇಲ್ಲದವನು ಶಾಸನದ ಮುಂದೆ ನಿಂತರೆ—"ಮಾತು ಬಾರದ, ಕಿವಿ ಕೇಳದ ವ್ಯಕ್ತಿಯ ಮುಂದೆ ನಿಂತಂತೆ". ಸಂಶೋಧಕನಿಗೆ ಈ ಆಂತರಿಕ ತಯಾರಿ ಬಹಳ ಮುಖ್ಯವಾದದ್ದು.

"ಬಾಹ್ಯ ತಯಾರಿ" ಎಂದರೆ ಆಂತರಿಕ ತಯಾರಿಯನ್ನು ಕಾರ್ಯಗತಗೊಳಿಸಲು ಬಳಸುವ ಸಾಮಗ್ರಿ ಸಲಕರಣೆಗಳೊಂದಿಗೆ ತಯಾರಾಗುವುದು. ಕ್ಷೇತ್ರಕಾರ್ಯ ಕೈಗೊಳ್ಳುವ ಸ್ಥಳ, ರಸ್ತೆಯ ಭೂಪಟ, ನಮ್ಮ ಬಳಿಯಿರಬೇಕು. ಇದರಿಂದ ನಾವು ದಾರಿ ತಪ್ಪುವ ಪ್ರಸಂಗ ಕಡಮೆಯಾಗುತ್ತದೆ. ಎಲ್ಲಾ ಕಡೆಯಲ್ಲೂ ನಮಗೆ ದಾರಿ ತೋರಿಸಲು ಫಲಕಗಳು ಅಥವಾ ವ್ಯಕ್ತಿಗಳು ದೊರೆಯುತ್ತಾರೆ ಎನ್ನುವುದು ಕಷ್ಟವಾಗುತ್ತದೆ. ಜಿಲ್ಲಾ ಭೂಪಟಕ್ಕಿಂತಲೂ ತಾಲೂಕು ಹಾಗೂ ಹೋಬಳಿ ಮಟ್ಟದ ಭೂಪಟಗಳು ನಮಗೆ ಹೆಚ್ಚು ನೆರವನ್ನು ನೀಡುತ್ತವೆ. ಈ ಭೂಪಟಗಳು ಕೇಂದ್ರಸರ್ಕಾರದ ಜನಗಣತಿಯ ಜಿಲ್ಲಾವಾರು ಸಂಪುಟಗಳಲ್ಲಿ ದೊರೆಯುತ್ತವೆ. ಕ್ಷೇತ್ರಕಾರ್ಯಕ್ಕೆ ಇಬ್ಬರು ಹೊರಟರೆ ಬಹಳ ಉತ್ತಮ. ಆದರೆ ಜೊತೆಯಲ್ಲಿ

ಬರುವ ಮತ್ತೊಬ್ಬನೂ ಸಮಾನ ಮನಸ್ಕನಾಗಿರಬೇಕು. 'ಎತ್ತು ಏರಿಗೆ ಎಳೆದರೆ, ಕೋಣ ನೀರಿಗೆ ಎಳೆಯಿತು' ಎಂಬ ಹಾಗೆ ಆಗಬಾರದು. ಸ್ವಂತ ವಾಹನಗಳಲ್ಲಿ ಹೊರಟರೆ ಇಂಧನವನ್ನು ಹೆಚ್ಚು ತೆಗೆದುಕೊಂಡು ಹೋಗಬೇಕು. ಎಲ್ಲಾ ಕಡೆಯೂ ಇಂಧನ ದೊರೆಯುವುದಿಲ್ಲ. ಅಲ್ಲದೆ ಹಳ್ಳಿಗಾಡಿನ ರಸ್ತೆಗಳಾದರೆ ಪಂಕ್ಚರ್ ಆಗುವುದುಂಟು. ಇಂತಹ ವೇಳೆಯಲ್ಲಿ ಪಂಕ್ಚರ್ ಹಾಕುವ ಸಲಕರಣೆಗಳು ಜೊತೆಗಿದ್ದರೆ ಬಹಳ ಒಳ್ಳೆಯದು. ನಾಲ್ಕು ಚಕ್ರದ ವಾಹನಗಳಿಗಿಂತ ಎರಡು ಚಕ್ರದ ವಾಹನವೇ ಹೆಚ್ಚು ಮೇಲು. ಕಾರಣ, ಕೆಲವು ಸ್ಥಳಗಳಲ್ಲಿ ಕಾಲುದಾರಿ ಮಾತ್ರ ಇರುತ್ತದೆ. ಕ್ಷೇತ್ರಕಾರ್ಯಕ್ಕೆ ಹೊರಟಾಗ ಪೂರ್ವತಯಾರಿಯ ಸಲಕರಣೆಗಳೊಂದಿಗೆ, ಶಾಸನಗಳ ಪ್ರತಿ ತೆಗೆಯುವ ವಸ್ತುಗಳು, ಕ್ಯಾಮೆರಾ, ಟೇಪ್‌ರೆಕಾರ್ಡರ್, ಹಾಗೂ ದೇವಾಲಯುಗಳ ಒಳಭಾಗದಲ್ಲಿನ ಶಾಸನಗಳನ್ನು ಗಮನಿಸಲು ಉತ್ತಮವಾದಬ್ಯಾಟರಿ ನಮ್ಮೊಂದಿಗೆ ಇರಬೇಕು. ಸಾಕಷ್ಟು ಆಹಾರಸಾಮಗ್ರಿಯೂ ನಮ್ಮ ಜೊತೆಯಿದ್ದಲ್ಲಿ ಉತ್ಸಾಹವು ಬತ್ತುವುದಿಲ್ಲ.

ಪ್ರಶ್ನಿಸುವ ವಿಧಾನ : ಪೂರ್ವ ತಯಾರಿಯೊಡನೆ ನಮಗೆ ಬೇಕಾದ ಸ್ಥಳವನ್ನು ತಲುಪಿದಾಗ ಶಾಸನಗಳಿರುವ ಜಾಗವನ್ನು ತಿಳಿಯಲು ಸ್ಥಳೀಯರನ್ನು ಪ್ರಶ್ನಿಸಬೇಕಾಗುತ್ತದೆ. ಶಾಸನಗಳು ಹೆಚ್ಚಾಗಿ ದೇವಾಲಯಗಳ ಬಳಿ, ಕೆರೆ ಕುಂಟೆಗಳ ದಂಡೆಗಳಲ್ಲಿ ಇರುವುದು ಹೆಚ್ಚು. ಇಂತಹ ಸ್ಥಳಗಳು ಸಾಮಾನ್ಯವಾಗಿ ಊರಿನಿಂದ ಹೊರಗಿರುತ್ತವೆ. ಹೊಲಗಳ ಅಥವಾ ಗದ್ದೆಗಳ ನಡುವೆಯೋ, ತೋಪುಗಳ ನಡುವೆಯೋ ಇರುತ್ತವೆ. ಸ್ಥಳೀಯರ ನೆರವನ್ನು ಪಡೆಯುವುದರಿಂದ ನಾವು ಆ ಸ್ಥಳವನ್ನು ಸುಲಭವಾಗಿ ತಲುಪಬಹುದು. ನಾವು ಹೋದ ಉದ್ದೇಶವನ್ನು ಸರಳವಾಗಿ ಅವರಿಗೆ ತಿಳಿಸಬೇಕು. ಅಪರಿಚಿತರೆಂದರೆ ಎಲ್ಲರೂ ಹಿಂಜರಿಯುವುದು ಸ್ವಾಭಾವಿಕ. ಮೊತ್ತ ಮೊದಲು ಪರಸ್ಪರ ಪರಿಚಯ ಮಾಡಿಕೊಳ್ಳಬೇಕು. ಅವರು ಹೇಳುವ ವಿಷಯ ನಮಗೆ ಬೇಕಾಗಲಿ ಅಥವಾ ಬೇಕಾಗದಿರಲಿ ಉತ್ಸಾಹದಿಂದ ಕೇಳಬೇಕು. ಅವರ ಹೇಳಿಕೆಗಳನ್ನು ಖಂಡ–ತುಂಡವಾಗಿ ನಿರಾಕರಿಸಬಾರದು. ಅವರು ಉತ್ತರ ಹೇಳಲು ಸಾಧ್ಯವಾಗುವ ರೀತಿ ಪ್ರಶ್ನೆಗಳನ್ನು ಕೇಳಬೇಕು. ಅವರಿಗೆ ಏನೂ ತಿಳಿದಿಲ್ಲ ಎಂಬ ರೀತಿ ವರ್ತಿಸಬಾರದು. 'ದೂರದಿಂದ ಬಂದಿದ್ದೇವೆ ಸಹಾಯ ಮಾಡಿ', 'ಎಲ್ಲೆಲ್ಲಿ ಶಾಸನಗಳಿವೆಯೋ ದಯವಿಟ್ಟು ತೋರಿಸಿರಿ', 'ನಿಮ್ಮ ಊರು ಸುಂದರವಾಗಿದೆ', 'ನಿಮ್ಮ ಕಡೆ ಜನಗಳು ಬಹಳ ಒಳ್ಳೆಯವರು', ಪರಿಸರವನ್ನು ಚೆನ್ನಾಗಿ ಇಟ್ಟುಕೊಂಡಿದ್ದೀರಿ', ಮುಂತಾಗಿ ಅವರಿಗೆ ಉತ್ಸಾಹ ತುಂಬುವ ರೀತಿಯಲ್ಲಿ ಪ್ರಶ್ನಿಸಬೇಕು. ಅವರ ಸ್ನೇಹ ಸಂಪಾದಿಸಿ, ಅವರಲ್ಲಿ ನಂಬಿಕೆ ಹುಟ್ಟಿಸಿದರೆ, ಬೆಳಗಿನಿಂದ ಸಂಜೆಯ ವರೆಗೂ ನಮ್ಮ ಜೊತೆ ಸುತ್ತಲು ತಯಾರಾಗಿ, ಎಲ್ಲಾ ರೀತಿಯ ನೆರ

ವನ್ನೂ ನೀಡುತ್ತಾರೆ. ಆವರಿಂದ ಉಪಕಾರ ಪಡೆದ ಮೇಲೆ ಅವರಿಗೆ ಸೂಕ್ತ ರೀತಿಯಲ್ಲಿ ಕೃತಜ್ಞತೆ ಸಲ್ಲಿಸಬೇಕು. ಗಮನಿಸಬೇಕಾದ ಮತ್ತೊಂದು ವಿಚಾರವೆಂದರೆ ಸಾಹಿತ್ಯ ಹಾಗೂ ಭಾಷಾ ಸಂಶೋಧನೆಯಲ್ಲಿ ಮೊದಲೇ ತಯಾರಿಸಿಕೊಳ್ಳುವ ಪ್ರಶ್ನೆಗಳಂತೆ, ಇಲ್ಲಿ ತಯಾರಿಸಿಕೊಳ್ಳಲಾಗುವುದಿಲ್ಲ. ಸಂದರ್ಭಕ್ಕೆ ತಕ್ಕ ಪ್ರಶ್ನೆ ಕೇಳಬೇಕು.

ಟಿಪ್ಪಣಿ ಮಾಡಿಕೊಳ್ಳುವುದು : ನಾವು ಕಾಣುವ, ಕೇಳುವ, ವಿಷಯಗಳನ್ನು ಕೈಗೊಂಡ ಕ್ರಮಗಳನ್ನು ಆಯಾ ಸ್ಥಳದಲ್ಲೇ ಟಿಪ್ಪಣಿ ಮಾಡಿಕೊಳ್ಳಬೇಕು. ಇದರಿಂದ ಯಾವ ವಿಚಾರವನ್ನೂ ಮರೆಯದೇ ಬಳಸಿಕೊಳ್ಳಬಹುದು. ನೋಡಿದ ಜಾಗ, ತೋರಿಸಿದ ವ್ಯಕ್ತಿಯ ಹೆಸರು, ಅವರು ನೀಡುವ ಮಾಹಿತಿ, ತೆಗೆದ ಛಾಯಾ ಚಿತ್ರಗಳು, ಅಂಕಿ-ಅಂಶಗಳು ಮೊದಲಾದುವನ್ನು ಆ ಕ್ಷಣವೇ ನಮೂದಿಸಿಕೊಳ್ಳಬೇಕು. ಒಂದು ಶಾಸನವನ್ನು ನೋಡಿದಾಗ ಮಾಡಿಕೊಳ್ಳಬಹುದಾದ ಟಿಪ್ಪಣಿಯ ಪಟ್ಟಿಕೆಯ ಮಾದರಿ ಹೀಗಿದೆ.

ಸ್ಥಳ:............... ತಾ||:..................... ಜಿಲ್ಲೆ :.....................

ಸ್ವರೂಪ :.............. ಕಾಲ :............ಲಿಪಿ :............ಭಾಷೆ : ....

ವಿವರ :...

....

....

....

....

ಪ್ರಕಟಿತ/ಅಪ್ರಕಟಿತ

ಧ್ವನಿಮುದ್ರಣ ಯಂತ್ರ ಬಳಕೆ : ಶಾಸನಗಳ ಸಂಶೋಧನೆಯಲ್ಲಿ ಧ್ವನಿಮುದ್ರಣ ಬಳಕೆ ಅನಿವಾರ್ಯವಲ್ಲದಿದ್ದರೂ, ಕೆಲವು ವೇಳೆ ಬೇಕಾಗುತ್ತದೆ. ಆಯಾ ಊರುಗಳಲ್ಲಿ ಶಾಸನಗಳ ಬಗ್ಗೆ ಭಿನ್ನಭಿನ್ನ ಭಾವನೆ ಬೆಳೆದಿರುತ್ತದೆ. ಕೆಲವು ಊರುಗಳಲ್ಲಿ ದೈವದ ರೂಪವೂ ಆಗಿರುತ್ತದೆ. ಇಂತಹ ಸಮಯಗಳಲ್ಲಿ ಆ ಶಾಸನದ ಬಗ್ಗೆ ಜನರ ಅಭಿಪ್ರಾಯ ಸಂಗ್ರಹಿಸುವಾಗ ಧ್ವನಿಮುದ್ರಣ ಯಂತ್ರ ಬಳಸಿಕೊಂಡರೆ ಬಹಳ ಅನುಕೂಲ ಮತ್ತು ಶ್ರಮವು ಉಳಿಯುತ್ತದೆ. ಅವರ ಭಾಷೆ, ಮಾತುಗಳಲ್ಲೇ ನಾವು ಅವನ್ನು ಸಂಗ್ರಹಿಸಬಹುದು. ಅಗತ್ಯವಿದ್ದಷ್ಟು ಸೆಲ್, ಹಾಗೂ ಟೇಪ್‌ಗಳನ್ನು

ಮೊದಲೇ ತೆಗೆದುಕೊಂಡು ಹೋಗಬೇಕು. ದೊಡ್ಡ ಧ್ವನಿಮುದ್ರಣ ಯಂತ್ರಗಳಿಗಿಂತ ಸಣ್ಣ ಧ್ವನಿಮುದ್ರಣ ಯಂತ್ರ ಎಲ್ಲ ರೀತಿಯಿಂದಲೂ ಸೂಕ್ತವಾದದ್ದು.

ಕ್ಯಾಮರಾ ಬಳಕೆ: ಒಂದು ಶಾಸನದ ಎತ್ತರ, ಗಾತ್ರ ಅಥವಾ ಅದರ ಶಿಲ್ಪಗಳ ವಿವರಗಳು ವಿಶೇಷವಾಗಿದ್ದಲ್ಲಿ ಅದರ ಛಾಯಾಚಿತ್ರ ತೆಗೆಯಬೇಕಾಗುತ್ತದೆ. ನೂರು ಪುಟ ಟಿಪ್ಪಣಿ ಬರೆದುಕೊಳ್ಳುವ ಕೆಲಸವನ್ನು ಒಂದು ಚಿತ್ರ ಮಾಡುತ್ತದೆ. ಇವು ನಮಗೆ ಪ್ರತ್ಯಕ್ಷ ಸಾಕ್ಷಿಗಳಾಗುತ್ತವೆ ಸಂಶೋಧಕನು ತನ್ನ ಹೇಳಿಕೆಗಳನ್ನು, ಸಂಶೋಧನೆಯನ್ನು ಸಮರ್ಥಿಸಿಕೊಳ್ಳಲು ಛಾಯಾಚಿತ್ರಗಳು ಅತ್ಯವಶ್ಯವಾದುದಾಗಿವೆ. ಶಾಸನ ಶಿಲ್ಪಗಳ ಉಡುಪು, ಕೇಶ ಶೃಂಗಾರ, ಆಭರಣಗಳು, ವೀರರ ಭಂಗಿಗಳು, ಸಾಂಕೇತಿಕ ಚಿತ್ರಗಳು ಮುಂತಾದವುಗಳ ಅಧ್ಯಯನಕ್ಕೆ ಛಾಯಾಚಿತ್ರದ ಬಳಕೆ ಅತ್ಯವಶ್ಯ. ಶಾಸನಗಳು ಹಾಳಾದರೂ ನೆಗೆಟಿವ್ ರೂಪದಲ್ಲಿ ಅವುಗಳ ಚಿತ್ರಗಳನ್ನು ರಕ್ಷಿಸಿಡಬಹುದು. ಕ್ಷೇತ್ರಕಾರ್ಯದ ವೇಳೆಯಲ್ಲಿ ಉತ್ತಮವಾದ ಕ್ಯಾಮೆರಾವನ್ನು ಬಳಸುವುದು ಸೂಕ್ತ. ಅಲ್ಲದೆ ಚಿತ್ರಗಳನ್ನು ತೆಗೆಯುವ ಅನುಭವ ಪಡೆದಿರಬೇಕು. ಅನುಭವವಿಲ್ಲದಿದ್ದರೆ, ಚಿತ್ರಗಳೇ ಬರದಿರಬಹುದು ಅಥವಾ ಕ್ಯಾಮೆರಾ ಹಾಳಾಗಬಹುದು. ದೂರದ ಪ್ರದೇಶಗಳಿಗೆ ಹೋಗಿ ಚಿತ್ರಗಳನ್ನು ತೆಗೆದು, ಅವು ಈ ರೀತಿಯಲ್ಲಿ ಹಾಳಾದರೆ ಶ್ರಮ, ಸಮಯ, ಹಣ ಎಲ್ಲವೂ ನಷ್ಟವಾಗುತ್ತದೆ. ಅತ್ಯವಶ್ಯವಾದದ್ದು ಎಂಬುವನ್ನು ಎರಡು ಸಾರಿ ಚಿತ್ರ ತೆಗೆಯಬೇಕು.

ಪಡಿಯಚ್ಚು ತೆಗೆಯುವುದು : ಕೆಲವು ಶಾಸನಗಳನ್ನು ಸ್ಥಳದಲ್ಲೇ ಓದಬಹುದು. ಆದರೆ ಹೆಚ್ಚು ಪಾಲಿನ ಶಾಸನಗಳನ್ನು ಹಾಗೆ ಓದಲಾಗುವುದಿಲ್ಲ. ಆಗ ಶಾಸನದ ಪಡಿಯಚ್ಚು ತೆಗೆದು ಓದಬೇಕಾಗುತ್ತದೆ. ಪಡಿಯಚ್ಚು ತೆಗೆಯುವುದು ಬಹಳ ಸುಲಭ. ಒಂದೆರಡು ಬಾರಿ ನೋಡಿಕೊಂಡರೆ ಗೊತ್ತಾಗುತ್ತದೆ. ನಮಗೆ ಬೇಕಾದ ಶಾಸನವನ್ನು ಚೆನ್ನಾಗಿ ತೊಳೆಯಬೇಕು. ಅನಂತರ ದಿನಪತ್ರಿಕೆಯಗಲದ ಬಿಳಿ ಕಾಗದವನ್ನು ಸ್ವಲ್ಪ ನೆನೆಸಿ ಆ ಶಾಸನದ ಮೇಲೆ ಸುಕ್ಕಾಗದ ರೀತಿ ಹರಡಬೇಕು. ಅಂಗೈಅಗಲವಿರುವ ಮೆತ್ತನೆಯ ಬ್ರಶ್‌ನಿಂದ ಕಾಗದ ಹರಿಯದ ಹಾಗೆ ಬಡಿಯಬೇಕು. ಆಗ ನೆನೆದ ಕಾಗದವು ಅಕ್ಷರದ ಒಳಕ್ಕೆ ಸೇರುತ್ತದೆ. ಶಾಸನ ಒರಟಾಗಿದ್ದು ಹಾಳೆ ಹರಿದು ಹೋದರೆ ಅದರ ಮೇಲೆ ಮೊದಲಿನಂತೆಯೇ ಮತ್ತೊಂದು ಕಾಗದವನ್ನು ಹಾಕಿ ಬ್ರಶ್‌ನಿಂದ ಬಡಿಯಬೇಕು. ನಂತರ ಡ್ಯಾಬರ್ ಮೇಲೆ ಇಂಕನ್ನು ಬಳಿದುಕೊಂಡು ಕಾಗದದ ಮೇಲೆ ಒತ್ತಬೇಕು. ಈ ಇಂಕ್ ಜೆರಾಕ್ಸ್‌ಗೆ ಅಥವಾ ಡೂಪ್ಲಿಕೇಟಿಂಗ್‌ಗೆ ಬಳಸುವ ಇಂಕಾದರೆ ಬಹಳ ಉತ್ತಮ. ಕಡೆಯ ಪಕ್ಷ ಇದ್ದಿಲಿನ ಪುಡಿಯಾದರೂ ಆಗುತ್ತದೆ. ಕಾಗದ ಒಣಗಿದ ಮೇಲೆ ಶಾಸನದಿಂದ ಬಿಡಿಸಿ ಕ್ಯಾಲೆಂಡರ್ ರೀತಿ ಸುತ್ತಿ ಅದರ ಮೇಲೆ ಸಂಕೇತದಿಂದ ಊರು, ಮುಂತಾದವುಗಳನ್ನು ಬರೆಯಬೇಕು.

ಬುದ್ಧಿಶಕ್ತಿಯ ಬಳಕೆ: ಶಾಸನಗಳ ಬಗ್ಗೆ ಅದರ ಸ್ಥಳದ ಬಗ್ಗೆ ಮಾಹಿತಿದಾರರಿಂದ ಹೇಗೆ ವಿಷಯ ತಿಳಿಯಬೇಕು ? ಅವರಿಗೆ ಹೇಗೆ ಪ್ರಶ್ನೆ ಹಾಕಬೇಕು ? ಎಂಬುದರ ಬಗ್ಗೆ ಸಮಯಾನುಸಾರ ವರ್ತಿಸಬೇಕು. ಮಾಹಿತಿ ನೀಡುವವರು ದಾರಿ ತಪ್ಪಿದಾಗ ಉಪಾಯವಾಗಿ ಅವರನ್ನು ದಾರಿಗೆ ತರಬೇಕು. ಅವರು ಕೋಪಿಸಿಕೊಳ್ಳದಂತೆ ಸೌಜನ್ಯದಿಂದ ಅವರಿಂದ ನಮಗೆ ಬೇಕಾದ ಮಾಹಿತಿಯನ್ನಷ್ಟೇ ಪಡೆಯಬೇಕು. ಅವರೊಡನೆ ವ್ಯವಹರಿಸುವಾಗ ನಮ್ಮ ಪ್ರತಿಷ್ಠೆಗಳನ್ನು ಬದಿಗೊತ್ತಬೇಕು. ಅವರೊಡನೆ ಒಂದಾಗಿ ಬೆರೆಯಬೇಕು. ಅವರಿಗೆ ಅರ್ಥವಾಗುವ ಗ್ರಾಮ್ಯ ಭಾಷೆಯಲ್ಲೇ ವ್ಯವಹರಿಸಿದರೆ ಬಹಳ ಉತ್ತಮ. ಅವಸರಕ್ಕೆ ಇಲ್ಲಿ ಅವಕಾಶವಿರುವುದಿಲ್ಲ. ಒಂದು ಊರಿಗೆ ಹೋಗಿ ಇಲ್ಲಿ ಶಾಸನಗಳಿವೆಯೆ ? ಎಂದು ಕೇಳಿದರೆ ಅವರಿಗೆ ಅರ್ಥವಾಗುವುದಿಲ್ಲ. ಆಗ ಲಿಪಿಕಲ್ಲು ಇದೆಯೇ ಎಂದೋ, ಅಕ್ಷರಕಲ್ಲು ಇದೆಯೇ ಎಂದೋ ಕೇಳಬೇಕು. ವೀರಗಲ್ಲು, ಮಾಸ್ತಿಕಲ್ಲುಗಳ ಬಗ್ಗೆಯೂ ಅಷ್ಟೆಯೆ. ಚಿತ್ರದಕಲ್ಲು ಇದೆಯೋ, ಗೊಂಬೆಗಲ್ಲು ಇದೆಯೋ, ಬೀರಪ್ಪ ಇದೆಯೋ, ಮಾಸ್ತ್ಯಮ್ಮ ಇದೆಯೋ ಎಂದು ಕೇಳಬೇಕು. ಆಗ ಅವರು ಅವನ್ನು ತೋರಿಸುತ್ತಾರೆ.

ಒಂದು ಧಾರ್ಮಿಕ ಕೇಂದ್ರದಲ್ಲಿ ಮಾಹಿತಿ ಬೇಕಾದರೆ, ಕೆಲವು ವೇಳೆ ಅಲ್ಲಿನ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಬರಿಗಾಲಲ್ಲಿ ಹೋಗಬೇಕಾಗಬಹುದು. ಪಂಚೆ ಉಡಬೇಕಾಗಬಹುದು, ನಾಮವನ್ನೋ ವಿಭೂತಿಯನ್ನೋ ಧರಿಸಬೇಕಾಗಬಹುದು. ಸ್ವಾಮಿಗಳ ಅಥವಾ ಹಿರಿಯರ ಕಾಲುಗಳಿಗೆ ನಮಸ್ಕಾರ ಮಾಡುವ ಪ್ರಸಂಗ ಬಂದರೂ ಬರಬಹುದು. ಮಾಹಿತಿ ಬೇಕಾದಲ್ಲಿ ಸಂಶೋಧಕ ಇದಕ್ಕೆಲ್ಲಾ ಸಿದ್ಧನಾಗಬೇಕು. ಈ ಆಚರಣೆಗಳು ನನಗೆ ಒಗ್ಗುವುದಿಲ್ಲ ಎಂದರೆ ಅವನ ಸಂಶೋಧನೆಗೆ ನೆರವು ಸಿಗುವುದಿಲ್ಲ. ಮಾಹಿತಿ ಸಂಗ್ರಹಣೆಯಲ್ಲಿ ಜಾತಿ, ಮತ, ಅಂತಸ್ತಿನ ಭೇದ ಮಾಡಬಾರದು. ಆದರೆ ಕೆಲವು ವೇಳೆ ಇದಕ್ಕೆ ವಿರುದ್ಧವಾಗಿಯೂ ನಡೆಯಬೇಕಾಗುತ್ತದೆ. ಮಾಹಿತಿ ನೀಡುವವರನ್ನು ಸೂಕ್ಷ್ಮವಾಗಿ ಗಮನಿಸಿ ಈ ರೀತಿ ನಡೆದುಕೊಳ್ಳಬೇಕಾಗುತ್ತದೆ.

ಭಿನ್ನ ಮಾಹಿತಿಗಳ ನೆರವು : ಶಾಸನ ಸಂಶೋಧಕನಿಗೆ ಬರೀ ಶಾಸನಗಳ ಅವಲೋಕನವೇ ಮುಖ್ಯವಲ್ಲ. ಅದಕ್ಕೆ ಪೂರಕವಾಗಿ ಭಿನ್ನ ಕ್ಷೇತ್ರಗಳಲ್ಲೂ ಪರಿಚಯ ಇರಬೇಕು. ಜಾನಪದ, ಭಾಷಾಶಾಸ್ತ್ರ, ಸಾಹಿತ್ಯ, ಇತಿಹಾಸಗಳು ಒಂದೇ ಸಮಾಜದ ಉತ್ಪನ್ನಗಳಾದ್ದರಿಂದ ಒಂದಕ್ಕೊಂದು ಸಂಬಂಧ ಇದ್ದೇ ಇರುತ್ತದೆ. ಶಾಸನಗಳ ಅಧ್ಯಯನದಲ್ಲಿ ಇವುಗಳ ನೆರವನ್ನು ಪಡೆಯಬೇಕು. ಹಾಗೆಯೇ ಇವುಗಳ ಅಧ್ಯಯನಕ್ಕೆ ಶಾಸನಗಳ ನೆರವನ್ನೂ ಪಡೆಯಬೇಕು. ಆಗಲೇ ನಮ್ಮ ಅಧ್ಯಯನ ಪರಿಪೂರ್ಣವಾಗುತ್ತದೆ. ಭಿನ್ನ ಸಂಸ್ಕೃತಿಯ ನಾಡು ನಮ್ಮದಾದ್ದರಿಂದ ಶಾಸನಗಳಲ್ಲಿ ಅದು ಪ್ರತಿಫಲಿಸಿರುತ್ತದೆ. ಆದುದರಿಂದ ಸಂಶೋಧಕ ತನ್ನ ಚತುರತೆ

ಯಿಂದ ಇವನ್ನು ಬಳಸಿಕೊಳ್ಳಬೇಕು. ಸಮರ್ಥನಾದ ಶಾಸನ ಸಂಶೋಧಕನು ಭಾಷಾಶಾಸ್ತ್ರಜ್ಞನ ಸೂಕ್ಷ್ಮತೆಯನ್ನು, ಕಲಾಕಾರನ ಮನಸ್ಸನ್ನು, ಇತಿಹಾಸಕಾರನ ಗ್ರಹಿಕೆಯನ್ನು ಹೊಂದಿರಬೇಕು—ಎಂದರೆ ತಪ್ಪಾಗಲಾರದು. ಆಯಾ ಸ್ಥಳದ ಜನರು ಶಾಸನಗಳ ಬಗ್ಗೆ ನಮ್ಮನ್ನೇ ಕೇಳಬಹುದು. ಆಗ ಪೂರ್ಣವಾಗಿಯಲ್ಲ ದಿದ್ದರೂ, ಸ್ವಲ್ಪ ಪ್ರಮಾಣದಲ್ಲಾದರೂ ಶಾಸನಗಳ ಬಗ್ಗೆ ತಿಳಿಸಬೇಕಾಗುತ್ತದೆ. ಈ ವೇಳೆಯಲ್ಲಿ ಶಾಸನಗಳನ್ನು ಕಾಪಾಡುವ, ಉಳಿಸಿಕೊಳ್ಳುವ ಬಗ್ಗೆಯೂ ಒಂದೆರಡು ಮಾತು ಹೇಳಬೇಕು. ಶಾಸನವನ್ನು ನೋಡಲು ಹೋದ ನಮ್ಮನ್ನು ಕೆಲವರು ಈ ಶಾಸನವನ್ನು ಓದಿ ನೋಡೋಣ ಎಂದು ಕೇಳುತ್ತಾರೆ. ಆಗ ಓದಲು ಬಂದರೆ ಓದಿ ತೋರಿಸಬೇಕು. ಬರದಿದ್ದರೂ, ಅವಮಾನವಾಗಬಾರದು ಎಂದು ತಪ್ಪುತಪ್ಪು ಓದಿ ಹೇಳಬಾರದು. ಇಂತಹ ವೇಳೆಯಲ್ಲಿ, ಇದರ ಪಾಠವನ್ನು ನಿಮಗೆ ಕಳುಹಿಸಿಕೊಡು ತ್ತೇನೆ ಎಂದು ಹೇಳಿ ಅವರಿಂದ ವಿಳಾಸ ಪಡೆದುಕೊಳ್ಳಬೇಕು.

ಹೀಗೆ ಈ ಮೇಲ್ಕಂಡ ಕೆಲವು ಕ್ರಮಗಳನ್ನು ಅನುಸರಿಸಿದರೆ ಶಾಸನಗಳ ಕ್ಷೇತ್ರ ಕಾರ್ಯ ಕೈಗೊಳ್ಳುವವರಿಗೆ ಸ್ವಲ್ಪವಾದರೂ ಅನುಕೂಲವಾಗಬಹುದು.

————

ಟೀಕೆ – ಟಿಪ್ಪಣಿ

1. ಪಂಪ ಭಾರತ–ಮೊದಲ ಆಶ್ವಾಸ–ಪದ್ಯ–77–ಒಂದು ಮರುಪ್ರತಿಕ್ರಿಯೆ

—ಕೆ. ಎಸ್. ಮಧುಸೂದನ

1. ಉಲ್ಲೇಖ : (ಅ) ಪಂಪಭಾರತದ ಆಶ್ವಾಸ 1 ಪದ್ಯ 77ರ ಪಾಠ ನಿರ್ಣಯ, ಅನ್ವಯಕ್ರಮ ಹಾಗೂ ಅರ್ಥ ನಿಷ್ಕರ್ಷೆ—ಕೆ.ಎಸ್. ಮಧುಸೂದನ (ಸಾಧನೆ –ಸಂಪುಟ 20 ; ಸಂಚಿಕೆ 1–4, ಜನವರಿ–ಡಿಸೆಂಬರ್ 1991).

(ಆ) ಪಂಪ ಭಾರತ–ಮೊದಲ ಆಶ್ವಾಸ–ಪದ್ಯ–77–ಒಂದು ಪ್ರತಿಕ್ರಿಯೆ – ಕೆ. ವಿ. ಶ್ರೀನಿವಾಸ ಮೂರ್ತಿ (ಕರ್ನಾಟಕ ಲೋಚನ–ಸಂಪುಟ-5, ಸಂಚಿಕೆ–1, ಜೂನ್ 1992)

2. ಉಲ್ಲೇಖ (ಅ)ದ ನನ್ನ ಲೇಖನಕ್ಕೆ ಉಲ್ಲೇಖ (ಆ)ದ ಪ್ರತಿಕ್ರಿಯೆಗೆ ಪ್ರತಿಕ್ರಿಯಿಸುವುದು ನನ್ನ ಈ ಕಿರು ಟಿಪ್ಪಣಿಯ ಉದ್ದೇಶ :—

3 ಅಂಬು + ಎ = ಅಂಬೆ – ಎಂಬ ವಿಷಯವನ್ನು ಕುರಿತು,

ಅಂಬು+ಎ=ಅಂಬೆ ಎಂದಾದಾಗ ಅದು ಅವಧಾರಣಾರ್ಥದಲ್ಲಿ ಆಗುತ್ತದೆ. 'ಎ' ತೃತೀಯಾ ವಿಭಕ್ತಿ ಪ್ರತ್ಯಯ 'ಅಂಬು' ಪ್ರಕೃತಿಗೆ ಸೇರಿದಾಗ ಅಂಬು+ಎ= ಅಂಬಿನೆ (=ಅಂಬಿನಿಂದ ಎಂಬ ಅರ್ಥದಲ್ಲಿ) ಆಗುತ್ತದೆಯೇ ಹೊರತು ಅಂಬೆ ಆಗುವುದಿಲ್ಲ. ನಾನು ಈ ಅಂಶವನ್ನು ನನ್ನ ಲೇಖನದಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇನೆ. ಇದಕ್ಕೆ ಪೂರಕವಾದ ಸಂದರ್ಭವನ್ನು ಸಹೃದಯರ ಅವಗಾಹನೆಗಾಗಿ ಇನ್ನೊಮ್ಮೆ ಉದ್ಧರಿಸುತ್ತಿದ್ದೇನೆ.

"ಡಾ|| ಡಿ. ಎಲ್. ಎನ್. ಅವರು ನೀಡಿರುವ ಅರ್ಥವೇನೊ ಚೆನ್ನಾಗಿದೆ. ಅವರು 'ಎನ್ನಂಬೆ' ಎಂಬಲ್ಲಿ ಬರುವ 'ಅಂಬೆ' ಎಂಬುದಕ್ಕೆ 'ಬಾಣವೇ' ಎಂಬರ್ಥ ನೀಡಿದ್ದಾರೆ. ಆದರೆ ಅವರ ಅನ್ವಯವಾದ—ಎನ್ನಂ ಪರಂ ನಂಬಿದ ಅಂಬೆಯೊಳ್ ಎನ್ನ ಅಂಬೆ [ವ]ಲಂ ವಿವಾಹ ವಿಧಿಯಂ ಮಾಟ್ಪಿಂ—ವ್ಯಾಕರಣಬದ್ಧವಾಗಿ ಸರಿಯಾದ ವಾಕ್ಯವಾಗುವುದಿಲ್ಲ. ಅದಕ್ಕೆ ಹೊಸಗನ್ನಡದಲ್ಲಿಯೂ ಈ ವಾಕ್ಯ 'ನನ್ನನ್ನು ವಿಶೇಷವಾಗಿ ನಂಬಿದ ಅಂಬೆಯಲ್ಲಿ ನನ್ನ ಬಾಣವೇ ನಿಶ್ಚಯವಾಗಿಯೂ ಮದುವೆಯ

ಕಾರ್ಯವನ್ನು ಮಾಡುತ್ತೇನೆ' ಎಂಬ ತಪ್ಪು ವಾಕ್ಯವಾಗುತ್ತದೆ. ಒಂದು ವೇಳೆ 'ಮಾಟ್ಪಿಂ'ಗೆ ಬದಲು ಮಾಟ್ಕುಂ' ಎಂದು ಇದ್ದಿದ್ದರೆ ಸರಿಹೋಗುತ್ತಿತ್ತು. ಆದರೆ 'ಟ್ಕುಂ' ಎಂಬುದನ್ನು 'ಟ್ಪಿಂ' ಎಂದು ಲಿಪಿಕಾರ ತಿದ್ದುವುದಿಲ್ಲ. ಹಾಗೆಯೇ 'ಮಾಟ್ಪಿಂ'ಗೆ ಬದಲು 'ಮಾಟ್ಪುದು' ಇರಬೇಕಿತ್ತು ಎಂದುಕೊಂಡರೆ, ಆಗ ಛಂದೋಭಂಗವಾಗುತ್ತದೆ ಹಾಗೂ ಪಾಠ ಅಷ್ಟೊಂದು ವ್ಯತ್ಯಾಸವಾಗಲು ಸಾಧ್ಯವಿಲ್ಲ. 'ಅಂಬೆ' ಶಬ್ದದ 'ಎ' ತೃತೀಯೆ ಎಂದುಕೊಂಡರೂ, ಅಂಬು+ಎ=ಅಂಬೆ' ಆಗುವುದಿಲ್ಲ, 'ಅಂಬಿನೆ' ಎಂದಾಗುತ್ತದೆ. ಆದ್ದರಿಂದ ಡಾ|| ಡಿ.ಎಲ್.ಎನ್. ಅವರು ನೀಡಿರುವ ಅರ್ಥವೂ ಸಮರ್ಪಕವಾಗಿಲ್ಲ.'

4. ಶ್ರೀ ಕೆ. ವಿ. ಶ್ರೀನಿವಾಸಮೂರ್ತಿಯವರು ತಮ್ಮ ಪ್ರತಿಕ್ರಿಯೆಯಲ್ಲಿ ಒಂದೆಡೆ "....ವಿ.ಸೀ.ಯವರ ಅಭಿಪ್ರಾಯವೂ ಇದೇ ಆಗಿತ್ತು ಎಂದು ಸೂಚಿಸಿದ್ದಾರೆ" ಎಂದು ಬರೆದಿದ್ದಾರೆ. ಆದರೆ ವಾಸ್ತವವಾಗಿ ನಾನು ಅಡಿಟಿಪ್ಪಣಿಯಲ್ಲಿ ಸೂಚಿಸಿರುವ ವಾಕ್ಯ ಹೀಗಿದೆ : " 'ಲಂ' ಎಂಬ ಅಕ್ಷರವನ್ನು 'ಲಾಂ' ಎಂದು ತಿದ್ದುಪಾಟು ಮಾಡಿಕೊಳ್ಳಬೇಕು ಎಂದು ಗುರುಗಳಾದ ದಿ|| ಎಂ.ವಿ.ಸೀ. ಅವರು ನನಗೆ ತಿಳಿಸಿದ್ದರು."

5. ಈ ಪದ್ಯಕ್ಕೆ ಸಂಬಂಧಿಸಿದ ನನ್ನ ಅರ್ಥಗ್ರಹಿಕೆಯನ್ನು ಇನ್ನೊಮ್ಮೆ ಸಹೃದಯರ ಮುಂದೆ ಸಂಗ್ರಹವಾಗಿ ಮಂಡಿಸುತ್ತಿದ್ದೇನೆ :

(ಅ) ಸಮಸ್ಯೆಯ ಭಾಗ

........ಎನ್ನಂ ಕರಂ ನಂಬಿದಂ
ಬೆಯೊಳೆನ್ನಂಬೆ³ [ವ] ಲಂ ವಿವಾಹವಿಧಿಯಂ ಮಾಟ್ಪಿಂ ಪೆಜಿರ್
ಮಾಟ್ಪರೇ ||

3. ವೊ (ಕ, ಖ, ಘ)

(ಆ) ಇದರ ಪಾಠವನ್ನು ನಾನು ಈ ಕೆಳಕಂಡಂತೆ ಪರಿಷ್ಕರಿಸಿರುತ್ತೇನೆ :

........ಎನ್ನಂ ಕರಂ ನಂಬಿದಂ
ಬೆಯೊಳೆನ್ನಂಬೆವೊ³ [ಲಾಂ] ವಿವಾಹವಿಧಿಯಂ ಮಾಟ್ಪಿಂ ಪೆಜಿರ್
ಮಾಟ್ಪರೇ ||

3. ಲಂ (ಕ, ಖ, ಘ)

(ಇ) ಇದರ ಅನ್ವಯ

ಎನ್ನ ಅಂಬೆವೊಲ್ ಎನ್ನಂ ಕರಂ ನಂಬಿದ ಅಂಬೆಯೊಳ್, ಶಂತನು ಸುತಂಗೆ, ಆಂ ವಿವಾಹ ವಿಧಿಯುಂ ಮಾಟ್ಪಿಂ, ಪೆಜಿರ್ ಮಾಟ್ಪರೇ ?

(ಈ) ಇದರ ಅರ್ಥ

ನನ್ನ ತಾಯಿಯು ಹಾಗೆ ನನ್ನನ್ನು ತುಂಬಾ ನಂಬಿಕೊಂಡಿರುವ ಅಂಬೆಯು ಜತೆಯಲ್ಲಿ, ಭೀಷ್ಮನಿಗೆ ನಾನು ವಿವಾಹ ವಿಧಿಯನ್ನು ಮಾಡುತ್ತೇನೆ, ಬೇರೆಯವರು ಮಾಡುವರೇ ?

6. ಹೀಗಾಗಿ ಶ್ರೀ ಕೆ. ವಿ. ಶ್ರೀನಿವಾಸಮೂರ್ತಿಯವರ ಪ್ರತಿಕ್ರಿಯೆಯನ್ನು ಗಮನಿಸಿದ ಅನಂತರವೂ ನಾನು ಸೂಚಿಸಿರುವ ಪಾಠ, ಅನ್ವಯ ಹಾಗೂ ಅರ್ಥ ಗಳನ್ನು ಪರಿಷ್ಕರಿಸಬೇಕೆಂದು ನನಗೆ ಅನ್ನಿಸುತ್ತಿಲ್ಲ.

2. ಕನಕದಾಸರ ಮೂರು ಅಪ್ರಕಟಿತ ಕೀರ್ತನೆಗಳು : ಸ್ಪಷ್ಟೀಕರಣ

—ಶ್ರೀಧರ. ಎಚ್. ಜಿ.

ಕನಕದಾಸರ ಮೂರು ಅಪ್ರಕಟಿತ ಕೀರ್ತನೆಗಳ ಬಗೆಗೆ ಟಿಪ್ಪಣಿ ಬರೆಯುತ್ತ ವಿದ್ವಾಂಸರಾದ ಮಾನ್ಯ ಶ್ರೀ ಸೀತಾರಾಮ ಜಾಗೀರ್‌ದಾರ್ ಇವರು, ಅವು ಸಿಕ್ಕಿರುವ ಬಗೆಗೆ ವಿವರಣೆಯನ್ನು ಕೇಳಿದ್ದಾರೆ. ಮಾತ್ರವಲ್ಲ ಸಿಕ್ಕಿರುವ ಮಾಹಿತಿಗಳು ಇರ ದಿದ್ದರೆ ಅದನ್ನು ನೈಜ್ಞಾನಿಕವಲ್ಲದವು ಎನ್ನುತ್ತ ಅವುಗಳನ್ನು ನಂಬುವುದೆಂತು ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ. ಒಂದು ವಿಷಯದ ಮೇಲೆ ವಿವರಣೆ ಕೇಳುವಾಗ ಮೃದುವಾಗಿಯೂ ಕೇಳುವುದಕ್ಕೆ ಬರುತ್ತದೆ. ಸರಸ್ವತಿಗೆ ದ್ರೋಹ ಬಗೆಯುವ ಅಪೇಕ್ಷೆ ನನಗಂತೂ ಇಲ್ಲ.

ಈ ಕೀರ್ತನೆಗಳು ಸಾಗರ ತಾಲೂಕಿನಿಂದ ಸುಮಾರು 15 ಕಿ.ಮಿ. ದೂರ ದಲ್ಲಿರುವ ಸಿದ್ದನ ಕೈ ಎಂಬ ಊರಿನಲ್ಲಿ ಸುಬ್ಬಣ್ಣ ಎಂಬುವರ ಮನೆಯಲ್ಲಿ ದೊರ ಕಿದೆ. ದೊರೆತ ಕೀರ್ತನೆಗಳು ತಾಳೆಗರಿಯಲ್ಲಿವೆ. ಆದರೆ ಈ ಆಕರ ಎಷ್ಟು ಪುರಾತನ ಎಂಬುದಕ್ಕೆ ಮೊದಲಿನ ಮತ್ತು ಕೊನೆಯ ಗರಿಗಳು ನಷ್ಟವಾಗಿವೆ. ಹೀಗಾಗಿ ಪ್ರತಿ ಮಾಡಿದವರ ಬಗೆಗೂ ಯಾವುದೇ ಮಾಹಿತಿ ದೊರೆಯುವುದಿಲ್ಲ.

———

ಗ್ರಂಥ ವಿಮರ್ಶೆ

ಗುಂಡ್ಮಿ ವಿಚಾರಪರ್ವ*

ದಿವಂಗತ ಗುಂಡ್ಮಿ ಚಂದ್ರಶೇಖರ ಐತಾಳರ ಸಂಸ್ಮರಣಾರ್ಥವಾಗಿ ಪ್ರಕಾಶಿತವಾಗಿರುವ ಈ ಪುಸ್ತಕದಲ್ಲಿ ದಿವಂಗತರ ೧೬ ಲೇಖನಗಳಿವೆ. ಲೇಖನಗಳು ಚಿಕ್ಕವಾದರೂ ವೈಚಾರಿಕ ಪರಿಪಕ್ವತೆಯಿಂದ ಅರ್ಥಗರ್ಭಿತವಾಗಿ ಮಾರ್ಮಿಕವಾಗಿ ಪ್ರಚಲಿತವಾದ ತಪ್ಪು ಅಭಿಪ್ರಾಯಗಳನ್ನು ತಿದ್ದಿಕೊಳ್ಳಲು ಪ್ರೇರಕವಾಗಿವೆ. ಮಾನ್ಯ ಲೇಖಕರಾದ ಗುಂಡ್ಮಿಯವರು (1936–1990) ಸಾಹಿತ್ಯಕ್ಷೇತ್ರದಲ್ಲಿ ಮಿಂಚಿ ಮಾಯವಾದವರು. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದು ಪ್ರೊ॥ ಎಸ್. ವಿ ಪರಮೇಶ್ವರ ಭಟ್ಟರ ಜೊತೆಗೂಡಿ ಸಾಹಿತ್ಯ ಕೃಷಿ ಮಾಡಿದವರು. ಬ್ರಾಹ್ಮಣಬಂಡಾಯ, ಮಾತೃಸಂಹಿತೆ ಮುಂತಾದ ಕೃತಿರಚನೆಗಳಿಂದ ಖ್ಯಾತರಾದವರು. 'ತಿಂಗಳ ಮುಡಿದವನು' ಎಂಬ ಅಂಕಿತದಲ್ಲಿ ವಚನರಚನೆಯನ್ನೂ ಮಾಡಿದ್ದಾರೆ. ಸ್ವತಃ ಕವಿ, ಲೇಖಕರು ಹಾಗೂ ಭಾವುಕರು.

ಪ್ರಸ್ತುತ ಕೃತಿಯಲ್ಲಿ ಧರ್ಮಕರ್ಮ ಸಂಯೋಗ, ಹುಟ್ಟು, ಜಾತಿ, ದೇವರು ಇದ್ದಾನೆಯೆ, ದೈವಸಾಕ್ಷಾತ್ಕಾರ ಹೇಗೆ, ಮದುವೆ, ಆಯುಸ್ಸನ್ನು ಹೆಚ್ಚಿಸಿಕೊಳ್ಳಬಹುದು, ಭೂತಾರಾಧನೆ, ಉಪನಯನ, ಗಾಯತ್ರೀಮಾಹಾತ್ಮ್ಯ, ಚಾತುರ್ವರ್ಣ್ಯ–ಎಂಬವು ಪ್ರಮುಖ ಲೇಖನಗಳಾಗಿವೆ. ದೈವಭಕ್ತಿಗೆ, ಆಧ್ಯಾತ್ಮಚಿಂತನೆಗೆ, ಲೋಕಹಿತಕ್ಕೆ ತೆರೆದ ಮನಸ್ಸಿನ ವೈಚಾರಿಕ ಲೇಖನಗಳು ಇಲ್ಲಿವೆ. ಅಭಿವ್ಯಕ್ತಿಯಲ್ಲಿ ವ್ಯಂಗ್ಯ, ವಿಡಂಬನೆಗಳೊಂದಿಗೆ ನಿಷ್ಪೃಷ್ಟತೆಯೂ ಅರ್ಥಗಾಂಭೀರ್ಯವೂ ನಿರ್ಭೀತಿಯಿಂದ ಇಲ್ಲಿ ತೆರೆದುಕೊಂಡಿವೆ. ಸಾಹಿತ್ಯಪ್ರಿಯರಿಗೆ, ಚಿಂತನಶೀಲರಿಗೆ ಅನುಭವದ ಪರ್ವ ಇದಾಗಿದೆ. ಭಾರದ್ವಾಜ ಪ್ರಕಾಶನದ ಕಲಾದರ್ಶನ ಮಾಸಪತ್ರಿಕೆಯಲ್ಲಿ ಪ್ರಕಟವಾದ ಲೇಖನಮಾಲೆಯ ಕಿರುಹೊತ್ತಗೆಯಿದು.

—ಟಿ. ಕೇಶವ ಭಟ್ಟ

---

* ಗುಂಡ್ಮಿ ವಿಚಾರ ಪರ್ವ : ಸಂ. ವಿ. ಬಿ. ಹೊಸಮನೆ. ಪ್ರ : ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು. ಬೆಲೆ ರೂ. 15-00, ಪುಟಗಳು : 18+65 1992.

ಕಾಳಿದಾಸನ ಕೃತಿಗಳು*

ಹೊರನಾಡಿನಲ್ಲಿ ಕನ್ನಡ ಕೃತಿಗಳನ್ನು ಪ್ರಕಟಿಸುವ ಧೈರ್ಯವಿಟ್ಟುಕೊಂಡಿರುವ ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗ, ಪ್ರೊ॥ ಎಸ್. ವಿ. ಪರಮೇಶ್ವರ ಭಟ್ಟರ 'ಕಾಳಿದಾಸನ ಕೃತಿಗಳು' ಎಂಬ ಹದಿಮೂರನೆಯ ಪುಸ್ತಕವನ್ನು ಕಳೆದ ವರ್ಷ ವಷ್ಟೆ ಪ್ರಕಟಿಸಿದೆ. ಧೈರ್ಯ ಮತ್ತು ಪ್ರೀತಿ ಕನ್ನಡ ಹೋರಾಟವೇ ಸರಿ

ಮುಂಬೈಯ ಕರ್ನಾಟಕ ಸಂಘದಲ್ಲಿ ಪ್ರೊ॥ ಎಸ್. ವಿ. ಪರಮೇಶ್ವರ ಭಟ್ಟರು ಅಲ್ಲಿನ ಸಹೃದಯ ಬಂಧುಗಳಿಗೆ ನೀಡಿದ ಪತ್ತಿ ಉಪನ್ಯಾಸದ ಮೂರು ಲೇಖನಗಳ ಸಂಕಲನವಿದು. ಕಾಳಿದಾಸನ ಪ್ರಸಿದ್ಧ ನಾಟಕವಾದ "ಅಭಿಜ್ಞಾನ ಶಾಕುಂತಲ", ಖಂಡಕಾವ್ಯವಾದ "ಮೇಘದೂತ" ಮತ್ತು ಮಹಾಕಾವ್ಯವಾದ "ಕುಮಾರ ಸಂಭವ" ಎಂಬ ಕೃತಿಗಳನ್ನು ಕುರಿತ ಮೂರು ಉಪನ್ಯಾಸಗಳ ಬರಹ ರೂಪ. ಸಾಮಾನ್ಯ ಸಹೃದಯರಿಗೆ ಕಾವ್ಯ ಸ್ವಾರಸ್ಯವನ್ನು ಶ್ರುತಪಡಿಸುವ ಉದ್ದೇಶವುಳ್ಳ ಈ ಕೃತಿಯಲ್ಲಿ ಮೂಲಕೃತಿಗಳ ಕಥೆಯನ್ನು ಹೇಳುತ್ತಲೇ ಕಥೆಯ ಸನ್ನಿವೇಶ, ಪಾತ್ರಚಿತ್ರಣ, ವರ್ಣನೆ, ಶೈಲಿ, ಭಾಷೆ, ಛಂದಸ್ಸುಗಳ ವಿಶೇಷತೆಯನ್ನು ವಿವರಿಸಿಕೊಂಡು ಹೋಗಲಾಗಿದೆ. ಹಾಗೆ ವಿವರಿಸಿಕೊಂಡು ಹೋಗಿರುವ ಕ್ರಮ ಅಚ್ಚುಕಟ್ಟಾಗಿದ್ದು, ಮೂಲದ ಕಥೆ ಓದುವವರಿಗೆ ಅರ್ಥವಾಗದಿದ್ದಲ್ಲಿ ನೆರವಾಗುತ್ತದೆ.

'ಮೇಘದೂತದಲ್ಲಿ ಕಾಳಿದಾಸನ ಕಲಾವಿಲಾಸ' ಎಂಬ ಮೊದಲ ಉಪನ್ಯಾಸ ಲೇಖನದಲ್ಲಿ ಮೇಘದೂತ ಕಾವ್ಯದ ಹಿರಿಮೆಯನ್ನು, "ಕಾಳಿದಾಸನು ಮೇಘದೂತ ಕಾವ್ಯವನ್ನು ರಚಿಸಿ ಇಂತಹ ದೂತ ಕಾವ್ಯಗಳ ಉದ್ಘಾಟನಾ ಸಮಾರಂಭವನ್ನೇ ನೆರವೇರಿಸಿದನು, ಎಂದು ಹೇಳಬೇಕಾಗುತ್ತದೆ. ಈ ದೂತಕಾವ್ಯದ ಅನಂತರ ಕಾಕ ದೂತ, ಪವನದೂತ, ಹಂಸದೂತ ಮುಂತಾದ ದೂತಕಾವ್ಯಗಳು ಹುಟ್ಟಿಕೊಂಡವು. ಆದರೆ ಇವೆಲ್ಲವೂ ಶ್ರೀ ಬೇಂದ್ರೆಯವರು ಹೇಳಿರುವಂತೆ ಸಾಹಿತ್ಯಾಕಾಶದಲ್ಲಿ ಗರುಡನ ಮುಂದಿನ ಗುಬ್ಬಿಗಳ ಹಾಗೆ ಹಾರಿಹೋದವು' ಎಂದು ಗುರುತಿಸಿದ್ದಾರೆ.

ಕುಬೇರನ ಪ್ರಜೆಗಳಾದ ಯಕ್ಷರು ಸ್ವಭಾವತಃ ಭೋಗಪ್ರಿಯರು. ಇಂತಹರಲ್ಲಿ ಒಬ್ಬನಾದ ಯಕ್ಷನನ್ನು ವಿಪ್ರಲಂಭಶೃಂಗಾರದ ಕಥೆಯ ನಾಯಕನನ್ನಾಗಿ ಮಾಡಿಕೊಂಡು ಯಕ್ಷನ ವಿರಹವೇದನೆಯ ತೀವ್ರತೆಯನ್ನು ತಂದುಕೊಡಲು ಅಧಿಕಾರದಲ್ಲಿ

---

* ಕಾಳಿದಾಸನ ಕೃತಿಗಳು—ಎಸ್. ವಿ. ಪರಮೇಶ್ವರಭಟ್ಟ, ಮುಂಬಯಿ ವಿ.ವಿ. ಕನ್ನಡ ವಿಭಾಗ.

ಎಚ್ಚರತಪ್ಪಿ ನಡೆದ ಯಕ್ಷನನ್ನು ಒಂದು ವರ್ಷ ಕಾಂತೆಯಿಂದ ದೂರನಾಗಿರುವಂತೆ ಅವನ ಒಡೆಯ ಶಪಿಸುವುದರೊಂದಿಗೆ ಅಗಲಿಕೆಯ ದುರ್ಭರತೆ ಮೊದಲೇ ಓದುಗನಿಗಾಗುವಂತೆ ಕಾಳಿದಾಸ ಕೌಶಲದಿಂದ ಕಾವ್ಯಕ್ಕೆ ರೂಪ ಕೊಟ್ಟಿದ್ದಾನೆ ಎಂದು ಕತೆಯ ಪ್ರತಿ ಭಾಗವನ್ನೂ ವಿವರಿಸಿಕೊಂಡು ಹೋಗಿದ್ದಾರೆ. ಅವರು ಹೇಳುವ ಹಾಗೆ ಮೇಘದೂತ ಇದೊಂದು ಪ್ರೇಮ ಸಂಹಿತೆ. ಇದೊಂದು ಸ್ನೇಹಸೂಕ್ತ. ಮಾನವನಲ್ಲಿಯೂ ಪ್ರಕೃತಿಯಲ್ಲಿಯೂ ಅಭೇದ ಭಾವವನ್ನು ಕಲ್ಪಿಸಿ ಅವೆರಡೂ ಒಂದಕ್ಕೊಂದು ಪೂರಕವಾಗಿ ತಮ್ಮ ತಮ್ಮ ಕಲ್ಯಾಣವನ್ನು ಸಾಧಿಸಿಕೊಳ್ಳುತ್ತಿವೆ ಎಂಬುದನ್ನು ತೋರಿಸಿದ್ದಾನೆ.

"ಕುಮಾರಸಂಭವ"ದಲ್ಲಿ ಕಾಮದಹನ ಚಿತ್ರದ ಅಂತರಾರ್ಥ" ಎಂಬ ಲೇಖನದಲ್ಲಿ "ಮಹಾಕವಿ ಕಾಳಿದಾಸನು ತನ್ನ ಕುಮಾರಸಂಭವ ಕಾವ್ಯದಲ್ಲಿ ಕಾಮದಹನದ ಚಿತ್ರ ಪ್ರತಿಮೆಯೊಂದನ್ನು ತಂದೊಡ್ಡಿ ಕಾವ್ಯದಲ್ಲಿ ಅಡಗಿರುವ ಘನತರವಾದ ಹಲವು ತತ್ತ್ವಗಳನ್ನು ಬಹಳ ಮಾರ್ಮಿಕವಾಗಿ ಪ್ರಕಾಶಪಡಿಸಿದ್ದಾನೆ. ಪಾರ್ವತೀಪರಮೇಶ್ವರರ ಪ್ರೇಮವು ಪರಾರ್ಥ ಮೂಲವಾದಂತಹದು. ಪವಿತ್ರವಾದ ಭಾವನೆಗಳನ್ನು ಘೋಷಿಸುವಂತಹದು. ಸಂಸಾರ ಸಮಾಜಗಳೆರಡರ ಶುಭಕ್ಕೂ ಶಿವಕ್ಕೂ ಸಾಧಕವಾಗಿ........ಸತ್ಸಂತಾನಾಪೇಕ್ಷೆಯಿಂದ ವಿಧ್ಯುಕ್ತ ವಿವಾಹದ ಚಂದ್ರಿಕೆಯ ಧಾವಳ್ಯದಿಂದ ಪುನೀತವಾದಂತಹುದು............ಜೀವನ ವಿಕಾಸದ ಹಾದಿಯಲ್ಲಿ ಕಂಟಕವಾಗಿ ಬರುವ ಈ ಕಾಮನನ್ನು ಸುಟ್ಟಲ್ಲದೆ ನಿರ್ಮಲ ಪ್ರೇಮ ನಮಗೆ ಅನುಭವವೇದ್ಯವಾಗುವುದಿಲ್ಲ.... ..." ಎಂದು ಕುಮಾರಸಂಭವದ ಕಥೆಯನ್ನು ಸರಳವಾಗಿ ವಿವರಿಸಿಕೊಂಡು ಹೋಗಿದ್ದಾರೆ.

ಹಾಗೆಯೇ 'ಅಭಿಜ್ಞಾನ ಶಾಕುಂತಲದಲ್ಲಿ ಕಾಳಿದಾಸನ ಹಿರಿಮೆ' ಎಂಬ ತಮ್ಮ ಪೂರನೆಯ ಉಪನ್ಯಾಸದಲ್ಲಿ ಮೂಲವನ್ನು ಓದುವಾಗ ಅರ್ಥವಾಗದಿದ್ದಲ್ಲಿ ಅಂಥವರಿಗೆ ಅರ್ಥವಾಗಲು ಸಹಾಯವಾಗುವ ಹಾಗೆ ಯಾವುದೇ ವಿಶೇಷ ವಿಮರ್ಶಾತ್ಮಕ ದೃಷ್ಟಿಕೋನವಿಲ್ಲದೆ ಕತೆ ಹೇಳಿಕೊಂಡು ಹೋಗಿದ್ದಾರೆ. ಈ ಕೃತಿಯನ್ನು ಕುರಿತು ಈಗಾಗಲೆ ಬಂದಿರುವ ಬೇರೆ ಬೇರೆ ವಿಮರ್ಶೆಗಳ ಮುಂದೆ ಇದು ಬಹಳ ಸಪ್ಪೆಯಾದುದು.

ಒಟ್ಟಾರೆ ಇದೊಂದು ಸಹೃದಯ ವಿಮರ್ಶೆಯ ಪ್ರಯತ್ನವೆನ್ನಬಹುದು.

—ಲೋಕೇಶ್ವರಪ್ಪ ಕೆ. ಬಿ.

ವಸ್ತು ಸಂಗ್ರಹ

'ಕರ್ನಾಟಕ ರತ್ನ' ಪ್ರಶಸ್ತಿ

ಕರ್ನಾಟಕ ಸರ್ಕಾರ ವ್ಯವಸ್ಥೆ ಮಾಡಿರುವ ಈ ಪ್ರಶಸ್ತಿಯನ್ನು ನವೆಂಬರ್ ತಿಂಗಳಿನಲ್ಲಿ ನಡೆದ ಭಾರೀಪ್ರಚಾರದ ಅದ್ಧೂರಿ ಸಮಾರಂಭದಲ್ಲಿ ಡಾ|| ರಾಜಕುಮಾರ್ ಹಾಗೂ ಡಾ|| ಕುವೆಂಪು ಅವರುಗಳಿಗೆ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿ ನಿಜವಾದ ಕಾಳಜಿ ಮತ್ತು ಒಂದು ಪರಂಪರೆಯ ದೃಷ್ಟಿಯಿಲ್ಲದೆ ಕೇವಲ ಸರ್ಕಾರವೊಂದರ ಪ್ರಚಾರದ ದೃಷ್ಟಿಯಿಂದ ಹುಟ್ಟಿಕೊಂಡದ್ದರಿಂದ ಸಾಕಷ್ಟು ವಾದ-ವಿವಾದಕ್ಕೆ ಒಳಗಾಯಿತು. ಒಂದು ವರ್ಗದ ಸಾಹಿತಿಗಳು ಪ್ರಶಸ್ತಿಯನ್ನು ನಿರಾಕರಿಸುವಂತೆಯೂ ಕೇಳಿಕೊಂಡಿದ್ದರು. ಭ್ರಷ್ಟ ಆಡಳಿತಕ್ಕೆ ಹೆಸರಾಗಿದ್ದ ಸರ್ಕಾರ ಈ ಪ್ರಶಸ್ತಿ ಸೃಷ್ಟಿಸಿ ತನ್ನ ಮೇಲಿನ ಆರೋಪವನ್ನು ಮುಚ್ಚಿಕೊಳ್ಳಲು ಇದನ್ನು ಬಳಸಿಕೊಳ್ಳುತ್ತಿದೆ ಎಂಬ ಕೂಗೂ ಇದರ ಹಿಂದೆ ಇತ್ತು.

ಭಾರತ ಸರ್ಕಾರದ 'ಭಾರತ ರತ್ನ'ಕ್ಕೆ ಕುವೆಂಪು ಅವರನ್ನು ಸಕಾಲದಲ್ಲಿ ಶಿಫಾರಸು ಮಾಡಲಾಗದೆ ಅದಕ್ಕೆ ಪರ್ಯಾಯವಾಗಿ 'ಕರ್ನಾಟಕ ರತ್ನ'ವನ್ನು ಕೊಡಲು ನಿರ್ಧಾರ ಮಾಡಿದ್ದು ಆತುರದ ಮತ್ತು ಏಕಪಕ್ಷೀಯವಾದ ನಿರ್ಣಯವಾಗಿ ಈ ಪ್ರಶಸ್ತಿಗೆ ಸಲ್ಲಬೇಕಾದ ಮೌಲ್ಯವನ್ನು ಅದು ಗಳಿಸಲಾಗದೆ ಹೋದದ್ದು ವಿಪರ್ಯಾಸ. ಈಗಾಗಲೆ ಪಂಪಪ್ರಶಸ್ತಿ, ಕನಕ-ಪುರಂದರ ಪ್ರಶಸ್ತಿಗಳಂಥ ಉನ್ನತ ಪ್ರಶಸ್ತಿಗಳಿದ್ದರೂ ಸಮಗ್ರ ಕರ್ನಾಟಕದ ಹಿತಾಸಕ್ತಿಯನ್ನು ಕುರಿತಂತೆ ಎಲ್ಲಕ್ಷೇತ್ರಗಳನ್ನು ಪರಿಗಣಿಸಿ ಈಗ ಆರಂಭಗೊಂಡಿರುವ ಈ ಪ್ರಶಸ್ತಿಯನ್ನು ಒಂದು ಪರಂಪರೆಯಾಗಿ ಮುಂದುವರಿಸಿದಲ್ಲಿ ಇದರ ಮೌಲ್ಯವನ್ನು ಉಳಿಸಬಹುದಾಗಿದೆ. ಮುಂಬರುವ ಸರ್ಕಾರ ಇದನ್ನು ರಾಜಕೀಯ ಪ್ರಶ್ನೆಯಾಗಿ ಕೈಬಿಟ್ಟಲ್ಲಿ ಅದೂ ಒಂದು ವಿಪರ್ಯಾಸವಾಗುತ್ತದೆ.

ಸ್ಮಾರಕ ಸಂರಕ್ಷಣೆಗೆ ಸ್ವಯಂಸೇವಾಪಡೆ

– ರಾಯಚೂರಿನಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾಡೆಮಿಯ ಆರನೇ ಅಧಿವೇಶನದ ಸಮಾರೋಪ ಸಮಾರಂಭದಲ್ಲಿ ಖ್ಯಾತ ಶಾಸನತಜ್ಞ ಕೆ. ವಿ. ರಮೇಶ್ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕರ್ನಾಟಕ ಇತಿಹಾಸ ಅಕಾಡೆಮಿ ಪ್ರತಿವರ್ಷ ಇಂಥ ಒಂದೊಂದು ಇತಿಹಾಸ ಸಮ್ಮೇಳನಗಳನ್ನು ಸಂಘಟಿಸುವುದರ ಮೂಲಕ ಇತಿಹಾಸದ ಬಗ್ಗೆ ಜನಜಾಗೃತಿಯನ್ನು ಮಾಡುತ್ತಿದೆ. ವಿದ್ಯಾರ್ಥಿಗಳಿಗೆ ಇತಿಹಾಸ ಪರೀಕ್ಷೆಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸುತ್ತಿದೆ. ಸ್ಮಾರಕ ಸಂರಕ್ಷಣೆಗೆ ಸ್ವಯಂಸೇವಾ ಅಗತ್ಯ ಇಂದು ತೀವ್ರವಾಗಿದೆ ರಮೇಶ್ ಅವರು

ಅಭಿಪ್ರಾಯ ಪಟ್ಟಂತೆ ಸರ್ಕಾರ ಮತ್ತು ಇಲಾಖೆಗಳಿಂದ ಶತಮಾನ ಗತಿಸಿದರೂ ಸಾಧ್ಯವಾಗುವುದಿಲ್ಲ. ಆಯ್ದ ಕೆಲವು ಪ್ರಮುಖ ಸ್ಮಾರಕಗಳನ್ನು ರಕ್ಷಿಸಬಹುದಲ್ಲದೆ ಎಲ್ಲವನ್ನೂ ರಕ್ಷಿಸುವುದಿಲ್ಲ.

ಸ್ಮಾರಕಗಳು ಮತ್ತು ಪ್ರಾಚ್ಯವಸ್ತುಗಳ ರಕ್ಷಣೆಗೆ ಸ್ವಯಂ ಸೇವಾ ಪಡೆಗಳು, ಸಂಸ್ಥೆಗಳು ಹೆಚ್ಚುಹೆಚ್ಚು ಕಾಣಿಸಿಕೊಳ್ಳಬೇಕು. ಮುಖ್ಯವಾಗಿ ಸ್ಮಾರಕಗಳನ್ನು ಉಳ್ಳ ಪ್ರದೇಶದ ಜನರಲ್ಲಿ ಅಭಿಮಾನ, ಆಸಕ್ತಿ ಮೂಡಿ ಸ್ವಯಂರಕ್ಷಣೆಗೆ ಮುಂದಾಗಬೇಕು. ಈ ನಿಟ್ಟಿನಲ್ಲಿ ಸಮೂಹ ಮಾಧ್ಯಮಗಳೂ ಪ್ರಭಾವಿ ಪಾತ್ರ ಬೀರಬಲ್ಲವು. ತರಂಗದಲ್ಲಿ ಹೊಯ್ಸಳ ದೇವಾಲಯಗಳ ಸಮಗ್ರ ಸಮೀಕ್ಷೆ ನಡೆಸಿದನಂತರ ಧರ್ಮಸ್ಥಳದ ವೀರೇಂದ್ರ ಹೆಗಡೆ ಅವರು ಪ್ರಾಚೀನ ದೇವಾಲಯಗಳ ರಕ್ಷಣೆ ಜೀರ್ಣೋದ್ಧಾರಕ್ಕೆ ನೆರವು ನೀಡುವ ಒಂದು ಸಮಿತಿಯನ್ನೇ ಶಾಶ್ವತವಾಗಿ ರಚಿಸಿದ್ದಾರೆ. ಪ್ರತಿಷ್ಠಾನ, ಧರ್ಮಸ್ಥಳ, ಪರಿಷತ್ತು, ಕೆಲವು ಧಾರ್ಮಿಕ ಮಠಗಳು ಅವರೆಲ್ಲಾ ಪ್ರಾಚ್ಯವಸ್ತು ಓಲೆಗರಿ ಗ್ರಂಥಗಳನ್ನು ಸಂರಕ್ಷಿಸುವ ಕಾರ್ಯ ನಿರ್ವಹಿಸುತ್ತಿವೆ.

ಕೇರಳದ ಪ್ರಾಚ್ಯವಸ್ತು ಇಲಾಖೆ ಇತ್ತೀಚೆಗೆ ಅಪರೂಪದ ಅತಿಪ್ರಾಚೀನ ರಾಮಾಯಣ ಚಿತ್ರಸಂಪುಟವಿರುವ ಓಲೆಗರಿ ಗ್ರಂಥವನ್ನು ಸಂಗ್ರಹಿಸಿದೆ. ಅಧ್ಯಾತ್ಮ ರಾಮಾಯಣದ ಕತೆಗಳನ್ನು 359 ಚಿತ್ರಗಳಲ್ಲಿ ಬರೆಯಲಾಗಿರುವ ಈ ಗ್ರಂಥದಲ್ಲಿ ಅಲ್ಲಲ್ಲೆ ಕಥಾವಿವರಣೆಯಿದ್ದು ಸಂಸ್ಕೃತ ಭಾಷೆ ಮಲೆಯಾಳಿ ಲಿಪಿಯಲ್ಲಿದೆ. ವಿಶ್ವದ ಅತ್ಯಂತ ಹಳೆಯ ಗ್ರಂಥವೆಂದು ದಾಖಲಾಗಿರುವ ಈಜಿಪ್ಟಿನ ಕೈರೋ ಸಂಗ್ರಹಾಗಾರದಲ್ಲಿರುವ 1600 ವರ್ಷಗಳ ಹಿಂದಿನ ಸ್ತೋತ್ರಗೀತೆಗಳ ಪುಸ್ತಕವನ್ನು ಅದು ಇತ್ತೀಚೆಗೆ ಪ್ರದರ್ಶಿಸಿದೆ. ಇತ್ತೀಚೆಗೆ ಪ್ರತಿಷ್ಠಾನದ ಸಹಾಯಕರಾದ ಶ್ರೀಕುಮಾರ್ ಅವರು ಒಂದು ದಿನ ಬೆಳಗ್ಗೆ ತಮ್ಮ ಮನೆಯ ಮುಂದಿನ ರಸ್ತೆಯ ಮೇಲೆ ಚೆಲ್ಲಾಡಿದ್ದ ಓಲೆಗರಿ ಗ್ರಂಥಗಳನ್ನು ಸಂಗ್ರಹಿಸಿ ಪ್ರತಿಷ್ಠಾನಕ್ಕೆ ಕೊಟ್ಟಿದ್ದಾರೆ. ಇಂಥ ಎಷ್ಟೋ ಅಪೂರ್ವವಾದ ಆಸ್ತಿ ಸ್ವಯಂಸೇವಾ ರಕ್ಷಣೆಯಿಂದ ಬೆಳಕಿಗೆ ಬರಬಲ್ಲವು.

ಗಮಕ ಸಮ್ಮೇಳನ

ಕರ್ನಾಟಕ ಗಮಕ ಕಲಾ ಪರಿಷತ್ತು ಗಮಕ ಕಲೆಯನ್ನು ಬೆಳೆಸಲು–ಉಳಿಸಲು ಹಲವಾರು ಸಕ್ರಿಯ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ ಗಮಕ ಪರೀಕ್ಷೆಗಳನ್ನು ನಡೆಸುವುದು, ಕವಿ ಜಯಂತಿಗಳನ್ನು ಆಚರಿಸುವುದು, ವಿವಿಧ ಗಮಕ ರೂಪಕ ಕಾರ್ಯಕ್ರಮಗಳನ್ನು ನಡೆಸುವುದರೊಂದಿಗೆ ಪ್ರತಿವರ್ಷ ಗಮಕ ಸಮ್ಮೇಳನಗಳನ್ನೂ ನಡೆಸುತ್ತಿದೆ ಪ್ರತಿಷ್ಠಾನದಂತೆ ಸ್ವಂತ ಕಟ್ಟಡ, ಅಗತ್ಯ ಆರ್ಥಿಕ ನೆರವು ಇಲ್ಲದಿದ್ದರೂ ಗಮಕಿ ಎಂ. ರಾಘವೇಂದ್ರರಾವ್ ಅವರ ಕರ್ತೃತ್ವಶಕ್ತಿ, ಮತ್ತು ಶ್ರದ್ಧೆಗಳಿಂದ

ಗಮಕ ಕಲಾಪರಿಷತ್ತು ಜಿ. ನಾರಾಯಣರಂಥ ಸಂಘಟನಾ ಸಮರ್ಥರ ಸಹಕಾರ ದಿಂದ ಉತ್ತಮ ಕಾರ್ಯವನ್ನು ನಡೆಸುತ್ತಿದೆ.

ಪ್ರತಿಷ್ಠಾನಕ್ಕೆ ಕಟ್ಟಡವಾದರೆ ಅದರಲ್ಲಿ ಗಮಕ ಪರಿಷತ್ತಿಗೂ ಜಾಗ ಪಡೆಯ ಬಹುದೆಂದು ಜಿ. ನಾರಾಯಣರವರು ಒಮ್ಮೆ ಹೇಳಿದ್ದರು. ಈಗ ಗಮಕ ಪರಿಷತ್ತೇ ಕಟ್ಟಡ ಮಾಡಿದರೆ ಪ್ರತಿಷ್ಠಾನ ಜಾಗ ಪಡೆಯಬೇಕಾಗುತ್ತದೋ ಏನೋ! ಪ್ರತಿಷ್ಠಾನದ ಕಟ್ಟಡ ವಿಚಾರ ಅಷ್ಟು ನಿಧಾನಗತಿಯಲ್ಲಿದೆ. ಆರು ವರ್ಷಗಳಾದರೂ ನಿವೇಶನವನ್ನು ನಮ್ಮ ಹೆಸರಿಗೆ ಸರ್ಕಾರ ಇನ್ನೂ ಕೊಡುವುದರಲ್ಲೇ ಇದೆ.

ಗಮಕ ಕಲೆ ಅತ್ಯಂತ ಪ್ರಾಚೀನ ಕಲೆ. ಪ್ರಾಚೀನ ಸಾಹಿತ್ಯ, ಪ್ರಾಚ್ಯವಸ್ತು ಗಳು, ಸ್ಮಾರಕಗಳ ಮೇಲೆ ಅರಿವು ಮೂಡಿಸಲು ಗಮಕ ಕಲೆಯು ಸಹಾಯವಾಗು ತ್ತದೆ. ಸರ್ಕಾರ ಬೇರೆಬೇರೆ ಕಲೆಗಳನ್ನು ಪೋಷಿಸಲು ಬೇರೆಬೇರೆ ಅಕಾಡೆಮಿಗಳನ್ನು ರಚಿಸಿರುವಂತೆ ಗಮಕ ಕಲಾ ಪೋಷಣೆಗೆ ಪ್ರತ್ಯೇಕ ಗಮಕ ಕಲಾ ಅಕಾಡೆಮಿಯನ್ನು ರಚಿಸಬೇಕೆಂದು ಗಮಕ ಸಮ್ಮೇಳನ ಕರೆ ಕೊಟ್ಟಿರುವುದು ಉಚಿತವಾಗಿದೆ. ಈಗಿನ ಯಾವ ಅಕಾಡೆಮಿಯಲ್ಲೂ ಈ ಕಲೆ ಸೇರ್ಪಡೆಯಾಗಿಲ್ಲದಿರುವುದರಿಂದ ಇದರ ಪ್ರೋತ್ಸಾಹದ ಅಗತ್ಯವನ್ನು ಮನಗಂಡು ಸರ್ಕಾರ ಇತ್ತ ಗಮನಹರಿಸುವುದು ಅಗತ್ಯ ವಾಗಿದೆ.

———

ಪ್ರತಿಷ್ಠಾನ ವಾರ್ತೆ

ಪುಸ್ತಕ ಬಿಡುಗಡೆ ಮತ್ತು ಸಾವಿತ್ರಮ್ಮ ದತ್ತಿನಿಧಿ ಸಾಹಿತ್ಯ ಪ್ರಶಸ್ತಿ ವಿತರಣೆ

30-7-92 ರಂದು ಗೋಖಲೆ ಸಂಸ್ಥೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ದತ್ತಿ ಉಪನ್ಯಾಸಗಳ ಸಂಗ್ರಹ 'ಕಾವ್ಯ ಇತಿಹಾಸ' ಮತ್ತು ದಶಮಾನೋತ್ಸವ ಕೃತಿ ಮಾಲೆಯ ನಾಲ್ಕನೆಯ ಪುಸ್ತಕ ಡಾ|| ಜಿ. ರಾಮಕೃಷ್ಣ ಅವರ 'ವೈಚಾರಿಕ ಜಾಗೃತಿ' ಪುಸ್ತಕಗಳನ್ನು ಪ್ರೊ|| ಜಿ. ಎಸ್. ಸಿದ್ಧಲಿಂಗಯ್ಯ ಅವರು ಬಿಡುಗಡೆ ಮಾಡಿದರು. ಸಾವಿತ್ರಮ್ಮ ದತ್ತಿನಿಧಿಯ ಎರಡನೆ ಸಾಹಿತ್ಯ ಪ್ರಶಸ್ತಿ ಮಕ್ಕಳ ಸಾಹಿತ್ಯ ಕೃತಿಯಾದ 'ಬೆಣ್ಣೆಹಕ್ಕಿ'ದ ಲೇಖಕ ಚಂದ್ರಗೌಡ ಕುಲಕರ್ಣಿ, ತಾಳಿಕೋಟೆ ಅವರಿಗೆ ಅಧ್ಯಕ್ಷರಾದ ಶ್ರೀ ಸಿಟ್ಟ್ಯಾನು ಶ್ರೀನಿವಾಸರಾವ್ ಅವರು ವಿತರಣೆ ಮಾಡಿದರು.

'ಎಂ.ವಿ ಸೀ. ಕನ್ನಡ ದತ್ತಿನಿಧಿ'ಯ ಉದ್ಘಾಟನೆ

9–9–92 ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪ್ರತಿಷ್ಠಾನ, ಪರಿಷತ್ತು ಮತ್ತು ಶಕ್ತಿಕೇಂದ್ರಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಗೊ. ರು. ಚನ್ನಬಸಪ್ಪ ಅವರು ದತ್ತಿಯನ್ನು ಉದ್ಘಾಟನೆ ಮಾಡಿದರು. 'ಕನ್ನಡ ಜಾಗೃತಿಯ ಅವಶ್ಯಕತೆ' ಎಂಬ ವಿಷಯದಲ್ಲಿ ಡಾ|| ಎಂ. ಚಿದಾನಂದ ಮೂರ್ತಿ ಅವರು ಮೊದಲ ಉಪನ್ಯಾಸ ನೀಡಿದರು. ಡಿ|| ಎಂ. ವಿ. ಸೀ. ಅವರ ಕನ್ನಡ ಪರ ಹೋರಾಟದ, ಕನ್ನಡ ಜಾಗೃತಿಯ ಸ್ಫೂರ್ತಿಯಾಗಿದ್ದುದರ ನೆನಪಿಗಾಗಿ ಪ್ರತಿವರ್ಷ ಇದೇ ದಿನ ಕನ್ನಡ ಜಾಗೃತಿಗೆ ಸಂಬಂಧಿಸಿದಂತೆ ಒಂದೊಂದು ಉಪನ್ಯಾಸ ನಡೆಸುವ ಉದ್ದೇಶದಿಂದ ಎಂ. ವಿ. ಸೀ. ಸಂಸ್ಮರಣ ಸಮಿತಿ ಮತ್ತು ಕನ್ನಡ ಕಾರ್ಯಕರ್ತರು, ಅಭಿಮಾನಿಗಳು ಪ್ರತಿಷ್ಠಾನಕ್ಕೆ ನೀಡುತ್ತಿರುವ 10,000 ರೂ.ಗಳ ದತ್ತಿ ಇದು.

ಇದೇ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನೊಂದಿಗೆ ಹಿರಿಯೂರು ಸತ್ಯನಾರಾಯಣ, ಬಿ. ನರಸಪ್ಪ ಅವರುಗಳಿಂದ ಕನ್ನಡ ಭಾವಗೀತಗಳ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಲಾಗಿತ್ತು.

ಶಂ.ಬಾ ಕೃತಿ ಸಮೀಕ್ಷೆ ಮತ್ತು ಹಸ್ತಪ್ರತಿಶಾಸ್ತ್ರ ಪರಿಚಯ ಬಿಡುಗಡೆ

ಪ್ರತಿಷ್ಠಾನ ಮತ್ತು ಶಂ. ಬಾ. ಸಂಸ್ಮರಣ ಸಮಿತಿಗಳು ಕೂಡಿ ವರ್ಷಪೂರ್ತಿ ನಡೆಸಿದ ಉಪನ್ಯಾಸಗಳ ಸಂಗ್ರಹ 'ಶಂಬಾ ಕೃತಿ ಸಮೀಕ್ಷೆ'ಯನ್ನು ಮಲ್ಲೇಪುರಂ ಜಿ. ವೆಂಕಟೇಶ ಅವರ ಸಂಪಾದಕತ್ವದಲ್ಲಿ ಪ್ರತಿಷ್ಠಾನ ಪ್ರಕಟಿಸಿ 28–9–92 ರ ಕಾರ್ಯಕ್ರಮದಲ್ಲಿ ಡಾ|| ಎಂ. ಚಿದಾನಂದ ಮೂರ್ತಿ ಅವರಿಂದ ಬಿಡುಗಡೆ ಮಾಡಲಾಯಿತು. ಸೀತಾರಾಮ ಜಾಗೀರ್‌ದಾರ್ ಅವರು ಪುಸ್ತಕ ಪರಿಚಯ ಮಾಡಿದರು. ಡಾ|| ಎಂ. ಎಂ. ಕಲಬುರ್ಗಿಯವರು ಸಂಸ್ಮರಣೆಯ ಸಮಾರೋಪ ಭಾಷಣ ಮಾಡಿದರು. ಶಂಬಾ ಸಮಿತಿ, ಪರಿಷತ್ತು ಮತ್ತು ಪ್ರತಿಷ್ಠಾನಗಳು ಕೂಡಿ ಕಾರ್ಯಕ್ರಮ ವ್ಯವಸ್ಥೆ ಮಾಡಿದ್ದವು. ಬಿ. ಎಂ. ಶ್ರೀ. ಪ್ರತಿಷ್ಠಾನದ ಕಾರ್ಯಸಮಿತಿ ಸಭೆಯಲ್ಲಿ ಪ್ರೊ|| ಎಲ್. ಎಸ್. ಶೇಷಗಿರಿರಾವ್ ಅವರು ದಶಮಾನೋತ್ಸವ ಕೃತಿ ಮಾಲೆಯ ಐದನೆಯ ಪುಸ್ತಕ ಶ್ರೀ ಬಿ. ಎಸ್. ಸಣ್ಣಯ್ಯ ಅವರ 'ಹಸ್ತಪ್ರತಿ ಶಾಸ್ತ್ರ ಪರಿಚಯ' ಪುಸ್ತಕವನ್ನು ಬಿಡುಗಡೆ ಮಾಡಿದರು.

ಗೋಕಾಕ್ ತಿಂಗಳ ನೆನಪು

ಪ್ರತಿಷ್ಠಾನ ನಡೆಸುತ್ತಿರುವ ಈ ವಿಶಿಷ್ಟ ಉಪನ್ಯಾಸ ಮಾಲೆಯಲ್ಲಿ ಈ ಅವಧಿಯಲ್ಲಿ ಐದು ಉಪನ್ಯಾಸಗಳು ನಡೆದಿವೆ. 28–7–92 ರಂದು ಎ. ಆರ್. ಕೃ. ಸಂಸ್ಕೃತಿ ಪೀಠದಲ್ಲಿ ಶ್ರೀ ದೊಡ್ಡರಂಗೇಗೌಡ ಅವರು, 28–8–92 ರಂದು

ದೊಡ್ಡಬಳ್ಳಾಪುರದ ಕೊಂಗಾಡಿಯಪ್ಪ ಕಾಲೇಜಿನಲ್ಲಿ ಬಿ. ಎಸ್. ರಾಮಪ್ರಸಾದ್ ಅವರು ಉಪನ್ಯಾಸ ನೀಡಿದ್ದಾರೆ. ಇದೇ ಸಂದರ್ಭದಲ್ಲಿ ಶ್ರೀ ಶ್ರೀರಾವ್ ಅವರಿಂದ ಎಂ. ವಿ. ಸೀ. ಅವರ ಭಾವಗೀತಗಳ ಕಾರ್ಯಕ್ರಮವೂ ಇತ್ತು. 30-9-92 ರಂದು ವಾಸವಿ ಮಹಿಳಾ ಕಾಲೇಜಿನಲ್ಲಿ ಚಿ. ಶ್ರೀನಿವಾಸರಾಜು ಮತ್ತು ಡಾ|| ಶ್ರೀಮತಿ ವಿಜಯಾ ಅವರು, 29-10-92 ರಂದು ಗಾಂಧಿ ಸಾಹಿತ್ಯ ಸಂಘದಲ್ಲಿ ಡಾ|| ಜಿ. ಎಸ್. ದೀಕ್ಷಿತ್ ಅವರ ಅಧ್ಯಕ್ಷತೆಯಲ್ಲಿ ಪ್ರೊ|| ಆರ್. ಜಿ. ಕುಲಕರ್ಣಿ ಅವರು ಗಳು ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ.

ದತ್ತಿ ಉಪನ್ಯಾಸಗಳು : ಎಂ. ಎಚ್. ಕೃಷ್ಣ ಜನ್ಮ ಶತಾಬ್ದಿ

ವೆಂಕಟರಂಗಪ್ಪ ಮತ್ತು ರಾಜರತ್ನಂ ಸ್ಮಾರಕ ದತ್ತಿ ಉಪನ್ಯಾಸವನ್ನು ಶ್ರೀರಾಮಚಂದ್ರದೇವ ಅವರು 25-7-92 ರಂದು 'ಪರ್ಯಾಯ ಸಂಸ್ಕೃತಿ' ವಿಷಯ ಕುರಿತು, 29-7-92 ರಂದು ಚಂದ್ರಶೇಖರಶರ್ಮ ದತ್ತಿ ಉಪನ್ಯಾಸವನ್ನು ದೇವ ಕುಲಕರ್ಣಿ ಅವರು 'ಸಂಜೆಯುವರ ಕಾವ್ಯ' ಕುರಿತು ಮತ್ತು ಬಿ.ಎಂ ಶ್ರೀ. ದತ್ತಿ ಉಪನ್ಯಾಸವನ್ನು ಸಿ. ಓಂಕಾರಪ್ಪ ಅವರು 'ಕಾವ್ಯದಲ್ಲಿ ರಸದ ಸ್ಥಾನ' ಕುರಿತು ನಡೆಸಿಕೊಟ್ಟರು. 19-2-92 ರಂದು ಎಂ. ಎಚ್. ಕೃಷ್ಣ ಜನ್ಮಶತಾಬ್ದಿ ಸ್ಮರಣೆಯ ಅಂಗವಾಗಿ 'ಎಂ.ಎಚ್. ಕೃಷ್ಣ ಅವರ ಜೀವನ ಸಾಧನೆ' ಕುರಿತು ಎಸ್. ಶ್ರೀಕಂಠಯ್ಯ ಸ್ಮಾರಕ ದತ್ತಿ ಉಪನ್ಯಾಸವಾಗಿ ಶ್ರೀ ಕೆ. ಜಿ. ನಾಗರಾಜನ್ ಅವರು ನೀಡಿದರು. ಶ್ರೀ ಸಿಟ್ಟ್ಯಾರು ಶ್ರೀನಿವಾಸರಾವ್ ಅವರ ಅಧ್ಯಕ್ಷತೆಯಲ್ಲಿ ಡಾ|| ಕೆ. ಎಂ. ಕೃಷ್ಣ ರಾವ್ ಅವರು ಕೃಷ್ಣ ಅವರ ಭಾವಚಿತ್ರವನ್ನು ಅನಾವರಣ ಮಾಡಿದರು. ಈ ಭಾವಚಿತ್ರವನ್ನು ಶ್ರೀ ಕೆ. ಜಿ. ನಾಗರಾಜನ್ ಅವರು ಪ್ರತಿಷ್ಠಾನಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

ಹಸ್ತಪ್ರತಿಶಾಸ್ತ್ರ ತರಗತಿ

ಮೂರನೇ ತಂಡದ ತರಗತಿಗಳನ್ನು ನವೆಂಬರ್‌ನಿಂದ ಆರಂಭಿಸಲಾಗಿದೆ. ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಎಸ್. ಬಸವಾರಾಧ್ಯ ಅವರು ಔಪಚಾರಿಕವಾಗಿ ಉದ್ಘಾಟಿಸಿದರು. ಈ ತರಗತಿಗಳಿಗಾಗಿ ಮೂರು ವಿಶೇಷ ಉಪನ್ಯಾಸಗಳನ್ನು ನಡೆಸಲಾಯಿತು. 22-8-92 ರಂದು ಪ್ರೊ|| ಸಿ. ಮಹಾದೇವಪ್ಪ ಅವರು, 5-12-92 ರಂದು ಪ್ರೊ|| ಗಗೇಶ್ವರಿ ವೆಂಕಟಸುಬ್ಬಯ್ಯ ಅವರು ಮತ್ತು 8-1-92ರಂದು, ಡಾ|| ಟಿ ವಿ. ವೆಂಕಟಾಚಲಶಾಸ್ತ್ರಿ ಅವರು ಉಪನ್ಯಾಸಗಳನ್ನು ನೀಡಿದರು.

ಸಹೃದಯ ಗೋಷ್ಠಿ ಉಪನ್ಯಾಸ

ನೂತನ ಸಹೃದಯ ಗೋಷ್ಠಿ ಸಂಚಾಲಕರಾಗಿ ಆಯ್ಕೆಯಾಗಿರುವ ಶ್ರೀ

ಕೆ. ಎಸ್. ಮಧುಸೂದನ ಅವರು ದಿನಾಂಕ 17-12-92 ರಂದು ಡಾ|| ಕೆ. ಎಲ್. ಗೋಪಾಲಕೃಷ್ಣಯ್ಯ ಅವರಿಂದ ಗೋಕಾಕರ ಕಾವ್ಯ ಪ್ರತೀಕಗಳನ್ನು ಕುರಿತು ಉಪನ್ಯಾಸವನ್ನು ನಡೆಸಿಕೊಟ್ಟರು.

ಅಭಿನಂದನೆ

ಸಿಂಪಿ ಲಿಂಗಣ್ಣ : ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು

ಜನಪದ ಸಾಹಿತ್ಯಕ್ಕೇ ತಮ್ಮನ್ನು ಮೀಸಲಿಟ್ಟುಕೊಂಡಿರುವ ಸಿಂಪಿ ಲಿಂಗಣ್ಣ ಎಂಬತ್ತಾರು ವರ್ಷಗಳನ್ನು ಕಳೆದಿದ್ದಾರೆ. ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಚಡಚಣದಲ್ಲಿ ಹುಟ್ಟಿ ಅಲ್ಲೆ ತಮ್ಮ ಕಾರ್ಯಕ್ಷೇತ್ರವನ್ನು ಮಾಡಿಕೊಂಡು 'ಹಲಸಂಗಿ ಗೆಳೆಯರ ಬಳಗ' ಕಟ್ಟಿ ಆ ಮೂಲಕ ಜಾನಪದ ಸಾಹಿತ್ಯವನ್ನು ಸಂಗ್ರಹಿಸುತ್ತ, ಪ್ರದರ್ಶಿಸುತ್ತ ಬಂದಿದ್ದಾರೆ. ಜನಪದ ಸಾಹಿತ್ಯದ ಅಧ್ಯಯನ ಅಷ್ಟಾಗಿ ಇಲ್ಲದಿದ್ದ ಕಾಲದಲ್ಲಿ ಅದರ ಬಗ್ಗೆ ಮನಸ್ಸಿಟ್ಟ ಸಿಂಪಿ ಅವರ ಸಾಧನೆ ಮಹತ್ತರವಾದದ್ದು. ಇಂದು ಜನಪದ ಸಾಹಿತ್ಯ ಒಂದು ಪ್ರತ್ಯೇಕ ಅಧ್ಯಯನ ಶಾಖೆಯಾಗಿ ಬೆಳೆಯುವುದರ ಹಿಂದೆ ಸಿಂಪಿಯಂಥವರ ಅಪಾರ ಕೊಡುಗೆಯಿರುವುದನ್ನು ಅಲ್ಲಗಳೆಯುವಂತಿಲ್ಲ. ಸುಮಾರು ಒಂದು ನೂರು ಕೃತಿಗಳನ್ನು ಬರೆದಿರುವ ಸಿಂಪಿ ಅವರನ್ನು 62ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ಸೂಕ್ತವಾದುದಾಗಿದೆ. ಕಲ್ಬುರ್ಗಿ ವಿ. ವಿ. ದಿಂದ ಗೌರವ ಡಾಕ್ಟರೇಟ್ ಪಡೆದಿರುವ, 'ಅತ್ಯುತ್ತಮ ಶಿಕ್ಷಕ' ಎಂಬ ರಾಷ್ಟ್ರ ಪ್ರಶಸ್ತಿ ಪಡೆದಿರುವ, ಪ್ರತಿಷ್ಠಾನದ ಗೌರವ ಸದಸ್ಯರೂ ಆಗಿರುವ ಸಿಂಪಿ ಅವರಿಗೆ ಈ ಸಂದರ್ಭದಲ್ಲಿ ಪ್ರತಿಷ್ಠಾನ ಮನಃಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

* * * *

ಎಸ್. ವಿ. ಪರಮೇಶ್ವರ ಭಟ್ಟ, ತ. ಸು. ಶಾಮರಾವ್, ಜಿ. ಎಸ್. ಗಾಯಿ, ಜಿ. ಎಸ್. ದೀಕ್ಷಿತ್ ಅವರಿಗೆ ಪ್ರತಿಷ್ಠಾನದ ಗೌರವ ಸದಸ್ಯತ್ವ :

ಬಿ. ಎಂ. ಶ್ರೀ. ಪ್ರತಿಷ್ಠಾನ ಹತ್ತು ಜನರನ್ನು ಗೌರವ ಸದಸ್ಯರನ್ನಾಗಿ ಸ್ವೀಕರಿಸುವ ಪರಂಪರೆಯನ್ನು ಅನುಸರಿಸುತ್ತಿದೆ. ವಿದ್ವಾನ್ ಸೇಡಿಯಾಪು

ಕೃಷ್ಣಭಟ್ಟ, ಡಾ|| ಕುವೆಂಪು, ಪ್ರೊ|| ಎ. ಎನ್. ಮೂರ್ತಿರಾವ್, ಡಾ|| ಪು. ತಿ. ನ., ಡಾ|| ರಂ. ಶ್ರೀ ಮುಗಳಿ ಅವರುಗಳೊಂದಿಗೆ ಈಚೆಗೆ ತೆರವಾಗಿದ್ದ ಸ್ಥಾನಗಳಿಗಾಗಿ ಪ್ರೊ|| ಎಸ್. ವಿ. ಪರಮೇಶ್ವರ ಭಟ್ಟ, ಪ್ರೊ|| ತ. ಸು. ಶಾಮರಾವ್, ಡಾ|| ಜಿ. ಎಸ್. ಗಾಯಿ, ಪ್ರೊ|| ಜಿ. ಎಸ್. ದೀಕ್ಷಿತ್ ಮತ್ತು ಶ್ರೀ ಸಿಂಪಿ ಲಿಂಗಣ್ಣ ಅವರುಗಳನ್ನೂ ಪ್ರತಿಷ್ಠಾನದ ಕಾರ್ಯಸಮಿತಿ ಗೌರವ ಸದಸ್ಯರನ್ನಾಗಿ ಸ್ವೀಕರಿಸಿದೆ. ಸದಸ್ಯತ್ವವನ್ನು ಒಪ್ಪಿಕೊಂಡಿರುವ ಈ ಎಲ್ಲ ಮಹನೀಯರಿಗೂ ಪ್ರತಿಷ್ಠಾನ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಕೇಂದ್ರ ಸಾಹಿತ್ಯ ಅಕಡೆಮಿ ಪ್ರಶಸ್ತಿ

೧೯೯೨ನೇ ಸಾಲಿನ ಕೇಂದ್ರ ಸಾಹಿತ್ಯ ಅಕಡೆಮಿ ಪ್ರಶಸ್ತಿಯು ಕನ್ನಡದ ಖ್ಯಾತ ಕವಿ, ಸು. ರಂ. ಎಕ್ಕುಂಡಿ ಅವರ 'ಬಕುಲದ ಹೂವುಗಳು' ಕೃತಿಗೆ ಲಭಿಸಿದೆ. ಎಕ್ಕುಂಡಿ ಅವರು ಕನ್ನಡದಲ್ಲಿ ಕಥನ ಕವನಗಳಿಗೆ ತಮ್ಮದೇ ಆದ ಕೊಡುಗೆಯನ್ನು ಸಲ್ಲಿಸಿದ್ದಾರೆ. ತೀಕ್ಷ್ಣ ಸಂವೇದನೆಯು, ಪೌರಾಣಿಕ ಕಲ್ಪನೆಗಳನ್ನು ಆಧುನಿಕ ಬದುಕಿಗೆ ಕನ್ನಡಿ ಹಿಡಿದು ತೋರಿಸುವ ವಿಶಿಷ್ಟ ರೀತಿಯು ಕಥಾನಕದ ಮೂಲಕ ಎಕ್ಕುಂಡಿ ಅವರು ಕಾವ್ಯಕ್ಷೇತ್ರದಲ್ಲಿ ಗಟ್ಟಿಸ್ಥಾನವನ್ನು ಗಳಿಸಿದ್ದಾರೆ. ಹೆಚ್ಚು ಪ್ರಚಾರಕ್ಕೆ ಒಳಗಾಗದೆ ತಮ್ಮ ಪಾಡಿಗೆ ತಾವು ಇದ್ದುಬಿಡುವ ಪ್ರವೃತ್ತಿಯ ಎಕ್ಕುಂಡಿ ಅವರಿಗೆ ಈ ಬಾರಿಯ ಪ್ರಶಸ್ತಿ ಲಭ್ಯವಾಗಿರುವುದು ಸಂತಸದ ಸಂಗತಿಯಾಗಿದೆ.

ಈ ಎಲ್ಲ ಮಹನೀಯರಿಗೆ ಪ್ರತಿಷ್ಠಾನ ತನ್ನ ಅಭಿನಂದನೆಗಳನ್ನು ಸಮರ್ಪಿಸುತ್ತದೆ.

ಶ್ರದ್ಧಾಂಜಲಿ

ಹಿ. ಮ. ನಾಗಯ್ಯ

ಪತ್ರಕರ್ತರಾಗಿ, ಕವಿ-ಸಾಹಿತಿಯಾಗಿ ಕನ್ನಡ ಜನತೆಗೆ ಚಿರಪರಿಚಿತರಾಗಿದ್ದ ಹಿ.ಮ. ನಾಗಯ್ಯ 25-7-92 ರಂದು ದೈವಾಧೀನರಾದರು. ಸ್ನೇಹಶೀಲರೂ, ಮಿತಭಾಷಿಗಳೂ, ಸಜ್ಜನರೂ ಆಗಿದ್ದ ದಿವಂಗತರು ಜಯನಗರ ಕ್ಷೇತ್ರದಿಂದ ಆಯ್ಕೆಯಾಗಿ ಹಲವು ವರ್ಷಗಳು ಬೆಂಗಳೂರು ನಗರ ಮಹಾಪಾಲಿಕೆಯ ಸದಸ್ಯರಾಗಿ ಸ್ಥಾಯಿಸಮಿತಿ

ಗಳ ಅಧ್ಯಕ್ಷರಾಗಿ ಬೆಂಗಳೂರು ನಾಗರಿಕರಿಗೆ ಹಲವು ರೀತಿಯಲ್ಲಿ ನಾಗರಿಕ ಸೌಲಭ್ಯ ಒದಗಿಸಿದ್ದರು. ಪ್ರತಿಷ್ಠಾನಕ್ಕೆ ನಿವೇಶನ ಕೊಡಿಸುವಲ್ಲಿಯೂ ದಿವಂಗತರು ಶ್ರಮಿಸಿದ್ದರು. ಕೊನೆದಿನಗಳ ವರೆಗೂ ಆ ಬಗ್ಗೆ ಪ್ರಯತ್ನಿಸುತ್ತಲೇ ಇದ್ದರು. ಹಿ.ಮ.ನಾ. ಅವರು ಹಲವಾರು ಕವನ ಸಂಕಲನಗಳನ್ನು, ಒಂದು ಮಹಾಕಾವ್ಯವನ್ನು ರಚಿಸಿದ್ದಾರೆ. ಹಿ. ಮ. ನಾ. ಅವರ ನಿಧನದಿಂದ ಕನ್ನಡಕ್ಕೆ ಅಪಾರ ನಷ್ಟವಾಗಿದೆ.

ಎಸ್. ಅನಂತನಾರಾಯಣ

ಸದಾ ನಗುಮೊಗದ, ಉತ್ಸಾಹಶೀಲತೆಯುಳ್ಳ ಸರಳ ಉಡುಪಿನ, ಸರಳತನದ ಪ್ರೊ|| ಎಸ್. ಅನಂತನಾರಾಯಣ ಇಂಗ್ಲಿಷ್ ಪ್ರಾಧ್ಯಾಪಕರು ಎಂದರೆ ಎಂಥವರಿಗೂ ಆಶ್ಚರ್ಯವಾಗುತ್ತಿತ್ತು. ಠಾಕು–ಠೀಕಾಗಿರುತ್ತಿದ್ದ ಇಂಗ್ಲಿಷ್ ಪ್ರಾಧ್ಯಾಪಕರ ನಡುವೆ ಅನಂತನಾರಾಯಣ ಅಪವಾದವೆನಿಸಿದ್ದರು. ವಿದ್ಯಾರ್ಥಿಗಳ ಮೆಚ್ಚುಗೆಯಲ್ಲಿ ಅದ್ವಿತೀಯರೆನಿಸಿದ್ದರು. ಕನ್ನಡ ಇಂಗ್ಲಿಷ್ ಎರಡರಲ್ಲೂ ಅಪಾರ ಪಾಂಡಿತ್ಯ ಸಾಧಿಸಿದ್ದರು. ಕುವೆಂಪು ವಿ. ವಿ., ಮಂಗಳೂರು ವಿಶ್ವವಿದ್ಯಾಲಯಗಳಲ್ಲಿ ಗೌರವ ಪ್ರಾಧ್ಯಾಪಕರಾಗಿದ್ದರು. ತಮ್ಮ ಮನೆಯನ್ನೇ ಒಂದು ಆಕರ ಗ್ರಂಥಾಲಯವಾಗಿ ಪರಿವರ್ತಿಸಿ ಹಲವರಿಗೆ ಹಲವಾರು ರೀತಿಯಲ್ಲಿ ನೆರವಾಗುತ್ತಿದ್ದರು. ಅವರ 'ಹೊಸ ಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ' ಎಂದಿಗೂ ಗಟ್ಟಿಯಾಗಿ ನಿಲ್ಲುವಂಥದ್ದಾಗಿದೆ. 'ಗಂಗಾತರಂಗ'ದ ಮೂಲಕ ಹಲವಾರು ಕೃತಿಗಳನ್ನು ಬರೆದಿರುವ ಎಸ್. ಅನಂತನಾರಾಯಣ ಅವರು 25–8–92 ರಂದು ನಮ್ಮನ್ನಗಲಿದರು.

ಎಂ. ಟಿ. ವಿ. ಆಚಾರ್ಯ

ಕರ್ನಾಟಕದ ಪ್ರಮುಖ ಚಿತ್ರಕಲಾವಿದರಲ್ಲಿ ಒಬ್ಬರಾದ ಶ್ರೀ ಎಂ. ಟಿ. ವಿ. ಆಚಾರ್ಯ ಅವರು ಬೆಂಗಳೂರಿನ ಗಾಂಧಿನಗರದ 'ಆಚಾರ್ಯ ಕಲಾ ಶಾಲೆಯ' ಸಂಸ್ಥಾಪಕರು. ,ನವೋದಯ ಪಂಥದ ಕಲಾಶೈಲಿಯ ಪ್ರಮುಖ ಹೆಸರಾಗಿದ್ದ ಆಚಾರ್ಯ ಅವರು ಚಂದಮಾಮ ಪತ್ರಿಕೆಯ ಜನಪ್ರಿಯ ಕಲಾವಿದರಾಗಿ ಮಹಾಭಾರತವನ್ನು ತಮ್ಮ ಕಲೆಯ ಮೂಲಕ ಜೀವಂತವಾಗಿಸಿದ್ದಾರೆ. ನಿಸರ್ಗಸೌಂದರ್ಯ, ಜೀವನ ಮೌಲ್ಯಗಳನ್ನು ಕುರಿತ ಉತ್ತಮ ಚಿತ್ರಕಾರರಾಗಿದ್ದ ಆಚಾರ್ಯರು ಹಲವಾರು ಶಿಷ್ಯರನ್ನು ತಯಾರಿಸಿದ್ದಾರೆ. 7–9–92 ರಂದು ಬೆಳಗಿನ ಜಾವ ಹೃದಯಾಘಾತದಿಂದ ಚಿತ್ರ ಪ್ರಪಂಚವನ್ನು ಬಿಟ್ಟುಹೋದ ಎಂ. ಟಿ. ವಿ. ಆಚಾರ್ಯರ ಕಲಾಸೇವೆ ಅನನ್ಯವಾದದ್ದು. ಕಳೆದ ಎರಡು ವರ್ಷಗಳ ಹಿಂದೆ ದಿವಂಗತ ಎಂ. ವಿ. ಸೀತಾರಾಮಯ್ಯನವರ ಸಂತಾಪ ಸೂಚಕ ಸಭೆಯಲ್ಲಿ ಸೀತಾರಾಮಯ್ಯನವರೊಂದಿಗೆ ತಮ್ಮನ್ನು ಹೋಲಿಸಿಕೊಂಡು ಲವಲವಿಕೆ, ಜೀವನೋತ್ಸಾಹದಿಂದ ಮಾತಾಡು

ತ್ತಿದ್ದವರು ಅತ್ಯಲ್ಪ ಕಾಲದಲ್ಲೇ ನಿಧನದ ಮೂಲಕವೂ ಹೋಲಿಕೆಯಾದದ್ದು ಆಶ್ಚರ್ಯವೆನಿಸಿದೆ.

ಡಾ|| ಎಂ. ಗೋಪಾಲಕೃಷ್ಣ ಅಡಿಗ

ಕನ್ನಡ ನವ್ಯ ಸಾಹಿತ್ಯದ ಪ್ರವರ್ತಕ ಡಾ|| ಎಂ. ಗೋಪಾಲಕೃಷ್ಣ ಅಡಿಗರು 4-11-92 ರಂದು ನಮ್ಮನ್ನಗಲಿದರು. 'ಅಡಿಗರ ಮಾರ್ಗ'ವೊಂದನ್ನು ಕನ್ನಡ ಸಾಹಿತ್ಯದಲ್ಲಿ ಸೃಷ್ಟಿಸಿ ಬಿಟ್ಟು ಹೋಗಿರುವ ದಿವಂಗತರ ಕಾವ್ಯ ಪ್ರತಿಭೆ ಅಸಾಧಾರಣವಾದದ್ದು. ಕಟ್ಟುವೆವು ನಾವು, ಭೂಮಿಗೀತ, ವರ್ಧಮಾನ ಮುಂತಾದ ಕವನ ಸಂಕಲನಗಳ ಮೂಲಕ, ಹೊಸ ಚಿಂತನಸ್ವರೂಪವನ್ನು ಕನ್ನಡಕ್ಕೆ ನೀಡಿ ಕನ್ನಡ ಕಾವ್ಯಕ್ಷೇತ್ರವನ್ನು ಧ್ವನಿಪೂರ್ಣಗೊಳಿಸಿದ್ದರು. ರಾಜ್ಯ-ರಾಷ್ಟ್ರ ಪ್ರಶಸ್ತಿಗಳು ಹಲವು ಅಡಿಗರನ್ನು ಹುಡುಕಿಕೊಂಡು ಬಂದಿದ್ದವು. ಗದ್ಯವಾಗಲಿ-ಪದ್ಯವಾಗಲಿ ಅಡಿಗರ ಚಿಂತನೆ ವೈಶಿಷ್ಟ್ಯಪೂರ್ಣವಾದದ್ದು. ಅಡಿಗರ ನಿಧನದಿಂದ ಕನ್ನಡ ಸಾರಸ್ವತ ಲೋಕ ಕೀರ್ತಿವಂತ ಕವಿಯೊಬ್ಬನನ್ನು ಕಳೆದುಕೊಂಡಂತಾಗಿದೆ.

ಡಾ|| ಪೋಲಂಕಿ ರಾಮಮೂರ್ತಿ

ಕನ್ನಡದಲ್ಲಿ ನಿರ್ಭೀತ ಹಾಗೂ ದಿಟ್ಟ ವಿಮರ್ಶೆಗೆ ಹೆಸರಾಗಿದ್ದ ಕನ್ನಡ-ಇಂಗ್ಲಿಷ್ ಸಾಹಿತ್ಯಗಳಲ್ಲಿ ಅಪಾರ ಪರಿಣತಿಹೊಂದಿದ್ದ ಡಾ|| ಪೋಲಂಕಿ ರಾಮಮೂರ್ತಿ ಅವರು 10-11-92 ರಂದು ಸಾವಿನ ವಿಷಯವಾಗಿ ಮಾತಾಡುತ್ತಿದ್ದಾಗಲೇ ಸಾವಿನ ದವಡೆಗೆ ತುತ್ತಾದುದು ಕಾಕತಾಳೀಯವೆನಿಸಿದರೂ ನಿಜ ಸಂಗತಿ. ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ವಿಶಿಷ್ಟ ರೀತಿಯ ವೈಚಾರಿಕತೆಯ ಮೆರಗು ನೀಡಿದ್ದ ದಿವಂಗತರ ಸಾವಿನಿಂದ ಕನ್ನಡ ವಿಮರ್ಶಾ ಕ್ಷೇತ್ರ ಬಡವಾಗಿದೆ.

ಈ ಎಲ್ಲ ದಿವಂಗತರಿಗೆ ಪ್ರತಿಷ್ಠಾನ ತನ್ನ ಆಳವ ದುಃಖವನ್ನು ವ್ಯಕ್ತಪಡಿಸುತ್ತ ಚಿರಶಾಂತಿಯನ್ನು ಕೋರುತ್ತದೆ.

————

ಮಾನ್ಯ ಸದಸ್ಯರಲ್ಲಿ ಮನವಿ

'ಕರ್ನಾಟಕ ಲೋಚನ'ಕ್ಕೆ ಈ ಸಂಚಿಕೆಯೊಂದಿಗೆ ಹತ್ತು ವರ್ಷ ಮುಗಿಯುತ್ತದೆ ಎಂದು ತಿಳಿಸಲು ಸಂತೋಷಿಸುತ್ತೇವೆ. ಪತ್ರಿಕೆ ನೋಂದಣಿಗೆ ಮುಂಚೆ 'ಲೋಚನ' ಹೆಸರಿನಲ್ಲಿ ಐದು ಸಂಪುಟಗಳನ್ನೂ ನೋಂದಣಿ ನಂತರ 'ಕರ್ನಾಟಕ ಲೋಚನ' ಹೆಸರಿನಲ್ಲಿ ಐದು ಸಂಪುಟಗಳನ್ನೂ ಪೂರೈಸಿದೆ.

೧೯೯೩ ರ ಜೂನ್ ಸಂಚಿಕೆಯಿಂದ ೧೧ನೇ ಸಂಪುಟವನ್ನು ಆರಂಭಿಸಲಾಗುವುದು. ಹನ್ನೊಂದನೇ ಸಂಚಿಕೆ ದಶವಾರ್ಷಿಕ ವಿಶೇಷಾಂಕವಾಗಿ ಪ್ರಕಟವಾಗಲಿದೆ.

೧೯೯೩ ರಿಂದ ಹೆಚ್ಚಿರುವ ಮುದ್ರಣದ ಮತ್ತು ಕಾಗದದ ಬೆಲೆಗಳ ಕಾರಣದಿಂದ ಚಂದಾ ದರವನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

ವಾರ್ಷಿಕ ಚಂದಾ :	ವ್ಯಕ್ತಿಗಳಿಗೆ	ರೂ. 15–00
	ಸಂಸ್ಥೆಗಳು, ಗ್ರಂಥಾಲಯುಗಳಿಗೆ	ರೂ. 25–00
ಆಜೀವ ಚಂದಾ :		ರೂ. 100–00

ಈವರೆಗೆ ಚಂದಾ ನವೀಕರಿಸದೆ ಇರುವ ಮಾನ್ಯ ಸದಸ್ಯರು ಪರಿಷ್ಕರಿಸಿರುವ ದರದಂತೆ ದಯಮಾಡಿ ಅದನ್ನು ಬೇಗ ನವೀಕರಿಸುವುದಲ್ಲದೆ ಇನ್ನೂ ಕೆಲವು ಹೊಸ ಸದಸ್ಯರನ್ನು ಮಾಡಿಸಿ ಪತ್ರಿಕೆಯ ಬೆಳವಣಿಗೆಗೆ ನೆರವಾಗಬೇಕಾಗಿ ವಿನಂತಿ.

ಕಾರ್ಯದರ್ಶಿ

ಈ ಸಂಚಿಕೆಯ ಲೇಖಕರು

1. ದೇಶ ಕುಲಕರ್ಣಿ
192, CHBS ಲೇಔಟ್
ಮಾಗಡಿ ರಸ್ತೆ ಕಾರ್ಡ್ ರಸ್ತೆ,
ಬೆಂಗಳೂರು-40.

2. ವೈ. ಸಿ. ಭಾನುಮತಿ
ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ,
ಮೈಸೂರು-6.

3. ಪಿ. ವಿ. ಕೃಷ್ಣಮೂರ್ತಿ
ಜಿ.ಬಿ.ಜಿ, 510, 12ನೇ ತಿರುವು,
ಜವಹರ್ ನಗರ 3ನೇ ಹಂತ,
ಮಾರತ್‌ಹಳ್ಳಿ, ಬೆಂಗಳೂರು-37.

4. ನಳಿನಿ ವೆಂಕಟೇಶ್
14, ರೂಪಾಲಿ ಅಪಾರ್ಟ್‌ಮೆಂಟ್ಸ್
ಕೊತ್ರೊಡ್, ಪುಣೆ-29.

5. ಗೌ. ಮ. ಉಮಾಪತಿ ಶಾಸ್ತ್ರಿ
ಶ್ರೀ ಮಂಜುನಾಥೇಶ್ವರ ಸಂಸ್ಕೃತಿ
ಸಂಶೋಧನ ಪ್ರತಿಷ್ಠಾನ,
ಶ್ರೀಕ್ಷೇತ್ರ, ಧರ್ಮಸ್ಥಳ.

6. ಬಿ. ಆರ್. ನರಸಿಂಹ ಮೂರ್ತಿ
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ, ಬೆಂಗಳೂರು-56.

7. ಡಿ. ವಿ. ಪರಮಶಿವ ಮೂರ್ತಿ
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ, ಬೆಂಗಳೂರು-56.

8. ಕೆ. ಎಸ್. ಮಧುಸೂದನ
ಕನ್ನಡ ಅಧ್ಯಾಪಕ,
ಆಚಾರ್ಯ ಪಾಠಶಾಲಾ ಕಲೆ ಮತ್ತು
ವಾಣಿಜ್ಯ ಸಂಜೆ ಕಾಲೇಜು,
ನರಸಿಂಹರಾಜ ಕಾಲೊನಿ,
ಬೆಂಗಳೂರು-19.

9. ಶ್ರೀಧರ. ಎಚ್. ಜಿ.
ಕನ್ನಡ ವಿಭಾಗ
ವಿವೇಕಾನಂದ ಕಾಲೇಜು,
ಪುತ್ತೂರು, ದ.ಕ. 574203.

10. ಟಿ. ಕೇಶವ ಭಟ್
754, 15ನೇ ಮೇನ್,
2ನೇ ಹಂತ, ಬನಶಂಕರಿ,
ಬೆಂಗಳೂರು-70.

11. ಕೆ. ಬಿ. ಲೋಕೇಶ್ವರಪ್ಪ
ಕನ್ನಡ ಅಧ್ಯಾಪಕ
ಎ.ಪಿ.ಎಸ್ ಕಲೆ ವಿಜ್ಞಾನ
ಕಾಲೇಜು,
ನರಸಿಂಹರಾಜ ಕಾಲೊನಿ
ಬೆಂಗಳೂರು-19.

ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಕಳಿಸಬೇಕು

ಸೃಜನಾತ್ಮಕ ಗ್ರಂಥಗಳನ್ನು ಸಾಧಾರಣವಾಗಿ ವಿಮರ್ಶೆ ಮಾಡಲಾಗುವುದಿಲ್ಲ. ಆದರೆ, ಕಳಿಸಿದರೆ ವೈಶಿಷ್ಟ್ಯವುಳ್ಳ ಅಂಥ ಗ್ರಂಥಗಳನ್ನು ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.

ವಿನಿಮಯ ಪತ್ರಿಕೆಗಳು

1) ಪ್ರಬುದ್ಧ ಕರ್ನಾಟಕ, ಮಾನವಿಕ ಕರ್ನಾಟಕ, ವಿಜ್ಞಾನ ಕರ್ನಾಟಕ. ಮೈಸೂರು. 2) ಸಾಧನೆ, ಬೆಂಗಳೂರು 3) ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ. ಬೆಂಗಳೂರು. 4) ಕರ್ನಾಟಕ ಭಾರತಿ, ದಾರವಾಡ 5) ಗ್ರಂಥಲೋಕ. ಮೈಸೂರು 6) ಅಂಕಣ ಬೆಂಗಳೂರು 8) ಸುಗುಣಮಾಲಾ, ಉಡುಪಿ 9) ಶಂಕರ ಭಾಸ್ಕರ,ಬೆಂಗಳೂರು 10) ಧರ್ಮಪ್ರಭ. ಬೆಂಗಳೂರು 11) ಸತ್ಯಶುದ್ಧ ಕಾಯಕ, ಸಿರಿಗೆರೆ. 12) ಅನ್ವೇಷಣೆ, ಬೆಂಗಳೂರು.

ಕರ್ನಾಟಕ ಲೋಚನ ಚಂದಾ ವಿವರ

ವಾರ್ಷಿಕ ಚಂದಾ : ವ್ಯಕ್ತಿಗಳಿಗೆ: 15-00
ಗ್ರಂಥಾಲಯ, ಸಂಘ ಸಂಸ್ಥೆಗಳಿಗೆ: 25–00
ಆಜೀವ : 100–00

ಪ್ರತಿಷ್ಠಾನದ ಸದಸ್ಯರಿಗೆ ಲೋಚನ ಉಚಿತ

ಪ್ರತಿಷ್ಠಾನದ ಸದಸ್ಯತ್ವ : ವಾರ್ಷಿಕ : 25-00 ಆಜೀವ : 250–00

KARNATAKA LOCHANA Half yearly Journal Published by B.M.Sri. Smaraka Prathishthana 54, 3rd cross, Gavipuram Extn Bangalore-560 019, Printed by Sri Lakshmi Printers Bangalore.

Reg. No. 03260 23/2/ALTC/88 KARNATAKA LOCHANA

ಪ್ರತಿಷ್ಠಾನದ ಈಚಿನ ಪ್ರಕಟನೆಗಳು

1.	ಸಂಗಮರ ಕಾಲದ ವಿಜಯನಗರ		75.00
2.	ಕುಮಾರವ್ಯಾಸ ಭಾರತ ಸಂಗ್ರಹ	ಸಾದಾ ಪ್ರತಿ	40.00
	— ,, —	ಉತ್ತಮ ಪ್ರತಿ	75.00
3.	ಕಾವ್ಯ ಇತಿಹಾಸ (ದತ್ತಿ ಉಪನ್ಯಾಸಗಳು)		10.00
4.	ಶಂಬಾ ಕೃತಿ ಸಮೀಕ್ಷೆ		35.00
5.	ಎಂ. ವಿ. ಸೀ. ಸಂಸ್ಮರಣೆ		25.00
6.	ವೈಚಾರಿಕ ಜಾಗೃತಿ		15.00
7.	ಹಸ್ತಪ್ರತಿಶಾಸ್ತ್ರ ಪರಿಚಯ		15.00
8.	ಸಂವಿಧಾನ ಮತ್ತು ಕಾನೂನು		20.00

ಸಿದ್ಧತೆಯಲ್ಲಿ

1. ಮಾಸ್ತಿ ಕಥಾ ಸಮೀಕ್ಷೆ
2. ಕದಂಬ (ಎಂ. ವಿ. ಸೀ. ಅವರ ಸಮಗ್ರ ಸಂಶೋಧನಾ ಲೇಖನಗಳ ಸಂಪುಟ.)
3. ತೌಲನಿಕ ಸಾಹಿತ್ಯ
4. ಸಾಹಿತ್ಯ ಮತ್ತು ಮನಶ್ಶಾಸ್ತ್ರ
5. ಶಾಸನ ಪಠ್ಯ